₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 10.05.2025 ಸಂಪುಟ: 10 ಸಂಚಿಕೆ: 116 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಲೇ! ಸುದರ್ಶನ ಚಕ್ರ (ಎಸ್-400)

ಪ್ರಧಾನಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ

ತಕ್ಕ ಪ್ರತ್ಯುತ್ತರಕ್ಕೆ ಸೇನೆಗೆ ಪರಮಾಧಿಕಾರ

ಯುದ್ಧ ಇನ್ನಷ್ಟು ಉಗ್ರ

- ಕರಾಚಿಯಿಂದ ಇಸ್ಲಾಮಾಬಾದ್‌ವರೆಗೂ ಡ್ರೋನ್ ಸುರಿಮಳೆ
- ನಾಲ್ಕು ರಾಜ್ಯ, 24 ನಗರಗಳ ಮೇಲಿನ ಡ್ರೋನ್ ದಾಳಿ ವಿಫಲ
- ಕರಾಚಿ ಬಂದರು ಮೇಲೆ ಐಎನ್‌ಎಸ್ ವಿಕ್ರಾಂತ ರಣಾರ್ಭಟ
- ಪ್ರತ್ಯೇಕ ಧ್ವಜ ಹಾರಿಸಿ ಸ್ವಾತಂತ್ರ್ಯ ಘೋಷಿಸಿಕೊಂಡ ಬಿಎಲ್‌ಎ
- ಪೂಂಛ್‌ನಲ್ಲಿ ಶಾಲೆಯ ಮೇಲೆ ದಾಳಿ, ವಿದ್ಯಾರ್ಥಿಗಳಿಬ್ಬರು ಬಲಿ

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಶುಕ್ರವಾರ ನಡೆದ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭದ್ರತಾ ಸಲಹೆಗಾರ ಅಜಿತ್ ದೋವಲ್, ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ತ್ರಿಪಾಠಿ, ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಮತ್ತು ರಕ್ಷಣಾ ಕಾರ್ಯದರ್ಶಿ ಆರ್.ಕೆ.ಸಿಂಗ್ ಸೇರಿದಂತೆ ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು.

ದೆಹಲಿ: ಭಾರತ ಹಾಗೂ ಪಾಕಿಸ್ತಾನದ ನಡುವಿನ ಯುದ್ಧ ಉಗ್ರ ರೂಪ ತಾಳಿದ್ದು, ಈ ಮಧ್ಯೆ ಎರಡೂ ದೇಶಗಳ ನಡುವೆ ಉದ್ಭವಿಸಿರುವ ಸಂಘರ್ಷದ ಪರಿಸ್ಥಿತಿಯನ್ನು ಅವಲೋಕಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ದೆಹಲಿಯಲ್ಲಿ ಶುಕ್ರವಾರ ಮೂರೂ ಸೇನಾ ಪಡೆಗಳ ಮುಖ್ಯಸ್ಥರೊಂದಿಗೆ ಸುಮಾರು ಮೂರು ಗಂಟೆಗಳ ಕಾಲ ಮ್ಯಾರಥಾನ್ ಸಭೆ ನಡೆಸಿದ್ದಾರೆ. ಪಾಕಿಸ್ತಾನದ ದಾಳಿ ಮುಂದುವರಿದರೆ ನಿರ್ಣಾಯಕ ಸಮರ ಸಾರುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ ಎಂದು ತಿಳಿದುಬಂದಿದೆ.

ಗಡಿ ರಾಜ್ಯದ ಮುಖ್ಯಮಂತ್ರಿಗಳ ಜತೆಗೂ ಪ್ರಧಾನಿ ಮೋದಿ ಸಭೆ ನಡೆಸಿದರು. ಗೃಹ ಸಚಿವ ಅಮಿತ್ ಶಾ ಅವರು ಅರೆಸೇನಾ ಪಡೆಗಳ ಮುಖ್ಯಸ್ಥರ ಜತೆ ಸಭೆ ನಡೆಸಿ ಸೇನೆಗೆ ಬೆಂಗಾವಲು ನೀಡಲು ಸಿದ್ಧರಾಗಿರುವಂತೆ ಸೂಚಿಸಿದ್ದಾರೆ. ಇದೇ ವೇಳೆ ಪಾಕಿಸ್ತಾನ ಶುಕ್ರವಾರ ರಾತ್ರಿಯೂ ಡ್ರೋನ್ ಮತ್ತು ಕ್ಷಿಪಣಿ ದಾಳಿ ಮುಂದುವರಿಸಿದ್ದು ಭಾರತ ಅದನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿದೆ. ಸುಮಾರು 400 ಡ್ರೋನ್‌ಗಳನ್ನು ಯಶಸ್ವಿಯಾಗಿ ಹೊಡೆದುರುಳಿಸಲಾಗಿದೆ. ದೇಶದ ಅಖಂಡತೆಯನ್ನು ರಕ್ಷಿಸಲು ನಾವು ಬದ್ಧರಾಗಿದ್ದೇವೆ ಎಂದು ಸೇನೆ ತಿಳಿಸಿದೆ.

ಪಾಕ್‌ನ 400 ಡ್ರೋನ್ ಉಡೀಸ್

ಪಾಕಿಸ್ತಾನವು ಡ್ರೋನ್‌ಗಳು ಮತ್ತು ಕ್ಷಿಪಣಿಗಳೊಂದಿಗೆ ಜಮ್ಮು, ಪಠಾಣ್‌ಕೋಟ್, ಜೈಸಲ್ಮೇರ್ ಸೇರಿದಂತೆ ಹಲವಾರು ಪ್ರದೇಶಗಳ ಮೇಲೆ ದಾಳಿ ಮಾಡಲು ಪ್ರಯತ್ನಿಸಿತು. ಆದರೆ ಭಾರತದ ಎಸ್-400 ರಕ್ಷಣಾ ವ್ಯವಸ್ಥೆಯಿಂದ ಅದು ಸಂಪೂರ್ಣವಾಗಿ ವಿಫಲವಾಯಿತು. ಗುರುವಾರ ರಾತ್ರಿ 8-10 ಗಂಟೆಯ ನಡುವೆ ಪಾಕಿಸ್ತಾನವು ಯುದ್ಧ ವಿಮಾನ, ಡ್ರೋನ್, ರಾಕೆಟ್ ಮತ್ತು ಕ್ಷಿಪಣಿಗಳನ್ನು ಬಳಸಿ ಜಮ್ಮು, ಪಠಾಣ್‌ಕೋಟ್, ಫಿರೋಜ್‌ಪುರ, ಕಪುರ್ತಲಾ, ಜಲಂಧರ್ ಮತ್ತು ಜೈಸಲ್ಮೇರ್‌ಗಳಲ್ಲಿನ ಸೇನಾ ನೆಲೆಗಳು ಮತ್ತು ಶಸ್ತ್ರಾಸ್ತ್ರ ಕೇಂದ್ರಗಳ ಮೇಲೆ ದಾಳಿಗೆ ಯತ್ನಿಸಿತ್ತು. ಪಾಕಿಸ್ತಾನದ ರಾಡಾರ್ ವ್ಯವಸ್ಥೆಯನ್ನು ನಾಶಪಡಿಸುವ ಮೂಲಕ ಭಾರತ ಪ್ರತೀಕಾರ ತೀರಿಸಿಕೊಂಡಿದೆ.

ಸಂಘರ್ಷ ತಗ್ಗಿಸಲ್ಲ: ಪಾಕ್

ಭಾರತದ ಜತೆಗಿನ ಸಂಘರ್ಷವನ್ನು ತಗ್ಗಿಸುವುದಿಲ್ಲ ಎಂದು ಪಾಕಿಸ್ತಾನ ಸೇನೆಯ ವಕ್ತಾರರು ತಿಳಿಸಿದ್ದಾರೆ. ಭಾರತದ ಮೇಲೆ ಕ್ಷಿಪಣಿ, ಆರ್ಟಿಲರಿ, ಡ್ರೋನ್ ದಾಳಿ ಬಳಿಕ ಈ ಹೇಳಿಕೆ ನೀಡಿದ್ದಾರೆ. ಸಂಘರ್ಷ ತಗ್ಗಿಸುವ ಇರಾದೆ ಹೊಂದಿಲ್ಲ. ಭಾರತವು ನಮಗೆ ಯಾವ ರೀತಿ ಹಾನಿ ಮಾಡಿದೆಯೋ, ಅದೇ ರೀತಿ ನಾವು ಕೂಡ ಮಾಡಲಿದ್ದೇವೆ. ಇದುವರೆಗೂ ನಾವು ನಮ್ಮನ್ನು ರಕ್ಷಿಸಿದ್ದೇವೆ. ಅವರಿಗೆ ಸರಿಯಾದ ಸಮಯದಲ್ಲಿ ಉತ್ತರ ಸಿಗಲಿದೆ ಎಂದು ಸೇನಾ ವಕ್ತಾರ ಅಹ್ಮದ್ ಷರೀಫ್ ಚೌಧರಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಇನ್ನೊಂದೆಡೆ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಭಾರತದ ವಿರುದ್ಧ ದಾಳಿಯನ್ನು ತೀವ್ರಗೊಳಿಸುವುದರ ಪರ ನಾನಿಲ್ಲ ಎಂದು ಹೇಳಿದ್ದಾರೆ.

7 ಉಗ್ರರು ಯಮಪುರಿಗೆ

ಈ ನಡುವೆ ಜಮ್ಮು ಮತ್ತು ಕಾಶ್ಮೀರದ ಸಾಂಬಾ ಸೆಕ್ಟರ್‌ನಲ್ಲಿ ಭಾರತದೊಳಗೆ ನುಗ್ಗಲು ಯತ್ನಿಸಿದ ಭಯೋತ್ಪಾದಕರ ಪ್ರಯತ್ನವನ್ನು ವಿಫಲಗೊಳಿಸಲಾಗಿದೆ. ಏಳು ಉಗ್ರರನ್ನು ಭಾರತದ ಸೈನ್ಯ ಕೊಂದು ಹಾಕಿದೆ. ಗುರುವಾರ ತಡರಾತ್ರಿ ಸಾಂಬಾ ಸೆಕ್ಟರ್‌ನಲ್ಲಿ ಒಳನುಸುಳಲು ಯತ್ನಿಸುತ್ತಿದ್ದ ಉಗ್ರರ ಚಲನವಲನವನ್ನು ಗಮನಿಸಿ ಸೇನೆಯು ಕಾರ್ಯಾಚರಣೆ ಆರಂಭಿಸಿದೆ. ಧಂಧರ್ ಪೋಸ್ಟ್‌ನಿಂದ ಗಡಿಯುದ್ದಕ್ಕೂ ಗುಂಡು ಹಾರಿಸುವ ಮೂಲಕ ಪಾಕಿಸ್ತಾನ ರೇಂಜರ್‌ಗಳು ಭಯೋತ್ಪಾದಕರಿಗೆ ಭಾರತದ ಒಳನುಸುಳಲು ಸಹಾಯ ಮಾಡುತ್ತಿದ್ದರು ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ತಿಳಿಸಿದೆ. ಭಾರತದ ಕಾರ್ಯಾಚರಣೆಯಿಂದಾಗಿ ಪಾಕಿಸ್ತಾನ ಮಿಲಿಟರಿ ಪೋಸ್ಟ್‌ಗೆ ಹಾನಿಯಾಗಿದೆ.

> ಟರ್ಕಿ ನಿರ್ಮಿತ ಡ್ರೋನ್‌ಗಳನ್ನು ಬಳಸಿ 36 ಸ್ಥಳಗಳ ಮೇಲೆ ದಾಳಿ ಮಾಡಲು ಪಾಕಿಸ್ತಾನ ಯತ್ನಿಸಿದೆ. ನಮ್ಮ ಸಶಸ್ತ್ರ ಪಡೆಗಳು ಅವುಗಳಲ್ಲಿ ಹಲವು ಡ್ರೋನ್‌ಗಳನ್ನು ಹೊಡೆದುರುಳಿಸಿವೆ. ಡ್ರೋನ್‌ಗಳ ಅವಶೇಷಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಪ್ರಾಥಮಿಕ ವರದಿಗಳ ಪ್ರಕಾರ ಅವುಗಳು ಟರ್ಕಿಶ್ ಅಸಿಸ್‌ಗಾರ್ಡ್ ಸಾಂಗರ್ ಡ್ರೋನ್‌ಗಳು ಎಂದು ತಿಳಿದು ಬಂದಿದೆ.
>
> **- ಸೋಫಿಯಾ ಖುರೇಷಿ**
> ಭಾರತೀಯ ಸೇನೆಯ ಕರ್ನಲ್

ಟಿಎ ಸಜ್ಜುಗೊಳಿಸಲು ಸೂಚನೆ

ದೇಶದ ಪ್ರಾದೇಶಿಕ ಸೇನೆಯಲ್ಲಿ (ಟಿಎ) ನೋಂದಣಿ ಮಾಡಿಕೊಂಡಿರುವ ಪ್ರತಿಯೊಬ್ಬ ಅಧಿಕಾರಿ ಮತ್ತು ವ್ಯಕ್ತಿಯನ್ನು ಸೇನೆಯ ನೆರವಿಗೆ ಬರುವಂತೆ ಅಥವಾ ಅದಕ್ಕೆ ಪೂರಕವಾಗಿ ಸಜ್ಜುಗೊಳಿಸುವಂತೆ ಕೇಂದ್ರವು ಸೇನಾ ಮುಖ್ಯಸ್ಥರಿಗೆ ಸೂಚನೆ

> ಕರ್ತಾರ್‌ಪುರ ಕಾರಿಡಾರ್ ಅನ್ನು ಮುಂದಿನ ನಿರ್ದೇಶನದವರೆಗೂ ಮುಚ್ಚಲಾಗಿದೆ. ಪಾಕಿಸ್ತಾನ ದಾಳಿಗಳಿಗೆ ಭಾರತೀಯ ಸೇನೆ ತಕ್ಕ ಪ್ರತ್ಯುತ್ತರ ನೀಡುತ್ತಿದ್ದು ಪಾಕ್ ಸುಳ್ಳುಗಳನ್ನು ಹರಡುವ ಮೂಲಕ ಕೋಮು ಗಲಭೆಗೆ ಯತ್ನಿಸುತ್ತಿದೆ. ನಂಕಮ ಗುರುದ್ವಾರದ ಮೇಲೆ ಭಾರತ ಡ್ರೋನ್ ದಾಳಿ ನಡೆಸಿದೆ ಎಂದು ಪಾಕಿಸ್ತಾನ ಸುಳ್ಳು ಹೇಳುತ್ತಿದೆ.
>
> **- ವಿಕ್ರಂ ಮಿಸ್ರಿ**
> ವಿದೇಶಾಂಗ ಕಾರ್ಯದರ್ಶಿ

ಲೈವ್ ವರದಿ ಬೇಡ: ಸೇನೆ

ದೇಶದ ಭದ್ರತಾ ದೃಷ್ಟಿಯಿಂದ ರಕ್ಷಣಾ ಕಾರ್ಯಾಚರಣೆಗಳು ಮತ್ತು ಭದ್ರತಾ ಪಡೆಗಳ ಚಲನವಲನಗಳ ನೇರ ಪ್ರಸಾರವನ್ನು ತೋರಿಸದಂತೆ ಎಲ್ಲ ಮಾಧ್ಯಮಗಳಿಗೆ ಕೇಂದ್ರ ರಕ್ಷಣಾ ಸಚಿವಾಲಯ ಎಚ್ಚರಿಕೆ ನೀಡಿದೆ. ಮಾಧ್ಯಮಗಳು, ಸುದ್ದಿ ವಾಹಿನಿಗಳು ಮತ್ತು ಸಾಮಾಜಿಕ ಮಾಧ್ಯಮಗಳಿಗೆ ಸೂಚನೆ ನೀಡಿರುವ ಸಚಿವಾಲಯ, ಮುಖ್ಯವಾಗಿ ನೇರ ಪ್ರಸಾರ, ರಕ್ಷಣಾ ಕಾರ್ಯಾಚರಣೆಗೆ ಸಂಬಂಧಿಸಿದ ಮೂಲಗಳನ್ನು ಆಧರಿಸಿದ ವರದಿಗಳನ್ನು ಪ್ರಸಾರ ಮಾಡುವಂತಿಲ್ಲ. ಜತೆಗೆ ಸೂಕ್ಷ್ಮ ಮಾಹಿತಿಯನ್ನು ಬಹಿರಂಗಪಡಿಸಕೂಡದು, ಇದರಿಂದ ಕಾರ್ಯಾಚರಣೆಗೆ ಅಡ್ಡಿಯಾಗಿ ಅಪಾಯಗಳು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ತಿಳಿಸಿದೆ.

> ಭಾರತೀಯ ಸೇನೆಯು ತಕ್ಕ ಪ್ರತ್ಯುತ್ತರ ನೀಡುತ್ತದೆ ಎಂಬುದನ್ನು ಚೆನ್ನಾಗಿ ಬಲ್ಲ ಪಾಕಿಸ್ತಾನ ಸೇನೆಯು ತನ್ನ ವಾಯು ಪ್ರದೇಶವನ್ನೇ ಗುರಾಣಿಯನ್ನಾಗಿ ಬಳಸಿಕೊಂಡ ಕೃತ್ಯ ಬಯಲಾಗಿದೆ. ಭಾರತೀಯ ವಾಯು ಸೇನೆಯು ಸೂಕ್ತ ಪ್ರತ್ಯುತ್ತರ ನೀಡುವ ಮೂಲಕ ಕರಾಚಿ ಮತ್ತು ಲಾಹೋರ್ ಮಾರ್ಗವನ್ನು ಬಳಸುತ್ತಿರುವ ಅಂತಾ ರಾಷ್ಟ್ರೀಯ ವಿಮಾನಗಳ ರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತಿದೆ.
>
> **- ವ್ಯೋಮಿಕಾ ಸಿಂಗ್**
> ವಿಂಗ್ ಕಮಾಂಡರ್

ಕೈ ಚಾಚಿ ನಿಂತ ಉಗ್ರರಾಷ್ಟ್ರ

ಭಾರತ ಮತ್ತು ಪಾಕಿಸ್ತಾನ ನಡುವೆ ಯುದ್ಧ ಆರಂಭವಾದ 48 ಗಂಟೆಗಳಲ್ಲೇ ಪಾಕಿಸ್ತಾನ ದಿವಾಳಿಯಾಗಿದ್ದು, ಮತ್ತೆ ಜಾಗತಿಕ ಸಮುದಾಯದ ಮುಂದೆ ಕೈಚಾಚಿದೆ. ಈ ಬಗ್ಗೆ ಸ್ವತಃ ಪಾಕಿಸ್ತಾನ ಸರಕಾರದ ಆರ್ಥಿಕ ವ್ಯವಹಾರಗಳ ವಿಭಾಗ ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಆರ್ಥಿಕ ನೆರವು ನೀಡುವಂತೆ ತನ್ನ ಮಿತ್ರ ರಾಷ್ಟ್ರಗಳಿಗೆ ಕೇಳಿಕೊಂಡಿದೆ. ಪಾಕಿಸ್ತಾನ ಸರಕಾರವು ಹೆಚ್ಚಿನ ನಷ್ಟ ಅನುಭವಿಸುತ್ತಿದ್ದು, ಈ ಸಂಬಂಧ ಸಾಲಗಳನ್ನು ಒದಗಿಸುವಂತೆ ಅಂತಾರಾಷ್ಟ್ರೀಯ ಪಾಲುದಾರರೊಂದಿಗೆ ಮನವಿ ಮಾಡಿದೆ.

ಭಾರತದ ತೀವ್ರ ವಿರೋಧದ ನಡುವೆಯೂ ಐಎಂಎಫ್ ಪಾಕಿಸ್ತಾನಕ್ಕೆ 100ಕೋಟಿ ಡಾಲರ್ ಮಂಜೂರು ಮಾಡಿದೆ.

ಷರೀಫ್ 'ರಣಹೇಡಿ'

ಪಾಕಿಸ್ತಾನ ತೆಹ್ರೀಕ್ ಇ ಇನ್ಸಾಫ್ ಸಂಸದ ಇಕ್ಬಾಲ್ ತಾಹಿರ್ ಹಾಲಿ ಪಾಕಿಸ್ತಾನ ಸರಕಾರದ ವಿರುದ್ಧ ಕಿಡಿಕಾರಿದ್ದರು. ಇದೀಗ ಇಂದು ಮತ್ತೊಬ್ಬ ಸಂಸದ ಪ್ರಧಾನಿ ಶಹಭಾಷ್ ಷರೀಫ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಾಕಿಸ್ತಾನ ಸಂಸತ್ತಿನಲ್ಲಿ ಶುಕ್ರವಾರ ಚರ್ಚೆಯ ಸಮಯದಲ್ಲಿ ಮಾತನಾಡುತ್ತಿದ್ದ ಅಲ್ಲಿನ ಸಂಸದ ಶಾಹಿದ್ ಅಹ್ಮದ್ (ಎಂಎನ್‌ಎ) ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಬುಜ್ದಿಲ್ (ಹೇಡಿ) ಎಂದು ಜರಿದಿದ್ದಾರೆ. ಶಹಭಾಷ್ ಷರೀಫ್ ಅವರು ಇಷ್ಟೆಲ್ಲಾ ಆದರೂ ಭಾರತದ ಪ್ರಧಾನಿ ನರೇಂದ್ರ ಮೋದಿಯ ಹೆಸರನ್ನು ಸಹ ಹೇಳಲು ಆಗುತ್ತಿಲ್ಲ. ಅವರನ್ನು ಅದೆಂತಹ ವಿಷಯ ತಡೆಯುತ್ತಿದೆ ಎಂದು ತಿಳಿಯುತ್ತಿಲ್ಲ ಎಂದು ಕಿಡಿಕಾರಿದ್ದಾರೆ.

ರಣಾಂಗಣಕ್ಕಿಳಿದ ತಾಲಿಬಾನ್

ಒಂದೆಡೆ ಆಪರೇಷನ್ ಸಿಂದೂರ ಮೂಲಕ ಭಾರತೀಯ ಸೇನೆ ಪಾಕಿಸ್ತಾನದ ಮೇಲೆ ಮುಗಿಬಿದ್ದಿದ್ದರೆ ಇನ್ನೊಂದೆಡೆ ಬಲೂಚಿಸ್ತಾನದ ಆರ್ಮಿ ಪಡೆ ಸಹ ಪಾಕಿಸ್ತಾನದ ಸೇನೆ ಮೇಲೆ ದಾಳಿ ಮಾಡಿದೆ. 12 ಪಾಕಿಸ್ತಾನ ಸೈನಿಕರು ತೆರಳುತ್ತಿದ್ದ ವಾಹನವನ್ನು ಸ್ಫೋಟಿಸಿದ್ದು ಸೈನಿಕರ ದೇಹಗಳು ಚೂರು ಚೂರಾಗಿವೆ. ಇದರ ಬೆನ್ನಲ್ಲೇ ತಾಲಿಬಾನ್ ಸಹ ಪಾಕಿಸ್ತಾನ ಸೇನೆ ಮೇಲೆ ಮುಗಿಬಿದ್ದಿದೆ. ದಕ್ಷಿಣ ವಜೀರಿಸ್ತಾನದ ಶಕೈನಲ್ಲಿ ತೆಹ್ರೀಕ್-ಇ-ತಾಲಿಬಾನ್ ಲೇಸರ್ ರೈಫಲ್‌ಗಳನ್ನು ಬಳಸಿ ನಡೆಸಿದ ದಾಳಿಯಲ್ಲಿ 20 ಪಾಕಿಸ್ತಾನಿ ಸೈನಿಕರು ಸಾವನ್ನಪ್ಪಿದ್ದಾರೆ. ಪಾಕಿಸ್ತಾನದ ಸೇನಾ ವಾಹನಗಳು ಸಹ ನಾಶವಾಗಿದ್ದು, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಐಪಿಎಲ್ ಮುಂದೂಡಿಕೆ

ದೆಹಲಿ: ಭಾರತ ಹಾಗೂ ಪಾಕಿಸ್ತಾನ ನಡುವೆ ಉದ್ವಿಗ್ನತೆ ಉಲ್ಬಣಿಸಿರುವ ಕಾರಣ ಐಪಿಎಲ್ ಕ್ರಿಕೆಟ್ ಟೂರ್ನಿಯ ಉಳಿದ ಪಂದ್ಯಗಳನ್ನು ಒಂದು ವಾರ ಮುಂದೂಡಲಾಗಿದೆ. ಪಂದ್ಯಗಳ ದಿನಾಂಕವನ್ನು ಮುಂದೆ ತಿಳಿಸಲಾಗುವುದು ಎಂದು ಬಿಸಿಸಿಐ ತಿಳಿಸಿದೆ. ದೇಶದ 13 ನಗರಗಳಲ್ಲಿ ನಡೆಯುತ್ತಿದ್ದ ಈ ಬಾರಿಯ ಐಪಿಎಲ್ ಆವೃತ್ತಿಯು ಮಾರ್ಚ್ 22ರಂದು ಆರಂಭವಾಗಿತ್ತು. ಮೇ 25ರಂದು ಫೈನಲ್ ನಿಗದಿಯಾಗಿತ್ತು. ಟೂರ್ನಿಯು ಅಂತಿಮ ಹಂತಕ್ಕೆ ತಲುಪಿತ್ತು. ಲೀಗ್ ಹಂತದಲ್ಲಿ 12 ಹಾಗೂ ಕ್ವಾಲಿಫೈಯರ್, ಎಲಿಮಿನೇಟರ್, ಫೈನಲ್ ಪಂದ್ಯಗಳಷ್ಟೇ ಬಾಕಿ ಇದ್ದವು. ಆತಿಥೇಯ ಎಲ್‌ಎಸ್‌ಜಿ ಹಾಗೂ ಆರ್‌ಸಿಬಿ ನಡುವಣ ಪಂದ್ಯ ಲಖನೌನಲ್ಲಿ ಶುಕ್ರವಾರ ರಾತ್ರಿ ನಡೆಯಬೇಕಿತ್ತು.

ಜನರ ಸುರಕ್ಷತೆ ಕ್ರಮ ವಹಿಸಿ

ಜನರ ಸುರಕ್ಷತೆ ಮತ್ತು ಸಾರ್ವಜನಿಕ ಆಸ್ತಿಯ ರಕ್ಷಣೆಗೆ ಅಗತ್ಯ ಕ್ರಮ ವಹಿಸಲು ಸ್ಥಳೀಯ ಆಡಳಿತಗಳಿಗೆ ನಿರ್ದೇಶಿಸಬೇಕು ಎಂದು ಕೇಂದ್ರ ಸರಕಾರ ರಾಜ್ಯಗಳಿಗೆ ಸೂಚಿಸಿದೆ. ಅಗತ್ಯ ಸೇವೆಗಳಿಗೆ ಧಕ್ಕೆಯಾಗದಂತೆ ಕ್ರಮವಹಿಸಬೇಕು ಎಂದು ತಿಳಿಸಿದೆ. ಕೇಂದ್ರ ಗೃಹ ಸಚಿವಾಲಯವು ಈ ಸಂಬಂಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದೆ. ತುರ್ತು ಸಂದರ್ಭಗಳಲ್ಲಿ ಅಗತ್ಯ ಕ್ರಮವಹಿಸಲು 1968ರ ನಾಗರಿಕ ರಕ್ಷಣಾ ನಿಯಮಗಳ ಸೆಕ್ಷನ್ 11ರ ಅನ್ವಯ ನಾಗರಿಕ ರಕ್ಷಣಾ ನಿರ್ದೇಶನಾಲಯಕ್ಕೆ ವಿಶೇಷಾಧಿಕಾರ ನೀಡಬೇಕು ಎಂದಿದೆ.

ಸೊಂಪಾದ ಪುಟಗಳು

ಪಾಕಿಸ್ತಾನದ ಆದಾಯ: ಭಯೋತ್ಪಾದಕರ ಪೋಷಣೆ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
6

ಈ ಆಹಾರಗಳನ್ನು ನಿತ್ಯ ಸೇವಿಸಬಾರದೆಂದು ನಿಮಗೆ ಗೊತ್ತಿತ್ತೆ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
7

ರಾಜ್ಯದಲ್ಲೂ ಕಟ್ಟೆಚ್ಚರ

ರಾಜ್ಯದ ವಿವಿಧ ಜಿಲ್ಲೆಗಳ ಸೂಕ್ಷ್ಮ ಪ್ರದೇಶಗಳ ಮೇಲೆ ತೀವ್ರ ನಿಗಾ ವಹಿಸಬೇಕು. ಜತೆಗೆ, ಬಂದೋಬಸ್ತ್ ಕೈಗೊಳ್ಳಬೇಕು ಎಂದು ಗುಪ್ತಚರ ವಿಭಾಗ ಸೂಚಿಸಿದೆ. ಆಡಳಿತ ಕಟ್ಟಡಗಳು, ರಕ್ಷಣಾ ಸ್ಥಾವರಗಳು, ವಿಜ್ಞಾನ ಸಂಶೋಧನಾ ಕೇಂದ್ರಗಳು, ವಿಮಾನ ನಿಲ್ದಾಣಗಳು, ಜಲಾಶಯಗಳು, ಉಪಗ್ರಹ ಕೇಂದ್ರಗಳು, ಜಲ ವಿದ್ಯುತ್ ಸ್ಥಾವರಗಳು, ಅಣು ವಿದ್ಯುತ್ ಸ್ಥಾವರ, ರೈಲು ನಿಲ್ದಾಣಗಳು, ಮೆಟ್ರೊ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ನಿಗಾ ವಹಿಸಬೇಕು ಎಂದು ರಾಜ್ಯ ಗುಪ್ತಚರ ವಿಭಾಗದ ನಿರ್ದೇಶಕ ಹೇಮಂತ್ ಎಂ.ನಿಂಬಾಳ್ಕರ್ ಸೂಚಿಸಿದ್ದಾರೆ.

ದಾರಿದೀಪೋಕ್ತಿ

ನಾವು ಸದಾ ಒಳ್ಳೆಯದನ್ನೇ ಮಾಡುವುದರಿಂದ ಆತ್ಮವಿಶ್ವಾಸ ಹುಟ್ಟಿಕೊಳ್ಳುವುದಿಲ್ಲ. ಆದರೆ ನಾವು ತಪ್ಪು ಮಾಡುತ್ತೇನೆ ಎಂಬ ಹೆದರಿಕೆ ಅಥವಾ ಆತಂಕದಿಂದ. ನಾವು ಸೋಲುತ್ತೇವೆ ಎಂಬ ಭಯ ನಮ್ಮಲ್ಲಿರುವ ಆತ್ಮವಿಶ್ವಾಸವನ್ನು ಕುಂದಿಸುತ್ತದೆ.



ಕಾಮೆಡ್-ಕೆ ಪರೀಕ್ಷೆ ಮುಂದೂಡಿಕೆ

ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕದ ವೈದ್ಯಕೀಯ ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) ಮೇ 10ರಂದು ನಿಗದಿಪಡಿಸಿದ್ದ ಪ್ರವೇಶ ಪರೀಕ್ಷೆಯನ್ನು ಉತ್ತರ ಭಾರತದ 13 ನಗರಗಳಲ್ಲಿ ಮುಂದೂಡಿದೆ. ಗುಜರಾತ್‌ನ ಜಾಮ್‌ನಗರ, ಜಮ್ಮು ಮತ್ತು ಕಾಶ್ಮೀರದ ಶ್ರೀನಗರ, ಜಮ್ಮು, ಪಂಜಾಬ್‌ನ ಲೂಧಿಯಾನ, ಬಠಿಂಡಾ ಜಲಂಧರ್, ಮೊಹಾಲಿ, ಪಟಿಯಾಲ, ಅಮೃತಸರ, ರಾಜಸ್ಥಾನದ ಜೋಧಪುರ, ಬಿಕನೇರ್, ಶ್ರೀಗಂಗಾನಗರ, ಹರಿಯಾಣದ ಅಂಬಾಲ ನಗರಗಳಲ್ಲಿ ಮೇ 10ರಂದು ಪರೀಕ್ಷೆ ಇರುವುದಿಲ್ಲ.

ವಕ್ರತುಂಡೋಕ್ತಿ

ನಾವು ಎಷ್ಟೇ ಹೇಳಿದರೂ ಕೇಳುವುದಿಲ್ಲ, ತಿದ್ದಿದರೂ ತಿದ್ದಿಕೊಳ್ಳುವುದಿಲ್ಲ, ಕೈಗೆ ಸಿಕ್ಕರೂ ಮಾತು ಕೇಳುವುದಿಲ್ಲ. ಅದಕ್ಕೆ ಹೇರ್ ಸ್ಟೈಲ್ ಅಂತಾರೆ.

ಮಸೀದಿ, ಮಂದಿರಗಳಲ್ಲಿ ಪ್ರಾರ್ಥನೆ, ಪೂಜೆ

ಭಯೋತ್ಪಾದಕರ ವಿರುದ್ಧ ಆಪರೇಷನ್ ಸಿಂದೂರ ಕೈಗೊಂಡಿರುವ ಭಾರತದ ಸೇನಾ ಪಡೆಗಳಿಗೆ ಯಶಸ್ಸು ಮತ್ತು ಶ್ರೇಯಸ್ಸಿಗೆ ಅಲ್ಪಸಂಖ್ಯಾತ ಕಲ್ಯಾಣ ಮತ್ತು ವಕ್ಫ್ ಸಚಿವ ಜಮೀರ್ ಅಹ್ಮದ್ ಖಾನ್ ಮತ್ತು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಅವರ ಆದೇಶದ ಮೇರೆಗೆ ಶುಕ್ರವಾರ ರಾಜ್ಯಾದ್ಯಂತ ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ಮತ್ತು ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಲಾಯಿತು. ಅಲ್ಲದೆ ಈ ಸಮರದಲ್ಲಿ ಭಾರತೀಯ ಯೋಧರಿಗೆ ಜಯ ಸಿಗಲಿ ಎಂದು ಪ್ರಾರ್ಥಿಸಿ ಅನೇಕ ದೇವಸ್ಥಾನಗಳಲ್ಲಿ ಹೋಮ ಹವನ ಕೈಗೊಳ್ಳಲಾಗಿತ್ತು.

ಫನ್‌ತರಂಗ

- ರಘುಪತಿ ಶೃಂಗೇರಿ -

ಭಾರತ-ಪಾಕ್ ಬಿಕ್ಕಟ್ಟು, ಹೈದರಾಬಾದ್‌ನ 'ಕರಾಚಿ ಬೇಕರಿ'ಗೆ ಸಂಕಷ್ಟ

ಭಾರತವು ಪಾಕಿಸ್ತಾನದ ಯಾವುದೇ ಧಾರ್ಮಿಕ ಸ್ಥಳಗಳ ಮೇಲೆ ದಾಳಿ ಮಾಡಿಲ್ಲ, ಆದರೆ ಪಾಕಿಸ್ತಾನವು ವಿನಾಕಾರಣ ಈ ವಿಚಾರದ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡುತ್ತಿದೆ. ಭಾರತದತ್ತ ಪಾಕಿಸ್ತಾನ ಹಾರಿಸಿದ್ದ ಹಲವು ಡ್ರೋನ್‌ಗಳನ್ನು ನಾವು ಧ್ವಂಸಗೊಳಿಸಿದ್ದೇವೆ. ಉರಿ, ಪೂಂಚ್, ಅಖ್ನೂರ್ ಸೇರಿ ಎಲ್‌ಒಸಿಯಲ್ಲಿ ಭಾರಿ ಗುಂಡಿನ ದಾಳಿ ನಡೆದಿದೆ.

ವಿಕ್ರಮ್ ಮಿಸ್ರಿ, ಭಾರತದ ವಿದೇಶಾಂಗ ಕಾರ್ಯದರ್ಶಿ

ಅಮೆರಿಕ ಉಪಾಧ್ಯಕ್ಷರ ಪ್ರತಿಕ್ರಿಯೆ

ವಾಷಿಂಗ್ಟನ್: ಪಹಲ್ಗಾಮ್ ಉಗ್ರ ದಾಳಿ ಬಳಿಕ ಉಲ್ಬಣವಾಗಿರುವ ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆ ವಿಚಾರವಾಗಿ ಕಡ್ಡಿ ಮುರಿದಂತೆ ಉತ್ತರ ನೀಡಿರುವ ಅಮೆರಿಕ ಇದಕ್ಕೂ ನಮಗೂ ಸಂಬಂಧವಿಲ್ಲ ಎಂದು ಹೇಳಿದೆ. ಈ ಬಗ್ಗೆ ಮಾತನಾಡಿರುವ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, 'ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವು ನಮಗೆ ಸಂಬಂಧವಿಲ್ಲ, ಆದರೂ ನಾನು ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎರಡೂ ದೇಶಗಳು ಉದ್ವಿಗ್ನತೆಯನ್ನು ಕಡಿಮೆ ಮಾಡಲು ಪ್ರೋತ್ಸಾಹಿಸುತ್ತಿದ್ದೇವೆ ಎಂದು ಹೇಳಿದರು.

400 ಡ್ರೋನ್ ಉರುಳಿಸಿದ್ದೇವೆ: ಸೇನೆ

ದೆಹಲಿ: ಪಾಕಿಸ್ತಾನವು ಭಾರತದ ನಾಗರಿಕ ಹಾಗೂ ಸೇನಾ ನೆಲೆಗಳ ಮೇಲೆ ದಾಳಿಗೆ ಯತ್ನಿಸಿದಾಗ ನಾವು ಅದಕ್ಕೆ ಭಾರತ ಪ್ರತ್ಯುತ್ತರ ನೀಡಿದ್ದೇವೆ. ನಮ್ಮ ರಕ್ಷಣೆಗಾಗಿ ಭಾರತವು ಪಾಕಿಸ್ತಾನದ 36 ಕಡೆ ದಾಳಿ ನಡೆಸಿದೆ. ಎಲ್‌ಒಸಿಯಲ್ಲಿ ಪಾಕಿಸ್ತಾನ ಕದನ ವಿರಾಮ ಉಲ್ಲಂಘನೆ ಮಾಡಿ ಅಪ್ರಚೋದಿತ ಗುಂಡಿನ ದಾಳಿ ನಡೆಸಿದ್ದು, ಭಾರತೀಯ ಸೇನೆಯ ಯೋಧ ಹುತಾತ್ಮರಾಗಿದ್ದಾರೆ ಹಾಗೂ ಹಲವು ಸೈನಿಕರಿಗೆ ಗಾಯಗಳಾಗಿವೆ ಎಂದು ಕರ್ನಲ್ ಸೋಫಿಯಾ ಖುರೇಷಿ ಹೇಳಿದ್ದಾರೆ. ವಿದೇಶಾಂಗ ಸಚಿವಾಲಯ ಶುಕ್ರವಾರ ಸಂಜೆ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಹಾಗೂ ವಿದೇಶಾಂಗ ಇಲಾಖೆಯ ಕಾರ್ಯದರ್ಶಿ ವಿಕ್ರಮ ಮಿಸ್ರಿ ಅವರ ಜತೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಅವರು ಈ ಮಾಹಿತಿಯನ್ನು ನೀಡಿದ್ದಾರೆ. 36 ಸ್ಥಳಗಳಲ್ಲಿ ಒಳನುಸುಳುವಿಕೆಗೆ ಪ್ರಯತ್ನಿಸಲು ಸುಮಾರು 300ರಿಂದ 400 ಡ್ರೋನ್‌ಗಳನ್ನು ಬಳಸಲಾಗಿದ್ದು, ಅದನ್ನು ಯಶಸ್ವಿಯಾಗಿ ತಡೆದಿದ್ದೇವೆ. ಲೇಹ್‌ನಿಂದ ಸಿರ್ ಸೆಕ್ಟರ್‌ವರೆಗೆ ಪಾಕಿಸ್ತಾನಿ ಸೇನೆಯು ಒಳನುಸುಳುವಿಕೆಗಾಗಿ ಡ್ರೋನ್‌ಗಳನ್ನು ಬಳಸಿದೆ ಎಂದು ಕರ್ನಲ್ ಖುರೇಷಿ ಹೇಳಿದ್ದಾರೆ.

ಮನವಿ ತಿರಸ್ಕಾರ ಸಾಧ್ಯತೆ

ದೆಹಲಿ: ಭಾರತ ಮತ್ತು ಪಾಕಿಸ್ತಾನ ನಡುವಿನ ಗಡಿ ಉದ್ವಿಗ್ನತೆಯ ಕಾರಣ 2025ರ ಪಾಕಿಸ್ತಾನ ಸೂಪರ್ ಲೀಗ್-2025 ಟೂರ್ನಿಯ ಇನ್ನುಳಿದ ಭಾಗವನ್ನು ಯುಎಇಯಲ್ಲಿ ನಡೆಸುವುದಾಗಿ ಘೋಷಿಸಿದೆ. ಭದ್ರತಾ ಕಾರಣಗಳಿಂದ ಈ ನಿರ್ಧಾರವನ್ನು ತೆಗೆದುಕೊಂಡಿದ್ದೇವೆಂದು ಅದು ತಿಳಿಸಿದೆ. ಆದರೆ, ಪಾಕಿಸ್ತಾನ ಕ್ರಿಕೆಟ್ ಮಂಡಳಿಯಿಂದ ಅಂತಹ ಯಾವುದೇ ವಿನಂತಿ ಬಂದರೆ ಮಂಡಳಿ ತಿರಸ್ಕರಿಸುವ ಸಾಧ್ಯತೆಯಿದೆ ಎಂದು ಎಮಿರೇಟ್ಸ್ ಕ್ರಿಕೆಟ್ ಮಂಡಳಿಯ ಮೂಲಗಳು ತಿಳಿಸಿವೆ. ಒಂದು ವೇಳೆ ಪಿಸಿಬಿಯ ಮನವಿಯನ್ನು ಯುಎಇ ಸ್ವೀಕರಿಸಿದರೆ, ವಿಶ್ವದ ಅತ್ಯಂತ ಶ್ರೀಮಂತ ಮಂಡಳಿಯಾಗಿರುವ ಬಿಸಿಸಿಐನ ಕೆಂಗಣ್ಣಿಗೆ ಗುರಿಯಾಗಬೇಕಾಗಬಹುದು. ಭದ್ರತೆಯ ಕಾರಣದಿಂದ ಪಿಸಿಬಿ ಮನವಿಯನ್ನು ಇಸಿಬಿ ತಿರಸ್ಕರಿಸಬಹುದು.

ಫ್ಯಾಕ್ಟ್ ಚೆಕ್



ಸುಳ್ಳೇನು?

ಆರ್ಮಿ ಸ್ಟಾಫ್‌ನ ಮುಖ್ಯಸ್ಥ ಜನರಲ್ ವಿಕೆ ನಾರಾಯಣ ಅವರಿಂದ ಉತ್ತರ ಭಾಗದ ಕಮಾಂಡೋ ಕಚೇರಿಗೆ ರಹಸ್ಯ ಪತ್ರ. ಇದರಲ್ಲಿ ಡ್ರೋನ್ ದಾಳಿ ಸೇರಿದಂತೆ ಹಲವು ವಿಷಯಗಳ ಪ್ರಸ್ತಾಪ ರ‍್ಯಾಲಿ

ಸತ್ಯವೇನು?

ಜನರಲ್ ವಿ.ಕೆ. ನಾರಾಯಣ ಅವರು ಆರ್ಮಿ ಸ್ಟಾಫ್‌ನ ಮುಖ್ಯಸ್ಥರೇ ಅಲ್ಲ ಹಾಗೂ ಈ ಪತ್ರವೇ ಸಂಪೂರ್ಣ ಸುಳ್ಳು.

ಫ್ಯಾಕ್ಟ್ ಚೆಕ್

ಸುಳ್ಳೇನು?

ಅಂಬಾಲ ವಾಯುನೆಲೆಯನ್ನು ಬಳಸಿಕೊಂಡು ಭಾರತೀಯ ವಾಯು ಸೇನೆ ಅಮೃತಸರ ಹಾಗೂ ಭಾರತೀಯ ನಾಗರಿಕರ ಮೇಲೆ ದಾಳಿ ನಡೆಸಿದೆ.

ಸತ್ಯವೇನು?

ಸುಳ್ಳು ಸುದ್ದಿ ಹಾಗೂ ಜನರಲ್ಲಿ ಗೊಂದಲ ಮೂಡಿಸಲು ಮಾಡಿರುವ ಬಹುದೊಡ್ಡ ಸಂಚು, ಅಂಬಾಲ ವಾಯುನೆಲೆಯಿಂದ ಯಾವುದೇ ದಾಳಿಯಾಗಿಲ್ಲ.

ಎಲ್ಲ ದಿಕ್ಕುಗಳಿಂದಲೂ ಪಾಕಿಸ್ತಾನದ ಮೇಲೆ ದಾಳಿ | ಪ್ರತ್ಯೇಕ ರಾಷ್ಟ್ರವೆಂದು ಘೋಷಿಸಿಕೊಂಡ ಬಲೂಚಿಸ್ತಾನ

ಹುಂಬ ಪಾಕ್ ಈಗ ಒಡಕಲು ಬಿಂಬ



ಉಗ್ರರನ್ನು ಸೆರಗಿನಲ್ಲಿ ಕಟ್ಟಿಕೊಂಡೇ ಜೀವನ ಸಾಗಿಸುತ್ತಿರುವ ಪಾಕಿಸ್ತಾನ ಆಡಳಿತದ ಬಗ್ಗೆ ಭಾರತೀಯರಿಗೆ ಇರುವಷ್ಟೇ 'ಅಸಹನೆ', 'ಅಸಮಾಧಾನ' ಪಾಕಿಸ್ತಾನದಲ್ಲಿಯೇ ಇರುವ ಲಕ್ಷಾಂತರ ನಾಗರಿಕ ರಿಗಿದೆ. ಈ ಎಲ್ಲ ಅಸಮಾಧಾನದ ಕಟ್ಟೆಯೊಡೆ ಯಲು ಭಾರತ ಸೇನೆಯ 'ಆಪರೇಷನ್ ಸಿಂದೂರ' ನಾಂದಿ ಹಾಡಿದೆ. ಆಪರೇಷನ್ ಸಿಂದೂರ ಮೂಲಕ ಪಾಕಿಸ್ತಾನದ ಮೇಲೆ ಭಾರತ ದಾಳಿ ಮಾಡಿದ ಕೆಲವೇ ಗಂಟೆಯಲ್ಲಿ ಆಂತರಿಕ ಸಂಘರ್ಷದಿಂದ ಪಾಕಿಸ್ತಾನದ ಕಂಗೆಟ್ಟು ಹೋಗಿದೆ. ಇದರ ಫಲವೇ ಪಾಕಿಸ್ತಾನದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಆರಂಭವಾಗಿರುವ ಅಂತಃಕಲಹ !

ಹೌದು, ಬಿಕಾರಿಯಾಗಿರುವ ಪಾಕಿಸ್ತಾನಕ್ಕೆ ಈಗಲೂ ಅಲ್ಪ-ಸ್ವಲ್ಪ ಆರ್ಥಿಕತೆಯನ್ನು ಸೃಷ್ಟಿಸುತ್ತಿ ರುವುದು ಬಲೂಚಿಸ್ತಾನ, ಪಂಜಾಬ್ ಹಾಗೂ ಸಿಂಧ್ ಪ್ರಾಂತ್ಯ. ಬಲೂಚಿಸ್ತಾನದಲ್ಲಿ ಅತಿವಿರಳ ಖನಿಜ ಸಂಪತ್ತಿನ ಖಜಾನೆಯಾಗಿದ್ದರೆ, ಸಿಂಧ್ ಹಾಗೂ ಪಂಜಾಬ್ ಪ್ರಾಂತ್ಯದಲ್ಲಿ ಕೃಷಿ ಹಾಗೂ ಕೈಗಾರಿಕೆಯ ಮೂಲಕ ಇಡೀ ಪಾಕಿಸ್ತಾನದ ಜಿಡಿಪಿಗೆ ಬಹುದೊಡ್ಡ ಕೊಡುಗೆಯನ್ನು ನೀಡುತ್ತಾ ಬಂದಿದೆ. ಆದರೆ ಪಾಕಿಸ್ತಾನದ ಅರಾಜಕತೆಯ ಕಾರಣಕ್ಕೆ, 'ಪ್ರತ್ಯೇಕ' ಹೋರಾಟ ಶುರುವಾಗಿದೆ.

ಈ ಹೋರಾಟಗಳು ಆಗ್ಗಾಗೆ ಶುರುವಾಗಿದ್ದು ಇತಿಹಾಸ. ಆದರೆ ಆಪರೇಷನ್ ಸಿಂದೂರದ ಬಳಿಕ ಈ ಮೂರು ಪ್ರಾಂತ್ಯದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಪ್ರತ್ಯೇಕದ ಕೂಗು ಶುರುವಾಗಿದೆ. ಅದರಲ್ಲಿಯೂ ಬಲೂಚಿಸ್ತಾನ ಹೋರಾಟಗಾರರು ತಮ್ಮ ಪ್ರತ್ಯೇಕ ಧ್ವಜವನ್ನು ಹಾರಿಸುವ ಜತೆಜತೆಗೆ ಪ್ರತ್ಯೇಕ ರಾಷ್ಟ್ರದ ಸ್ಥಾನಮಾನಕ್ಕೆ ಮನವಿ ಸಲ್ಲಿಸಿದೆ. ಬಲೂಚಿ ಹೋರಾಟಗಾರರಿಗೆ ಮೊದಲಿನಿಂದಲೂ ನೆರವು ನೀಡುತ್ತಾ ಬಂದಿರುವ ಭಾರತ, ಇದೀಗ ಈ ವಿಷಯವನ್ನು ಮುಂದಿಟ್ಟುಕೊಂಡೇ ಪಾಕಿಸ್ತಾನಿ ಗಳ ಹೆಡೆಮುರಿಕಟ್ಟಿದರೂ ಅಚ್ಚರಿಯಿಲ್ಲ. ಬಲೂಚಿ, ಪಂಜಾಬ್ ಹಾಗೂ ಪಾಕಿಸ್ತಾನದ ಜಮ್ಮು ಪ್ರಾಂತ್ಯವನ್ನು ಹೋಲಿಸಿದರೆ ಸಿಂಧ್ ಪ್ರಾಂತ್ಯದಲ್ಲಿ ಪ್ರತ್ಯೇಕತೆಯ ಕೂಗು ಕೊಂಚ ಕಡಿಮೆಯಿದೆ. ಆದರೆ ಬಲೂಚಿ ಹಾಗೂ ಪಂಜಾಬ್ ಪ್ರತ್ಯೇಕಗೊಂಡರೆ ಈ ಸಿಂಧ್ ಪ್ರಾಂತ್ಯ ವೊಂದರ ಮೇಲೆಯೇ ಇಡೀ ದೇಶದ ಆರ್ಥಿಕತೆ ನಿಲ್ಲಬೇಕಾದ ಅನಿವಾರ್ಯತೆ ಸೃಷ್ಟಿಯಾಗಲಿದೆ. ಒಂದು ವೇಳೆ ಪ್ರತ್ಯೇಕಗೊಂಡರೆ, ಈಗಾಗಲೇ ಬೀದಿಗೆ ಬಂದಿರುವ ಪಾಕಿಸ್ತಾನ, ಇನ್ನಷ್ಟು ಬರುವು ದರಲ್ಲಿ ಅನುಮಾನವಿಲ್ಲ.

ನಾಗರಿಕರಿಂದಲೂ ವಿರೋಧ

ಈ ನಡುವೆ ಪ್ರತ್ಯೇಕ ಕೂಗಿನ ಹೊರತಾಗಿ, ಪಾಕಿಸ್ತಾನಿ ಪ್ರಜೆಗಳಿಂದ ಆಡಳಿತದ ವಿರುದ್ಧ ನಿರಂತರ ಹೋರಾಟ ನಡೆಯುತ್ತಲೇ ಇದೆ. ಆಪರೇಷನ್ ಸಿಂದೂರಕ್ಕೂ ಮೊದಲೇ ಪಾಕಿಸ್ತಾನದಲ್ಲಿ ನಿರಂತರವಾಗಿ ಪ್ರತಿಭಟನೆಗಳು ನಡೆಯುತ್ತಿದ್ದವು. ಇದೀಗ ಪಾಕ್ ವೈಫಲ್ಯವನ್ನು ಟೀಕಿಸಿ ದೇಶಾದ್ಯಂತ ಬೀದಿಗೆ ಇಳಿದಿದ್ದಾರೆ. ಈ ಎಲ್ಲಾ ವಿಚಾರಗಳೂ ಪಾಕ್‌ಗೆ ನುಂಗಲಾರದ ತುತ್ತಾಗಿದೆ. ಈ ಮೂಲಕ ಎಲ್ಲ ಕಡೆಗಳಿಂದಲೂ ಪಾಕ್ ಸಂಕಷ್ಟಕ್ಕೆ ಸಿಲುಕಿದೆ.

ತಾಲಿಬಾನಿಗಳಿಂದಲೂ ಆತಂಕ

ಈ ನಡುವೆ ತೆಹ್ರಿಕ್-ಇ ತಾಲಿಬಾನ್ ಗುಂಪು ಪಾಕಿಸ್ತಾನ ಸೇನೆಯ ದಾಳಿ ನಡೆಸಿ 20ಕ್ಕೂ ಹೆಚ್ಚು ಪಾಕಿಸ್ತಾನಿ ಸೈನಿಕರ ಹತ್ಯೆ ಮಾಡಿದೆ. ಪ್ರಮುಖವಾಗಿ ಖೈಬರ್ ಪಖ್ತುಂತ್ವಾ ಪ್ರದೇಶವನ್ನು ಸ್ವತಂತ್ರ್ಯಕ್ಕಾಗಿ ಈ ದಾಳಿ ನಡೆಸಲಾಗಿದೆ ಎನ್ನಲಾಗಿದೆ. ದಕ್ಷಿಣ ವಜೀರಿಸ್ತಾನದ ಶಕ್ತೈ ಉಪವಿಭಾಗದಲ್ಲಿರುವ ಡಂಗೇಟ್ ಮಿಲಿಟರಿ ಹೊರಠಾಣೆಯಲ್ಲಿ ಶುಕ್ರವಾರ ಈ ಘಟನೆ ಸಂಭವಿ ಸಿದ್ದು, ಉಗ್ರರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿ ದಾಳಿ ನಡೆಸಿದ್ದಾರೆ ಎನ್ನಲಾಗಿದೆ.

ಬಲೂಚಿಸ್ತಾನ ಪ್ರಮುಖವೇಕೆ?

- ಪಾಕಿಸ್ತಾನದ ಶೇ.30ರಷ್ಟು ಮೀನುಗಾರಿಕೆ ನಡೆಯುವುದೇ ಈ ಪ್ರದೇಶದಲ್ಲಿ
- ಅಪರೂಪದ ಖನಿಜ ಸಂಪತ್ತು, ನೈಸರ್ಗಿಕ ಅನಿಲಗಳಿಂದ ಕೂಡಿರುವುದರಿಂದ ಆರ್ಥಿಕವಾಗಿ ಪ್ರಮುಖ ಪ್ರಾಂತ್ಯ
- ಪಾಕಿಸ್ತಾನದ ಆಹಾರ ತಯಾರಿಕೆಯಲ್ಲಿ ಶೇ.40ರಷ್ಟು ಈ ಭಾಗದಲ್ಲಿಯೇ ಬೆಳೆಯುವುದು
- ಚೀನಾ-ಪಾಕಿಸ್ತಾನ ನಡುವಿನ ಎಕನಾಮಿಕ್ ಕಾರಿಡಾರ್‌ನಲ್ಲಿ ಬಲೂಚಿ ಆಯಕಟ್ಟಿನ ಹಾಗೂ ಅತ್ಯಗತ್ಯ ಪ್ರಾಂತ್ಯ
- ಪಾಕಿಸ್ತಾನದಿಂದ ಬಲೂಚಿ ಕೈಬಿಟ್ಟು ಹೋದರೆ, ಅಫಘಾನಿಸ್ತಾನ ಹಾಗೂ ಇರಾನ್ ವರದಾನ

ಪ್ರತ್ಯೇಕ ರಾಷ್ಟ್ರದ ಹೋರಾಟಗಾರರ ವಾದವೇನು?

- ತಮ್ಮ ನೆಲದ ಆದಾಯ ಪಡೆದು ಬಡ ಪ್ರದೇಶದ ಅಭಿವೃದ್ಧಿಗೆ ಬಳಕೆ
- ಬಲೂಚಿಸ್ತಾನ, ಸಿಂಧ್ ಹಾಗೂ ಪಂಜಾಬ್ ಪ್ರಾಂತ್ಯದಲ್ಲಿಯೇ ಅತಿಹೆಚ್ಚು ಆರ್ಥಿಕ ಸಂಗ್ರಹ
- ಪಾಕಿಸ್ತಾನಕ್ಕೆ ಅಂಟಿರುವ 'ಉಗ್ರ'ರ ರಾಷ್ಟ್ರಕ್ಕೆ ಈ ಪ್ರಾಂತ್ಯದವರ ವಿರೋಧ
- ಬಾಂಗ್ಲಾದೇಶದ ರೀತಿಯಲ್ಲಿ ನಮಗೂ ಸ್ವಾತಂತ್ರ್ಯ ದೇಶದ ಸ್ಥಾನಮಾನ ನೀಡಿ

ಸಿಂಧ್ ಪ್ರಾಂತ್ಯದ ಮಹತ್ವವೇನು?

- ಪಾಕಿಸ್ತಾನದ ಜಿಡಿಪಿಗೆ ಶೇ.30ರಿಂದ 32ರಷ್ಟು ಕೊಡುಗೆ
- ಜವಳಿ, ಸಿಮೆಂಟ್, ಪ್ಲಾಸ್ಟಿಕ್ ಸೇರಿದಂತೆ ಪ್ರಮುಖ ಕೈಗಾರಿಕೆಗಳಿರುವ ಪ್ರಾಂತ್ಯ
- ಪಾಕಿಸ್ತಾನದ ಎರಡು ಪ್ರಮುಖ ಬಂದರುಗಳಾಗಿರುವ ಕರಾಚಿ ಬಂದರು ಹಾಗೂ ಪೋರ್ಟ್ ಕ್ವಾಸಿಮ್ ಬಂದರು ಹೊಂದಿದೆ
- ಕೈಗಾರಿಕ ಪ್ರದೇಶ ಹಾಗೂ ಆರ್ಥಿಕ ಝೋನ್‌ಗಳನ್ನು ಹೊಂದಿರುವ ಪ್ರಮುಖ ಪ್ರಾಂತ್ಯ
- ಅಗತ್ಯ ಗೋಧಿ, ಅಕ್ಕಿ, ಕಬ್ಬು ಬೆಳೆಯುವುದು ಹಾಗೂ ಅನಿಲ ಸಂಪತ್ತನ್ನು ಹೊಂದಿರುವ ಪ್ರಾಂತ್ಯ

ಪಂಜಾಬ್ ಪ್ರಾಂತ್ಯದ ಮಹತ್ವವೇನು?

- ಪಾಕಿಸ್ತಾನದ ಜಿಡಿಪಿಯಲ್ಲಿ ಪಂಜಾಬ್‌ನದ್ದು ಸಿಂಹಪಾಲು
- ಈ ಒಂದು ಪ್ರಾಂತ್ಯದಿಂದಲೇ ಶೇ.54ರಿಂದ 60ರಷ್ಟು ಜಿಡಿಪಿಯ ಕೊಡುಗೆ
- ಪಾಕಿಸ್ತಾನದ ಬಹುಪಾಲು ಕೈಗಾರಿಕೆಗಳು ಈ ಪ್ರಾಂತ್ಯದಲ್ಲಿಯೇ ಇದೆ
- ಪಾಕಿಸ್ತಾನದ 'ಬ್ರೆಡ್ ಬಾಸ್ಕೆಟ್' ಎನಿಸಿರುವ ಪಂಜಾಬ್ ಪ್ರಾಂತ್ಯದಲ್ಲಿಯೇ ಗೋಧಿ, ಅಕ್ಕಿ, ಕಬ್ಬು ಬೆಳೆಯುವುದು
- ಲಾಹೋರ್, ಮುಲ್ತಾನ್ ಸೇರಿದಂತೆ ಪ್ರಮುಖ ನಗರಗಳು ಹಾಗೂ ಅತಿಹೆಚ್ಚು ಉದ್ಯೋಗಿಗಳಿರುವ ಪ್ರಾಂತ್ಯ

ಪಾಕ್ ದಿವಾಳಿ

ಇಸ್ಲಾಮಾಬಾದ್: ಆಪರೇಷನ್ ಸಿಂದೂರ ಕಾರ್ಯಾಚರಣೆ ಆರಂಭವಾದ 48 ಗಂಟೆಗಳಲ್ಲೇ ಪಾಕಿಸ್ತಾನ ದಿವಾಳಿಯಾಗಿದೆ. ಬುಧವಾರ ರಾತ್ರಿಯಿಂದ ಆರಂಭವಾದ ಭಾರತ ಮತ್ತು ಪಾಕಿಸ್ತಾನ ಸೇನಾ ಸಂಘರ್ಷ ಮುಂದುವರೆದಿರುವಂತೆಯೆ, ಪಾಕಿಸ್ತಾನವು ಆರ್ಥಿಕ ನೆರವಿಗಾಗಿ ಮತ್ತೆ ಜಾಗತಿಕ ಸಮುದಾಯದ ಮುಂದೆ ಕೈ ಚಾಚಿದೆ. ಈ ಬಗ್ಗೆ ಸ್ವತಃ ಪಾಕಿಸ್ತಾನ ಸರಕಾರದ ಆರ್ಥಿಕ ವ್ಯವಹಾರಗಳ ವಿಭಾಗ ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಮನವಿ ಮಾಡಿದ್ದು, ಟ್ವೀಟ್ ಮೂಲಕ ಆರ್ಥಿಕ ನೆರವು ನೀಡುವಂತೆ ತನ್ನ ಮಿತ್ರರಾಷ್ಟ್ರಗಳಿಗೆ ಕೇಳಿಕೊಂಡಿದೆ.

ಭಾರತದ ಆಪರೇಷನ್ ಸಿಂದೂರ ಮತ್ತು ಪಾಕಿಸ್ತಾನ ಆಕ್ರಮಿತ ಜಮ್ಮು ಮತ್ತು ಕಾಶ್ಮೀರದಲ್ಲಿ ದಾಳಿ ಮಾಡುತ್ತಿರುವುದರಿಂದ, ಪಾಕಿಸ್ತಾನ ಸರಕಾರವು ಹೆಚ್ಚಿನ ನಷ್ಟ ಅನುಭವಿಸುತ್ತಿದ್ದು, ಈ ಸಂಬಂಧ ಸಾಲಗಳನ್ನು ಒದಗಿಸುವಂತೆ ಅಂತಾರಾಷ್ಟ್ರೀಯ ಪಾಲುದಾರರೊಂದಿಗೆ ಪಾಕಿಸ್ತಾನ ಸರಕಾರವು ಮನವಿ ಮಾಡಿದೆ. ಷೇರುಗಳು ಕುಸಿಯುತ್ತಿರುವುದರಿಂದ ನಷ್ಟ ಕಡಿಮೆ ಮಾಡಲು ಸಹಾಯ ಮಾಡುವಂತೆ ಅಂತಾರಾಷ್ಟ್ರೀಯ ಪಾಲುದಾ ರರಿಗೆ ಅದು ಮನವಿ ಮಾಡಿದೆ.

ಎಟಿಎಂ ವಿತ್ ಡ್ರಾಗೆ ಮಿತಿ: ಸೇನಾ ಸಂಘರ್ಷ ಮುಂದುವರೆದಿರುವಂತೆಯೇ ಪಾಕಿಸ್ತಾನ ಆರ್ಥಿಕ ವ್ಯವಹಾರಗಳ ಸಚಿವಾಲಯವು ತನ್ನದೇ ಪ್ರಜೆಗಳಿಗೆ ಶಾಕ್ ನೀಡಿದ್ದು, ಆರ್ಥಿಕ ಸಂಕಷ್ಟ ನಿರ್ವಹಣೆಗಾಗಿ ಪಾಕ್ ಪ್ರಜೆಗಳ ಬ್ಯಾಂಕ್ ಎಟಿಎಂ ವಿತ್‌ಡ್ರಾಗೆ ಮಿತಿ ಹೇರಿದೆ. ದಿನವೊಂದಕ್ಕೆ ಕೇವಲ 3 ಸಾವಿರ ರು. ಮಾತ್ರ ವಿತ್‌ಡ್ರಾ ಮಾಡಲು ಪಾಕ್ ಪ್ರಜೆಗಳಿಗೆ ಮಿತಿ ಹೇರಿದೆ, ಅಲ್ಲದೆ ಪಾಕಿಸ್ತಾನದಲ್ಲಿ ಪರಿಸ್ಥಿತಿ ಸುಧಾರಿಸುವ ವರೆದೂ ಬ್ಯಾಂಕ್‌ಗಳಿಂದ ಹಣ ವಿತ್‌ಡ್ರಾ ಮಾಡದಂತೆ ಮನವಿ ಮಾಡುತ್ತಿದೆ.

ಎಟಿಎಂ ಬಂದ್ ವದಂತಿ ಸುಳ್ಳು

ದೆಹಲಿ: ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ಹೆಚ್ಚಾಗುತ್ತಿರುವಂತೆಯೇ, ಮುಂಬರುವ ದಿನಗಳಲ್ಲಿ ಎಟಿಎಂ ಬಂದ್ ಆಗುವ ಸಾಧ್ಯತೆಯಿದೆ ಎಂಬ ವದಂತಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಈ ವದಂತಿಗಳನ್ನು ಶುಕ್ರವಾರ ತಳ್ಳಿ ಹಾಕಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್ ಸೇರಿದಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ನಮ್ಮ ಎಟಿಎಂಗಳು ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿವೆ. ಸಂಗ್ರಹ ಕೂಡಾ ಉತ್ತಮವಾಗಿದ್ದು, ಡಿಜಿಟಲ್ ಸೇವೆಗಳು ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿವೆ. ಸುಳ್ಳು ವದಂತಿಗಳಿಗೆ ಕಿವಿಗೊಡಬೇಡಿ ಎಂದು ಕೂಡಾ ತನ್ನ ಗ್ರಾಹಕರಿಗೆ ಎಸ್‌ಬಿಐ ಹೇಳಿದೆ.

ಮಹಾಭಾರತಕ್ಕೆ ಸುದರ್ಶನ ರಕ್ಷೆ

ದೇಶದಲ್ಲೆಡೆ ಇದೀಗ ಪಾಕಿಸ್ತಾನ ಹಾಗೂ ಉಗ್ರರ ಮೇಲಿನ ಪ್ರತೀಕಾರದ ದಾಳಿಯದ್ದೇ ಮಾತು. ಅದರಲ್ಲಿಯೂ ಆಪರೇಷನ್ ಸಿಂದೂರದ ಮೂಲಕ ಉಗ್ರರ ನೆಲೆಯನ್ನು ಧ್ವಂಸಗೊಳಿಸಿದ ಬಳಿಕ ಪ್ರತೀಕಾರವಾಗಿ ನಡೆಸಿದ ಪಾಕಿಸ್ತಾದನ ಬಹುಪಾಲು ಹೋರಾಟವನ್ನು ಆಕಾಶದಲ್ಲಿಯೇ ಧ್ವಂಸ ಮಾಡಿದ್ದು ದೇಶಾದ್ಯಂತ ಭಾರಿ ಚರ್ಚೆಯ ವಿಷಯವಾಗಿದೆ.

ಆದರೆ ಈ ಭರ್ಜರಿ ಬೇಟೆಯ ಹಿಂದಿರುವ ಎಸ್ 400 ಆಲಿಯಾಸ್ ಸುದರ್ಶನ ಚಕ್ರದ ಕಾರ್ಯಾಚರಣೆಗೆ ದೇಶದೆಲ್ಲೆಡೆ ಪ್ರಶಂಸೆಯ ಮಹಾಪೂರ ಕೇಳಿಬರುತ್ತಿದೆ. 2018ರಲ್ಲಿ ಈ ವಾಯು ರಕ್ಷಣಾ ಕ್ಷಿಪಣಿಯನ್ನು ಖರೀದಿಸಲು ಭಾರತ ಖರೀದಿಸಲು ಮುಂದಾದ ಸಮಯ ದಲ್ಲಿ ಬಹುಪಾಲು ಮಂದಿ ವಿರೋಧಿಸಿದ್ದರು. ಬರೋಬ್ಬರಿ 35 ಸಾವಿರ ಕೋಟಿ ರು. ಕೊಟ್ಟು ಇದನ್ನು ಖರೀದಿಸುವ ಅಗತ್ಯವೇನಿದೆ? ಇದನ್ನು ಯಾವ ವಿರುದ್ಧ ಬಳಸಲಾಗುತ್ತದೆ ಎಂದು ಮೂಗುಮುರಿದವರೇ ಹೆಚ್ಚು. ಭಾರಿ ವಿರೋಧದ ನಡುವೆಯೂ ಅಂದಿನ ರಕ್ಷಣಾ ಸಚಿವರಾಗಿದ್ದ ದಿ. ಮನೋಹರ್ ಪರಿಕ್ಕರ್ ಅವರು ಈ ಸಾಧನವನ್ನು ಖರೀದಿಸಲೇಬೇಕು ಎಂದು ಪಟ್ಟು ಹಿಡಿದು ರಷ್ಯಾದೊಂದಿಗೆ ಒಪ್ಪಂದ ಮಾಡಿಕೊಂಡರು. ಬಳಿಕ 2021ರಿಂದ ಭಾರತೀಯ ಸೇನೆಯೊಂದಿ ಗಿದೆ. ಈ ಎಸ್.400ನ ವಿಶೇಷತೆ ಏನು ಎನ್ನುವ ಸಣ್ಣ ಪರಿಚಯ ಇಲ್ಲಿದೆ.

ವಿಶೇಷತೆ ಏನು?

» ಬೃಹತ್ ಗಾತ್ರದ ವಾಹನವಾಗಿದ್ದರೂ, ಸುಲಭವಾಗಿ ಸಾಗಿಸಬಹುದು

» ವಾಯು ರಕ್ಷಣಾ ಕ್ಷಿಪಣಿಯನ್ನು ಸ್ಥಾಪಿಸಲು ಕೇವಲ ಐದರಿಂದ ಏಳು ನಿಮಿಷ ಸಾಕು

» ಸು-400 ಒಡಲಲ್ಲಿ ಸುಮಾರು 400 ಕ್ಷಿಪಣಿಗಳನ್ನು ಸೆರೆಹಿಡಿಯುವಷ್ಟು ಶಕ್ತಿ

» 365 ಡಿಗ್ರಿಯಲ್ಲಿಯೂ ದಾಳಿ ನಡೆಸುವ ಸಾಮರ್ಥ್ಯವನ್ನು ಹೊಂದಿದೆ.

» ಶತ್ರು ದೇಶಗಳ ಕ್ಷಿಪಣಿ, ಡ್ರೋನ್, ರಾಕೆಟ್‌ಗಳನ್ನು ಆಗಸದಲ್ಲಿಯೇ ಉಡೀಸ್ ಮಾಡುವ ಸಾಮರ್ಥ್ಯ

» ಏಕಕಾಲಕ್ಕೆ 36 ಕ್ಷಿಪಣಿಗಳನ್ನು ಉಡಾವಣೆ ಮಾಡುವ ಸಾಮರ್ಥ್ಯ

ಕಾರ್ಯನಿರ್ವಹಣಾ ರೇಂಜ್

- 400 ಕಿ.ಮೀ (40ಎನ್6ಇ ಕ್ಷಿಪಣಿ 3)
- 240 ಕಿ.ಮೀ (48ಎನ್6ಡಿಎಂ ಇ3 ಕ್ಷಿಪಣಿ)
- 200 ಕಿ.ಮೀ (48ಎನ್6ಎಂ ಇ2 ಕ್ಷಿಪಣಿ)
- 150 ಕಿ.ಮೀ (48ಎನ್6ಇ ಕ್ಷಿಪಣಿ)
- 120 ಕಿ.ಮೀ (9ಎಂ96ಎಂ ಇ2)
- 40 ಕಿ.ಮೀ (9ಎಂ96 ಕ್ಷಿಪಣಿ)

ಸುದರ್ಶನನ ಪರಿಚಯ

ನಿರ್ಮಿತ ದೇಶ	: ರಷ್ಯಾ
ನಿರ್ಮಾಣಗೊಂಡ ವರ್ಷ	: 2007
ಭಾರತದ ಖರೀದಿಸಿದ್ದು ಯಾವಾಗ?	: 2018ರಲ್ಲಿ ಒಪ್ಪಂದ, 2021ಕ್ಕೆ ಅಳವಡಿಕೆ
ಕಾರ್ಯಾಚರಣೆ ವ್ಯಾಪ್ತಿ	: 40ರಿಂದ 400 ಕಿ.ಮೀ
ಗರಿಷ್ಠ ವೇಗ	: ನಿಮಿಷಕ್ಕೆ 288 ಕಿಮೀ
ಗರಿಷ್ಠ ಎತ್ತರ	: 30- 60 ಕಿಮೀ
ಎಷ್ಟು ದೂರ ಗುರಿ ಪತ್ತೆ	: 600 ಕಿಮೀ
ಭಾರತದಲ್ಲಿರುವ ಘಟಕ	: ಐದು ಘಟಕ

ಕಿ.ಮೀ (40ಎನ್6ಇ ಕ್ಷಿಪಣಿ 3)

ಸುದರ್ಶನ ಚಕ್ರದ ಹೆಸರೇಕೆ?

ರಷ್ಯಾದಿಂದ ಖರೀದಿಸಿದ ಎಸ್-400 ವಾಯು ರಕ್ಷಣಾ ವ್ಯವಸ್ಥೆಗೆ ಹಿಂದೂ ಪುರಾಣಗಳಿಂದ ಸ್ಫೂರ್ತಿ ಪಡೆದು ಸುದರ್ಶನ ಚಕ್ರ ಎಂದು ಹೆಸರಿ ಡಲಾಗಿದೆ. ವಿಷ್ಣು ಬಳಸುವ ಸುದರ್ಶನ ಚಕ್ರ ಪ್ರಬಲ ಆಯುಧವಾಗಿದೆ. ಅದೇ ರೀತಿ ಎಸ್-400 ಏರ್ ಡಿಫೆನ್ಸ್ ಸಿಸ್ಟಮ್ ಭಾರತದ ರಕ್ಷಣಾ ಶಸ್ತ್ರಾಗಾರದಲ್ಲಿ ಪ್ರಬಲ ಸಾಧನವಾಗಿದೆ. ಈ ಸಿಸ್ಟಮ್ ಅನ್ನು ರಷ್ಯಾ ತಯಾರಿಸಿದೆ. ಜಾಗತಿಕ ವಾಗಿ ಅತ್ಯಂತ ಮುಂದುವರಿದ ವಾಯು ರಕ್ಷಣಾ ವ್ಯವಸ್ಥೆಗಳಲ್ಲಿ ಒಂದಾಗಿದೆ. ಇದು 600 ಕಿಲೋ ಮೀಟರ್ ದೂರದವರೆಗಿನ ಗುರಿಗಳನ್ನು ಪತ್ತೆ ಹಚ್ಚುವ ಮತ್ತು 400 ಕಿಲೋ ಮೀಟರ್‌ಗಳವರೆ ಗಿನ ಗುರಿಗಳನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿವೆ.

ನಿಷ್ಕ್ರಿಯಗೊಳಿಸುವುದು ಹೇಗೆ?

▶▶ ದೂರಗಾಮಿ ವೀಕ್ಷಣಾ ರಡಾರ್ ಹಾರಿ ಬರುವ ಯಾವುದೇ ವಸ್ತುವನ್ನು ಗುರುತಿಸಿ, ಮಾಹಿತಿ ರವಾನಿಸುತ್ತದೆ

▶▶ ಕಮಾಂಡ್ ವೆಹಿಕಲ್ ವಸ್ತುವಿನ ಸ್ಥಳವನ್ನು ನಿಖರವಾಗಿ ಪತ್ತೆ ಹಚ್ಚುತ್ತದೆ

▶▶ ಎಂಗೇಜ್‌ಮೆಂಟ್ ವೆಹಿಕಲ್ ಕ್ಷಿಪಣಿಯನ್ನು ಗುರಿಯತ್ತ ಮಾರ್ಗದರ್ಶನ ಮಾಡುತ್ತದೆ

▶▶ ಲಾಂಚ್ ವೆಹಿಕಲ್ ನಿರ್ದಿಷ್ಟ ಗುರಿಯನ್ನು ಟಾರ್ಗೆಟ್ ಮಾಡಿ, ಉಡಾವಣಾ ವಾಹನದಿಂದ ಕ್ಷಿಪಣಿ ಉಡಾವಣೆ

ಕಾರ್ಯನಿರ್ವಹಣೆ ಹೇಗೆ?

ಎಸ್ 400 ರಡಾರ್‌ನ ಬಹುದೊಡ್ಡ ಲಾಭವೆಂದರೆ, ಎಲ್ಲಿಗೆ ಬೇಕಾದರೂ ಸುಲಭವಾಗಿ ಸಾಗಿಸಬಹುದಾಗಿದೆ. ಕೇವಲ ಐದರಿಂದ ಏಳು ನಿಮಿಷಯದಲ್ಲಿ ವಾಯು ರಕ್ಷಣಾ ಕ್ಷಿಪಣಿ ವಾಹನವನ್ನು ಹೋರಾಟಕ್ಕೆ ಅನುವುಗೊಳಿಸಬಹುದು. ಸುಮಾರು ಆರು ನೂರು ಕಿಮೀ ದೂರದಿಂದ ಶತ್ರುಗಳ ಕ್ಷಿಪಣಿ, ಯುದ್ಧ ವಿಮಾನವನ್ನು ಗುರುತಿಸಿರುವುದರಿಂದ 400 ಕಿಮೀ ದೂರದಲ್ಲಿಯೇ ದಾಳಿ ನಡೆಸಿ, ಹೊಡೆದು ಉರುಳಿಸ ಬಹುದು. ಇದನ್ನು ಆಕ್ಟಿವೇಟ್ ಮಾಡುತ್ತಿದ್ದಂತೆ ಕಾರ್ಯಾಚರಣೆ ಸುತ್ತಲೂ ಚಕ್ರದ ರೀತಿಯಲ್ಲಿ ಭದ್ರತಾ ಉಂಗುರವನ್ನು ಸೃಷ್ಟಿಸುವುದರಿಂದ, ಶತ್ರುಗಳ ವೈಮಾನಿಕ ದಾಳಿಯ ಹಾನಿಯನ್ನು ಬಹುಪಾಲು ತಪ್ಪಿಸಬಹುದು.

ತಪ್ಪದ ವಿವಾದ!

- 35000 ಕೋಟಿ ರು. ಮೊತ್ತದ ಕೊಟ್ಟು ಈ S-400 ಖರೀದಿಗೆ ಭಾರತದ ಪ್ರತಿಪಕ್ಷಗಳಿಂದ ವಿರೋಧ
- ಅಂದಿನ ರಕ್ಷಣಾ ಸಚಿವರಾಗಿದ್ದ ಮನೋಹರ್ ಪರಿಕ್ಕರ್ ಅವರಿಂದ ಇದನ್ನು ಖರೀದಿ ಮಾಡದಂತೆ ಹಲವರ ಒತ್ತಡ
- ರಷ್ಯಾ ನಿರ್ಮಿತ ಈ ರಕ್ಷಣಾ ವ್ಯವಸ್ಥೆ ಖರೀದಿಸಿದರೆ, ನಿರ್ಬಂಧ ಹೇರುವ ಎಚ್ಚರಿಕೆ ನೀಡಿದ್ದ ಅಮೆರಿಕ
- ಈ ಆ್ಯಂಟಿ ಮಿಸೈಲ್ ಸಿಸ್ಟಂ ಖರೀದಿಗೆ ಬಿಜೆಪಿಯ ಕೆಲ ನಾಯಕರಿಂದಲೂ ಆಕ್ಷೇಪ
- ಯುದ್ಧವೇ ಮಾಡದ ಭಾರತಕ್ಕೆ ಇದರ ಅಗತ್ಯವೇನೆಂದು ಮೂಗುಮುರಿದವರೇ ಹೆಚ್ಚು



ವಿಮಾನ ನಿಲ್ದಾಣ ಭದ್ರತೆ: ಶಾ ಸಭೆ

ದೆಹಲಿ: ಭಾರತ-ಪಾಕಿಸ್ತಾನ ಸೇನಾ ಸಂಘರ್ಷ ಹಿನ್ನೆಲೆ ಕೇಂದ್ರ ಗೃಹ ಸಚಿವ ಅಮಿತ್ ಶಾ ದೇಶದ ಗಡಿ ಭಾಗದ ಮತ್ತು ಇತರೆಡೆಯ ವಿಮಾನ ನಿಲ್ದಾಣಗಳಲ್ಲಿನ ಭದ್ರತಾ ವ್ಯವಸ್ಥೆಯ ಪರಿಶೀಲನೆ ನಡೆಸಿ ಮಾಹಿತಿ ಪಡೆದುಕೊಂಡರು. ವಿಮಾನ ನಿಲ್ದಾಣಗಳಲ್ಲಿ ಭದ್ರತಾ ವ್ಯವಸ್ಥೆಯನ್ನು ಹೆಚ್ಚಿಸಲು ತೆಗೆದುಕೊಂಡ ಕ್ರಮಗಳ ಬಗೆಗೂ ಶಾ ಮಾಹಿತಿ ಪಡೆದುಕೊಂಡರು. ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್, ಗುಪ್ತಚರ ಬ್ಯೂರೊ ನಿರ್ದೇಶಕ ತಪನ್ ದೇಕಾ ಮತ್ತು ಬಿಎಸ್‌ಎಫ್, ಸಿಐಎಸ್ ಎಫ್ ಮತ್ತು ನಾಗರಿಕ ವಿಮಾನಯಾನ ಭದ್ರತಾ ಬ್ಯೂರೊ ಮಹಾನಿರ್ದೇಶಕರು ಸಭೆಯಲ್ಲಿದ್ದರು. ಗಡಿ ಭದ್ರತಾ ಪಡೆ (ಬಿಎಸ್ ಎಫ್) ಭಾರತ-ಪಾಕ್ ಗಡಿ ಕಾಯುತ್ತದೆ. ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ದೇಶದ ವಿಮಾನ ನಿಲ್ದಾಣಗಳು, ಮೆಟ್ರೊ ನಿಲ್ದಾಣ ಮತ್ತು ಜಾಲ ಹಾಗೂ ಇತರೆ ಪ್ರಮುಖ ಸ್ಥಳಗಳ ಭದ್ರತಾ ವ್ಯವಸ್ಥೆ ನಿರ್ವಹಣೆ ಜವಾಬ್ದಾರಿ ಹೊಂದಿದೆ.



ಪ್ರಜಾಪ್ರಭುತ್ವ ದೇಶದಲ್ಲಿ ಭಯೋತ್ಪಾದನೆಗೆ ಜಾಗವಿಲ್ಲ. ಪಾಕಿಸ್ತಾನ ನಡೆಸುತ್ತಿದ್ದ ಗಡಿಯಾಚೆಗಿನ ಭಯೋತ್ಪಾದನೆ ಚಟುವಟಿಕೆಗಳಿಗೆ ಭಾರತೀಯ ಸೇನಾಪಡೆಗಳು ತಕ್ಕ ಪಾಠ ಕಲಿಸುತ್ತಿವೆ. ಪ್ರಧಾನಿ ಮೋದಿ ನೇತೃತ್ವದ ಸರಕಾರ ಕಠಿಣ ಕ್ರಮ ಕೈಗೊಳ್ಳಲಿದೆ.

-ಎನ್.ಚಂದ್ರಬಾಬುನಾಯ್ಡು ಆಂಧ್ರ ಸಿಎಂ

'ಟೆರಿಟೋರಿಯಲ್ ಆರ್ಮಿ' ಜಮಾವಣೆ | ಸೇನಾಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ರಕ್ಷಣಾ ಸಚಿವಾಲಯ ಅನುಮತಿ

ನೇರಾನೇರ ಯುದ್ಧಕ್ಕೆ ಭಾರತ ಸೇನಾಪಡೆ ಸಿದ್ಧತೆ

ದೆಹಲಿ: ಮೂರು ದಿನಗಳಿಂದ ಕ್ಷಿಪಣಿ ದಾಳಿ, ಡ್ರೋನ್ ಬಳಕೆ ಮೂಲಕ ಪಾಕಿಸ್ತಾನದ ವಿರುದ್ಧ 'ಆಪರೇಷನ್ ಸಿಂದೂರ್' ಹೆಸರಲ್ಲಿ ಸೇನಾ ಕಾರ್ಯಾಚರಣೆ ನಡೆಸಿದ ಭಾರತ, ಮುಂದಿನ ಹೆಜ್ಜೆಯಾಗಿ 'ನೇರಾನೇರ ಯುದ್ಧ'ಕ್ಕೆ ಸಿದ್ಧವಾಗುತ್ತಿದೆ.

ಭಾರತ-ಪಾಕಿಸ್ತಾನ ನಡುವಿನ ಸದ್ಯದ ಯುದ್ಧ ಪರಿಸ್ಥಿತಿಯ ಮಧ್ಯೆಯೇ ಕೇಂದ್ರ ಸರಕಾರ ಮಹತ್ವದ ಕ್ರಮ ಕೈಗೊಂಡಿದೆ. 'ಟೆರಿಟೋರಿಯಲ್ ಆರ್ಮಿ'ಯನ್ನು ದೇಶದ ಗಡಿ ಭಾಗದಲ್ಲಿ ಜಮಾವಣೆ ಮಾಡುವ ಸಂಬಂಧ ನಿರ್ಣಯ ಕೈಗೊಳ್ಳುವುದಕ್ಕೆ ಸೇನಾಪಡೆ ಮುಖ್ಯಸ್ಥರಿಗೆ ಪೂರ್ಣ ಅಧಿಕಾರವನ್ನು ರಕ್ಷಣಾ ಸಚಿವಾಲಯ ಶುಕ್ರವಾರ ನೀಡಿ ಆದೇಶ ಹೊರಡಿಸಿದೆ. ಆ ಮೂಲಕ ನೇರವಾದ ಯುದ್ಧಕ್ಕೆ ಭಾರತದ ಸೇನಾಪಡೆ ಸಿದ್ಧವಾಗುತ್ತಿದೆ ಎಂದು ಅರ್ಥೈಸಲಾಗಿದೆ.

ಟೆರಿಟೋರಿಯಲ್ ಆರ್ಮಿ ನಿಮಯ-1948ರ ರೂಲ್ 33ರ ಅನ್ವಯ ಟೆರಿಟೋರಿಯಲ್ ಆರ್ಮಿಯನ್ನು ಸ್ಥಳಾಂತರಿಸುವ ಮತ್ತು ಅಗತ್ಯ ಇರುವೆಡೆ ಜಮಾವಣೆಗೊಳಿಸುವ ಸಂಬಂಧ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಸೇನಾಪಡೆ ಮುಖ್ಯಸ್ಥರಿಗೆ ನೀಡಲಾಗಿದೆ. ಸೇನಾಪಡೆ ಮುಖ್ಯಸ್ಥರು ಈಗ 'ಟೆರಿಟೋರಿಯಲ್ ಆರ್ಮಿಯ' ವಿವಿಧ ವಿಭಾಗಗಳ ಅಧಿಕಾರಿಗಳು ಮತ್ತು ನಿರ್ದಿಷ್ಟ ಸೇನಾನಿಗಳಿಗೆ ಸೂಕ್ತ ರೀತಿ ಕರೆ ಕೊಡಬಹುದಾಗಿದೆ. ವಾಸ್ತವ ಸೇನಾಪಡೆಗೆ ಅಗತ್ಯ ಭದ್ರತೆ ಒದಗಿಸುವ ಮತ್ತು ಸೇನೆ ಕೈಗೊಳ್ಳುವ ಕ್ರಮಗಳಲ್ಲಿ ಜತೆಗಿದ್ದು ನೆರವಾಗುವ ಕಾರ್ಯಗಳನ್ನೂ ಟೆರಿಟೋರಿಯಲ್ ಆರ್ಮಿಗೆ ವಹಿಸಲು ಸೇನಾಪಡೆ ಮುಖ್ಯಸ್ಥರಿಗೆ ಅಧಿಕಾರ ನೀಡಲಾಗಿದೆ ಎಂದುಅ ರಕ್ಷಣಾ ಸಚಿವಾಲಯ ಶುಕ್ರವಾರ ಮಧ್ಯಾಹ್ನ ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಟೆರಿಟೋರಿಯಲ್ ಆರ್ಮಿ

14 ಇನ್‌ಫ್ಯಾಂಟ್ರಿ ಬೆಟಾಲಿಯನ್

ಟೆರಿಟೋರಿಯಲ್ ಆರ್ಮಿಯಲ್ಲಿ ಸದ್ಯಕ್ಕಿರುವ 32 ಇನ್‌ಫ್ಯಾಂಟ್ರಿ ಬೆಟಾಲಿಯನ್‌ಗಳಲ್ಲಿ 14 ಇನ್‌ಫ್ಯಾಂಟ್ರಿ ಬೆಟಾಲಿಯನ್‌ಗಳನ್ನು ದಕ್ಷಿಣ ಕಮಾಂಡ್, ಪೂರ್ವ ಕಮಾಂಡ್, ಪಶ್ಚಿಮ ಕಮಾಂಡ್, ಸೆಂಟ್ರಲ್ ಕಮಾಂಡ್, ಉತ್ತರ ಕಮಾಂಡ್, ನೈರುತ್ಯ ಕಮಾಂಡ್, ಅಂಡಮಾನ್-ನಿಕೋಬಾರ್ ಮತ್ತು ಆರ್ಮಿ ಟ್ರೇನಿಂಗ್ ಕಮಾಂಡ್‌ಗಳಿಗೆ ನಿಯೋಜಿಸಬಹುದಾಗಿದೆ.

ಟೆರಿಟೋರಿಯಲ್ ಆರ್ಮಿ ವೈಶಿಷ್ಟ್ಯ

ಭಾರತೀಯ ಸೇನಾಪಡೆ ಮುಂಚೂಣಿ ನೆಲೆಯ ಸೇನೆಯಾಗಿದ್ದರೆ, 'ಟೆರಿಟೋರಿಯಲ್ ಆರ್ಮಿ'(ಟಿಎ) ರಕ್ಷಣಾ ಪಡೆಯ ಎರಡನೇ ಶ್ರೇಣಿಯಲ್ಲಿ ಬರುತ್ತದೆ. ಸೇನಾಪಡೆ ದೇಶದ ಭದ್ರತೆಗಾಗಿ ಮುಂಚೂಣಿಯಲ್ಲಿ ನಿಂತು ಹೋರಾಡಿದರೆ, 'ಟಿಎ' ಯುದ್ಧ ಮತ್ತು ತುರ್ತು ಸಂದರ್ಭಗಳಲ್ಲಿ ಸೇನಾಪಡೆಗೆ ಸಹಾಯಕವಾಗಿ ಕೆಲಸ ಮಾಡುತ್ತದೆ. ಜತೆಗೆ ಅದು ಮೀಸಲು ಸೇನಾಪಡೆಯಾಗಿಯೂ 'ಅರೆಕಾಲಿಕ ಜವಾಬ್ದಾರಿ' ಹೊರುತ್ತದೆ. ಭಾರತದ ಟೆರಿಟೋರಿಯಲ್ ಆರ್ಮಿಗೆ ಕ್ರಿಕೆಟಿಗ ಮಹೇಂದರ್ ಸಿಂಗ್ ದೋನಿ ಮತ್ತು ಮಲಯಾಳಂ ಚಿತ್ರ ನಟ ಮೋಹನ್ ಲಾಲ್ ಗೌರವ ಪ್ರತಿನಿಧಿಗಳಾಗಿದ್ದಾರೆ ಎಂಬುದು ಉಲ್ಲೇಖಾರ್ಹ.

ಶತ್ರು ಕ್ಷಿಪಣಿ ಧ್ವಂಸಕಾರಿ 'ಆಕಾಶ್' ಘಟಕಕ್ಕೆ ಮೆಚ್ಚುಗೆ
ಸೇನಾಪಡೆಗಳ ಮುಖ್ಯಸ್ಥರ ಜತೆ ರಾಜನಾಥ್ ಸಿಂಗ್ ಸಭೆ

ದೆಹಲಿ: ಭಾರತ-ಪಾಕಿಸ್ತಾನ ಕದನ ಹಿನ್ನೆಲೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶುಕ್ರವಾರ ಬೆಳಗ್ಗೆ ದೆಹಲಿಯ ಸೌತ್ ಬ್ಲಾಕ್‌ನಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಮುಖ್ಯಸ್ಥ(ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಹಾಗೂ ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆಗಳ ಮೂವರು ಮುಖ್ಯಸ್ಥರ ಜತೆ ದೇಶದ ಭದ್ರತೆ, ಯುದ್ಧ ಸಿದ್ಧತೆ ಕುರಿತು ಉನ್ನತ ಮಟ್ಟದ ಸಭೆ ನಡೆಸಿ ಮಾಹಿತಿ ಪಡೆದುಕೊಂಡರು.

ಸಭೆಯಲ್ಲಿ ಮೊದಲಿಗೆ 'ಸಿಡಿಎಸ್' ಜನರಲ್ ಅನಿಲ್ ಚೌಹಾಣ್, ಗಡಿ ಭಾಗಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು ಮತ್ತು ಸೇನೆಯ ಮೂರೂ ಪಡೆಗಳ ಕಾರ್ಯತಂತ್ರ ಕುರಿತು ಸಚಿವ ರಾಜನಾಥ್ ಸಿಂಗ್ ಅವರಿಗೆ ವಿವರ ನೀಡಿದರು. ಭವಿಷ್ಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತೂ ಸಭೆ ಚರ್ಚೆ ನಡೆಸಿತು.

ರಕ್ಷಣಾ ಕಾರ್ಯದರ್ಶಿ ಆರ್.ಕೆ.ಸಿಂಗ್, ಸೇನಾಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ ತ್ರಿಪಾಠಿ ಮತ್ತು ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಸಭೆಯಲ್ಲಿದ್ದರು.

ಭಾರತದ ಗಡಿಯಂಚಿನ ರಾಜ್ಯಗಳಲ್ಲಿನ ಪ್ರಮುಖ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡೇ ಪಾಕ್ ಸೇನೆ ಡ್ರೋನ್, ಕ್ಷಿಪಣಿ ದಾಳಿ ನಡೆಸುತ್ತಿದೆ. ಅದನ್ನು ಯಶಸ್ವಿಯಾಗಿ ಆಕಾಶದಲ್ಲಿಯೇ ತಡೆದು ನಾಶಪಡಿಸುವಲ್ಲಿ ಭಾರತದಲ್ಲೇ ಅಭಿವೃದ್ಧಿಪಡಿಸಲಾದ ಮೇಲ್ಮೈಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ 'ಆಕಾಶ್' ನಿರ್ಣಾಯಕ ಪಾತ್ರ ವಹಿಸಿದೆ. ಸೇನಾಪಡೆ ಮತ್ತು ವಾಯುಪಡೆಗಳ ಬಳಿ ಇರುವ ಕ್ಷಿಪಣಿ ನಾಶ ಪಡಿಸುವ 2 ಆಕಾಶ್ ಘಟಕಗಳನ್ನು ಪಾಕ್ ಗಡಿಯಲ್ಲಿರಿಸಲಾಗಿದೆ ಎಂದು ಅಧಿಕಾರಿಗಳು ಸಭೆಗೆ ವಿವರಿಸಿದ್ದಾರೆ. ಶತ್ರುಪಡೆಯ ಕ್ಷಿಪಣಿ ನಾಶ ಪಡಿಸುವ 'ಆಕಾಶ್' ನೆಲದಿಂದ ಆಕಾಶಕ್ಕೆ ಜಿಗಿಯುವ ಮಧ್ಯಮ ಶ್ರೇಣಿಯ ಕ್ಷಿಪಣಿ ಧ್ವಂಸ ವ್ಯವಸ್ಥೆಯಾಗಿದೆ. ದೊಡ್ಡ ಟ್ರಕ್‌ಗಳಲ್ಲಿ ಈ ಘಟಕವನ್ನು ಎಲ್ಲಿಗೆ ಬೇಕೆಂದರೆ ಅಲ್ಲಿಗೆ ಸ್ಥಳಾಂತರಿಸಬಹುದಾಗಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ದೆಹಲಿಯ ಸೌತ್ ಬ್ಲಾಕ್‌ನಲ್ಲಿ ಶುಕ್ರವಾರ 'ಸಿಡಿಎಸ್' ಜ.ಅನಿಲ್ ಚೌಹಾಣ್, ಸೇನೆ ಮುಖ್ಯಸ್ಥ ಜ.ಉಪೇಂದ್ರ ದ್ವಿವೇದಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಮತ್ತು ಐಎಎಫ್ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಜತೆ ಸಭೆ ನಡೆಸಿದರು.

138 ವಿಮಾನಗಳ ಹಾರಾಟ ರದ್ದು

ದೆಹಲಿ: ಭಾರತ-ಪಾಕ್ ಯುದ್ಧ ಹಿನ್ನೆಲೆ ದೆಹಲಿ ವಿಮಾನ ನಿಲ್ದಾಣದಿಂದ ಸಂಚಾರ ನಡೆಸಬೇಕಿದ್ದ ವಿವಿಧ ವಿಮಾನಯಾನ ಸಂಸ್ಥೆಗಳ 138 ವಿಮಾನಗಳನ್ನು ಹಾರಾಟವನ್ನು ಶುಕ್ರವಾರ ರದ್ದುಗೊಳಿಸಿದ್ದವು. ಬೆಳಗ್ಗೆ 5ರಿಂದ ಮಧ್ಯಾಹ್ನ 2ರವರೆಗೆ ದೇಶೀಯ ಮಾರ್ಗಗಳಲ್ಲಿನ ದೆಹಲಿಯಿಂದ ನಿರ್ಗಮನದ 66 ಮತ್ತು ದೆಹಲಿಗೆ ಆಗಮನದ 63 ವಿಮಾನಗಳು ಹಾಗೂ ಅಂತಾರಾಷ್ಟ್ರೀಯ ಮಾರ್ಗದಲ್ಲಿ ನಿರ್ಗಮನದ 5 ಮತ್ತು ಆಗಮನದ 4 ವಿಮಾನಗಳ ಹಾರಾಟವನ್ನು ಭದ್ರತಾ ದೃಷ್ಟಿಯಿಂದ ರದ್ದು ಮಾಡಲಾಗಿತ್ತು. ಉಳಿದಂತೆ ದೆಹಲಿ ವಿಮಾನ ನಿಲ್ದಾಣದ ಕಾರ್ಯಾಚರಣೆ ಸಾಮಾನ್ಯವಾಗಿತ್ತು. ಭದ್ರತಾ ಕ್ರಮಗಳಿಂದಾಗಿ ಕೆಲವು ವಿಮಾನಗಳ ಸಂಚಾರ ಅವಧಿಯ ಮೇಲೆ ಪರಿಣಾಮ ಬೀರಬಹುದು ಎಂದು ವಿಮಾನ ನಿಲ್ದಾಣ ಅಧಿಕೃತ ಹೇಳಿಕೆ ಪ್ರಕಟಿಸಿತ್ತು.

ಫ್ಯಾಕ್ಟ್ ಚೆಕ್

ಸುಳ್ಳೇನು?

ಭಾರತೀಯ ಸೇನೆಯಿಂದ ಪಾಕಿಸ್ತಾನ ಸೇನೆಯ ಮೇಲೆ ದಾಳಿ ಮಾಡಿ, ಸಂಪೂರ್ಣ ನಾಶಪಡಿಸಲಾಗಿದೆ.

ಸತ್ಯವೇನು?

ಇದು ಸಂಪೂರ್ಣ ಸುಳ್ಳು ಸುದ್ದಿಯಾಗಿದ್ದು, ಈ ಸುದ್ದಿ ಹರಡುತ್ತಿರುವ ಯಾವುದೇ ಖಾತೆಗಳು ವೆರಿಫೈ ಆಗಿಲ್ಲ. ಇದರೊಂದಿಗೆ 20ರಾಜ್ ಬೆಟಲಿಯನ್ ಎನ್ನುವ ಯಾವುದೇ ಸೇನಾ ರೆಜಿಮೆಂಟ್ ಭಾರತೀಯ ಸೇನೆಯಲ್ಲಿಲ್ಲ.

ಭಾರತದ ವಿರೋಧ ಲೆಕ್ಕಿಸದೆ ಇಎಂಎಫ್ ಸಾಲ ಮಂಜೂರು

ಪಾಕ್‌ಗೆ 100 ಕೋಟಿ ಡಾಲರ್ ಸಾಲ

ದೆಹಲಿ: ಭಾರತದ ವಿರೋಧದ ನಡುವೆಯೂ ಪಾಕಿಸ್ತಾನಕ್ಕೆ ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್)ಕಾರ್ಯಕಾರಿ ಮಂಡಳಿಯು ತನ್ನ ವಿಸ್ತೃತ ನಿಧಿ ಸೌಲಭ್ಯ (ಇಎಫ್‌ಎಫ್) ಅಡಿಯಲ್ಲಿ ಪಾಕಿಸ್ತಾನಕ್ಕೆ 100 ಕೋಟಿ ಡಾಲರ್‌ಗಳ ಎರಡನೇ ಸಾಲದ ಕಂತನ್ನು ವಿತರಿಸಲು ಅನುಮೋದನೆ ನೀಡಿದೆ.

ರಾಜ್ಯ ಪ್ರಾಯೋಜಿತ ಭಯೋತ್ಪಾದನೆಗೆ ಹಣಕಾಸಿನ ನೆರವು ಎಂದು ಭಾರತ ಕಳವಳ ವ್ಯಕ್ತಪಡಿಸಿ, ಪಾಕಿಸ್ತಾನಕ್ಕೆ ಸಾಲ ನೀಡುವ ಸಂಬಂಧ ಮತದಾನದಿಂದ ಭಾರತ ದೂರ ಉಳಿಯಿತು.

ಪುನರಾವರ್ತಿತ ಆರ್ಥಿಕ ಬಿಕ್ಕಟ್ಟುಗಳು ಮತ್ತು ಹಿಂದಿನ ಐಎಂಎಫ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಕಳಪೆ ದಾಖಲೆಯಿಂದ ಗುರುತಿಸಲ್ಪಟ್ಟ ಇಎಫ್‌ಎಫ್ ಕಾರ್ಯಕ್ರಮದ ಅಡಿಯಲ್ಲಿ ಪಾಕಿಸ್ತಾನದ ಪ್ರಗತಿಯನ್ನು ಐಎಂಎಫ್ ಪರಿಶೀಲಿಸಿದ ನಂತರ ಈ ಅನುಮೋದನೆ ನೀಡಲಾಗಿದೆ. ಹಿಂದಿನ ಐಎಂಎಫ್ ಸಾಲಗಳನ್ನು ಪರಿಣಾಮಕಾರಿಯಾಗಿ ಬಳಸುವಲ್ಲಿ ಪಾಕಿಸ್ತಾನದ ನಿರಂತರ ವೈಫಲ್ಯದ ಬಗ್ಗೆ ಭಾರತ ಎಚ್ಚರಿಕೆ ನೀಡಿತ್ತು. ನಿಧಿಯ ಕಾರ್ಯಕ್ರಮ ವಿನ್ಯಾಸಗಳು ಮತ್ತು ಮೇಲ್ವಿಚಾರಣಾ ಕಾರ್ಯವಿಧಾನಗಳು ದೇಶದ ಆರ್ಥಿಕ ಮತ್ತು ರಾಜಕೀಯ ವಾಸ್ತವಗಳಿಗೆ ಹೊಂದಿಕೊಳ್ಳುತ್ತವೆಯೇ ಎಂದು ಪ್ರಶ್ನಿಸಿತ್ತು.

ಕಳೆದ ಐದು ವರ್ಷಗಳಲ್ಲಿ ನಾಲ್ಕು ಐಎಂಎಫ್ ಕಾರ್ಯಕ್ರಮಗಳ ಹೊರತಾಗಿಯೂ, ಪಾಕಿಸ್ತಾನವು ಆರ್ಥಿಕ ಅಸ್ಥಿರತೆಯನ್ನು ಎದುರಿಸುತ್ತಲೇ ಇದೆ ಎಂದು ಭಾರತ ಎತ್ತಿ ತೋರಿಸಿದೆ. ಇದರಿಂದಾಗಿ ಭವಿಷ್ಯದ ಸಾಲ ನೀಡಿಕೆಯು ಹೆಚ್ಚಿನ ಯಶಸ್ಸನ್ನು ನೀಡುತ್ತವೆಯೇ ಎಂಬುದು ಸ್ಪಷ್ಟವಾಗಿಲ್ಲ ಎಂದು ಭಾರತ ಗಮನ ಸೆಳೆದಿತ್ತು.

ಹಲವು ರಾಷ್ಟ್ರಗಳ ಬಳಿ ಭಿಕ್ಷಾಟನೆ: ಭಾರತದ ದಾಳಿಗೆ ಕಂಗಲಾಗಿರುವ ಪಾಕಿಸ್ತಾನ ಇದೀಗ ಇದೀಗ ಸಾರ್ವಜನಿಕ ವೇದಿಕೆಯಲ್ಲೇ ಹಣ ನೀಡುವಂತೆ ಗೋಗರೆದಿದೆ. ಪಾಕಿಸ್ತಾನ ಸರಕಾರದ ಅಧಿಕೃತ ಖಾತೆಯಲ್ಲಿ ಟ್ವೀಟ್ ಮಾಡಿ, ಕುಸಿಯುತ್ತಿರುವ ನಮ್ಮ ಆರ್ಥಿಕತೆಗೆ ನಮ್ಮ ಅಂತಾರಾಷ್ಟ್ರೀಯ ಪಾಲುದಾರರು ಹಣಕಾಸಿನ ನೆರವು ನೀಡುವಂತೆ ಗೋಗರೆದಿದೆ.

''ನಮ್ಮ ಶತ್ರುಗಳಿಂದ ಉಂಟಾದ ಭಾರೀ ನಷ್ಟದ ನಂತರ ಹೆಚ್ಚಿನ ಸಾಲಕ್ಕಾಗಿ ಪಾಕಿಸ್ತಾನ ಸರಕಾರವು ಅಂತರರಾಷ್ಟ್ರೀಯ ಪಾಲುದಾರರಿಗೆ ಮನವಿ ಮಾಡುತ್ತಿದೆ. ನಾವು ಅಂತರರಾಷ್ಟ್ರೀಯ ಪಾಲುದಾರರು ಯುದ್ಧದ ಉದ್ವೇಗವನ್ನು ಕಡಿಮೆ ಮಾಡುವಲ್ಲಿ ಸಹಾಯ ಮಾಡಲು ವಿನಂತಿಸುತ್ತೇವೆ. ಜನತೆಗೆ ಧೈರ್ಯದಿಂದ ಸ್ಥಿರವಾಗಿರಲು ಕರೆ ನೀಡಲಾಗಿದೆ ಎಂದು ಬರೆಯಲಾಗಿದೆ. ಜೊತೆಗೆ ಈ ಟ್ವೀಟ್‌ನ್ನು ವಿಶ್ವ ಬ್ಯಾಂಕ್‌ಗೆ ಟ್ಯಾಗ್ ಮಾಡಲಾಗಿತ್ತು. ಈ ರೀತಿ ಟ್ವೀಟ್ ಮಾಡಿದ ಬಳಿಕ ಜನರು ಪಾಕಿಸ್ತಾನವನ್ನು ಹಿಗ್ಗಾಮುಗ್ಗ ಟ್ರೋಲ್ ಮಾಡುತ್ತಿದ್ದಾರೆ. ನಿಮಗೆ ತಿನ್ನೋಕೆ ಅನ್ನವಿಲ್ಲ, ಭಾರತದ ವಿರುದ್ಧ ಯುದ್ಧಕ್ಕೆ ಹೋಗುತ್ತಿದ್ದೀರಿ. ನಿಮಗೆ ನಾಚಿಕೆ ಆಗಲ್ವೇ ಎಂದೆಲ್ಲ ಜನರು ಕಾಮೆಂಟ್ ಮಾಡುತ್ತಿದ್ದಾರೆ.

ಸಿಂದೂರಗೆ ವಿಶ್ವದ ಪ್ರಮುಖ ದೇಶಗಳ ಬೆಂಬಲ

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕಾರವಾಗಿ ಭಾರತದ ಸೇನಾಪಡೆಗಳು ಪಾಕಿಸ್ತಾನದ ವಿರುದ್ಧ ಬುಧವಾರ ನಸುಕಿನ 1.05 ಗಂಟೆಯಲ್ಲಿ ಆರಂಭಿಸಿದ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆಗೆ ವಿಶ್ವದ ಪ್ರಮುಖ ದೇಶಗಳು ಬೆಂಬಲ ವ್ಯಕ್ತಪಡಿಸಿವೆ. ಇದು ಭಾರತದ ನೈತಿಕ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ.

ಪಾಕ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಲ್ಲಿನ 9 ಉಗ್ರರ ನೆಲೆಗಳನ್ನಷ್ಟೇ ಗುರಿಯಾಗಿಸಿ ಭಾರತದ ಸೇನಾಪಡೆಗಳು ಯೋಜಿತವಾಗಿ ಕ್ಷಿಪಣಿ ದಾಳಿ ನಡೆಸಿವೆ. ಅಲ್ಲದೇ, ಸಾರ್ವ ಜನಿಕರು ಮತ್ತು ಪಾಕ್ ಸೇನಾ ನೆಲೆಗಳಿಗೆ ಹಾನಿ ಆಗದಂತೆಯೂ ನೋಡಿಕೊಂಡಿವೆ. ಈ ಯೋಜಿತ ಹಾಗೂ ಗುರಿಯಿಟ್ಟು ನಿಯಂತ್ರಿತ ರೀತಿಯಲ್ಲಿ ನಡೆಸಿದ ಸೇನಾ ಕಾರ್ಯಾ ಚರಣೆಗೆ ಯುನೈಟೆಡ್ ಕಿಂಗ್ಡಂ, ರಷ್ಯಾ, ಇಸ್ರೇಲ್, ಅಮೆರಿಕ, ಪನಾಮಾ ಹಾಗೂ ಕೆಲವು ಮುಸ್ಲಿಂ ರಾಷ್ಟ್ರಗಳೂ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿವೆ. 'ಭಾರತದ ಕ್ರಮ ಸಕಾರಣವಾಗಿಯೇ ಇದೆ. ಭಾರತವೇನೂ ಮೊದಲಿಗನಾಗಿ ದಾಳಿ ನಡೆಸಿಲ್ಲ. ಭಯೋತ್ಪಾದನೆ ದಾಳಿಗೆ ಪ್ರತಿಕ್ರಿಯೆ ನೀಡಿದೆ ಅಷ್ಟೇ' ಎಂದು ಈ ದೇಶಗಳ ನಾಯಕರ ಸಂದೇಶದ ಸಾರಾಂಶವಾಗಿದೆ. ಈ ಮಾಹಿತಿಯನ್ನು ಭಾರತ ಸರಕಾರ ಸುದ್ದಿಸಂಸ್ಥೆಗಳ ಜತೆಗೆ ಶುಕ್ರವಾರ ಹಂಚಿಕೊಂಡಿದೆ.

'ಆಪರೇಷನ್ ಸಿಂದೂರ್'ಗೆ ಮೊದಲಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದ ಯುನೈಟೆಡ್ ಕಿಂಗ್ಡಂ. 'ಪಹಲ್ಗಾಮ್ ದಾಳಿಗೆ ಕಾರಣವಾದವರಿಗೆತಿರುಗೇಟು ನೀಡುವುದಕ್ಕೆ ಭಾರತಕ್ಕೆ ಅಧಿಕಾರವಿದೆ' ಎಂದು ಬ್ರಿಟನ್ ವಿದೇಶಾಂಗ ಸಚಿವ ಡೇವಿಡ್ ಲ್ಯಾಮಿ ಹೇಳಿದ್ದಾರೆ.

ಬ್ರಿಟನ್ ಮಾಜಿ ಪ್ರಧಾನಿ ರಿಷಿ ಸುನಕ್ ಕೂಡಾ 'ಗಡಿಯಾಚೆಗಿನ ಭಯೋತ್ಪಾದನೆಯನ್ನು ಯಾವುದೇ ಪ್ರಜಾಪ್ರಭುತ್ವ ದೇಶ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ' ಎಂದಿದ್ದಾರೆ.

'ಭಯೋತ್ಪಾದನೆ ಸರ್ವತಾ ಖಂಡನಾರ್ಹ. ಅದರ ಧಮನಕ್ಕೆ ಕ್ರಮ ಅನಿವಾರ್ಯ' ಎಂದಿರುವ ರಷ್ಯಾ ವಿದೇಶಾಂಗ ಸಚಿವ, ಅದೇ ವೇಳೆ, ರಾಜತಾಂತ್ರಿಕವಾಗಿ ಸಮಸ್ಯೆ ಪರಿಹರಿಸಿಕೊಳ್ಳಲು ಎರಡೂ ದೇಶಗಳೂ ಪ್ರಯತ್ನಿಸಬಹುದಾಗಿದೆ ಎಂದೂ ಹೇಳಿದ್ದಾರೆ. 'ಭಯೋತ್ಪಾದನೆಯನ್ನು ಕ್ಷಮಿಸಲು ಸಾಧ್ಯವೇ ಇಲ್ಲ' ಎಂದಿರುವ ಇಸ್ರೇಲ್, ಆತ್ಮರಕ್ಷಣೆಗೆ ಕ್ರಮ ಕೈಗೊಳ್ಳಲು ಭಾರತಕ್ಕೆ ಪೂರ್ಣ ಅರ್ಹತೆ ಇದೆ ಎಂದು ಪ್ರತಿಕ್ರಿಯಿಸಿದೆ. ಯೂರೋಪ್ ಒಕ್ಕೂಟ ಮತ್ತು ಅದರ 27 ದೇಶಗಳು ಸದಸ್ಯ ದೇಶಗಳು ಜಂಟಿ ಹೇಳಿಕೆಯಲ್ಲಿ, ಭಾರತ ಕೈಗೊಂಡ ಕ್ರಮವನ್ನು ಬೆಂಬಲಿಸಿವೆ.

ಅಮೆರಿಕ ಭಾರತದ ಜತೆಯಾಗಿ ನಿಲ್ಲುವ ಮಾತನಾಡಿದೆ. ಭಾರತ ಕೈಗೊಂಡಿರುವ ಭಯೋತ್ಪಾದನೆ ದಮನ ಕಾರ್ಯ ಸರಿಯಾಗಿಯೇ ಇದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆಂಬಲ ವ್ಯಕ್ತಪಡಿಸಿದ್ದಾರೆ. ಜತೆಗೆ ಸಂಯಮ ವಹಿಸುವ ಅಗತ್ಯವನ್ನೂ ಎರಡೂ ದೇಶಗಳಿಗೂ ತಿಳಿಸಿಕೊಟ್ಟಿದ್ದಾರೆ. ಸೌದಿ ಅರೇಬಿಯ, ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಮತ್ತು ಕತಾರ್, ಪ್ರಾದೇಶಿಕವಾಗಿ ಶಾಂತಿ ಸ್ಥಾಪನೆಗೆ ಕರೆ ನೀಡಿವೆ. ಜತೆಗೆ ಭಯೋತ್ಪಾದನೆ ದಮನಿಸುವ ಭಾರತದ ಕಾರ್ಯವನ್ನು ಬೆಂಬಲಿಸಿವೆ.

ಪ್ರಧಾನಿ ಷೇಕ್ ಹಸೀನಾ ಪದಚ್ಯುತಿ ನಂತರ ಭಾರತದ ಜತೆ ಸಂಘರ್ಷಕ್ಕಿಳಿಯಲು ಸಜ್ಜಾಗಿದ್ದ ಬಾಂಗ್ಲಾದೇಶದ ಪ್ರತಿಕ್ರಿಯೆ ಅಚ್ಚರಿಗೆ ಕಾರಣವಾಗಿದೆ. ಭಯೋತ್ಪಾದನೆ ದಮನಕ್ಕೆ ಆಪರೇಷನ್ ಸಿಂದೂರ್ ಆರಂಭಿಸಿರುವುದನ್ನು ಸರಿಯಾದ ಕ್ರಮ ಎಂದು ಬಾಂಗ್ಲಾ ಹೇಳಿದೆ.

ಪನಾಮಾ ರಾಷ್ಟ್ರವೂ ಭಯೋತ್ಪಾದನೆ ವಿರುದ್ಧದ ಭಾರತದ ಕ್ರಮ ಸರಿಯಾಗಿಯೇ ಇದೆ. ಇದನ್ನೇ ವಿಶ್ವಾದ್ಯಂತ ಮುಂದುವರಿಸಬೇಕಿದೆ ಎಂದು ಹೇಳಿದೆ.

ಭಾರತ-ಪಾಕ್ ನಡುವೆ ಅಣ್ವಸ್ತ್ರ ಯುದ್ಧ ಆಗದಿರಲಿ: ಅಮೆರಿಕ

ವಾಷಿಂಗ್ಟನ್: ಭಾರತ-ಪಾಕಿಸ್ತಾನ ನಡುವೆ ಈಗ ನಡೆದಿರುವ ಯುದ್ಧ ವಿಶಾಲ ಪ್ರಮಾಣದ 'ಪ್ರಾದೇಶಿಕ ಯುದ್ಧ'ವಷ್ಟೇ ಆಗಿದೆ ಎಂದು ವ್ಯಾಖ್ಯಾನಿಸಿರುವ ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, 'ಇದು ಪರಮಾಣು ಯುದ್ಧವಾಗಿ ಬದಲಾಗದಿರಲಿ ಎಂಬುದೇ ಅಮೆರಿಕದ ಆಶಯವಾಗಿದೆ' ಎಂದು ಹೇಳಿದ್ದಾರೆ.

ಸದ್ಯಕ್ಕೆ ಪರಮಾಣ ಯುದ್ಧಕ್ಕೆ ಬದಲಾಗುತ್ತದೆ ಎಂದು ನಾವು ಭಾವಿಸುವುದಿಲ್ಲ ಎಂದೂ ವ್ಯಾನ್ಸ್, 'ಫಾಕ್ಸ್ ನ್ಯೂಸ್'ಗೆ ಶುಕ್ರವಾರ ಬೆಳಗ್ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಅಣ್ವಸ್ತ್ರಗಳನ್ನು ಹೊಂದಿರುವ ಎರಡು ದೇಶಗಳ ನಡುವಿನ ಸಂಘರ್ಷದ ಈಗಿನ ಪರಿಸ್ಥಿತಿ ಯಲ್ಲಿ ಅಮೆರಿಕ ಮಧ್ಯ ಪ್ರವೇಶಿಸುವುದೇ? ಎಂದು ಪ್ರಶ್ನೆಗೆ, ಭಾರತ-ಪಾಕಿಸ್ತಾನ ನಡುವಿನ ಶಸ್ತ್ರಾಸ್ತ್ರ ಸಂಘರ್ಷ, ಯುದ್ಧದ ವಿಚಾರಕ್ಕೂ ಅಮೆರಿಕಕ್ಕೂ ಸಂಬಂಧವಿಲ್ಲ ಎಂದು ವ್ಯಾನ್ಸ್ ಸ್ಪಷ್ಟವಾಗಿ ಹೇಳಿದರು.

ಎರಡೂ ದೇಶಗಳ ನಡುವೆ ಉದ್ವಿಗ್ನತೆ ತಗ್ಗಲಿ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ನಾನು ಬಯಸುತ್ತೇವೆ. ಅದಕ್ಕೆ ಸಂಬಂಧಿಸಿದಂತೆಯೇ ಎರಡೂ ದೇಶಗಳಿಗೂ ಸಲಹೆಯನ್ನೂ ನೀಡಿದ್ದೇವೆ ಎಂದರು.

ಯುದ್ಧದಲ್ಲಿ ಭಾಗಿಯಾಗಲ್ಲ: ಉದ್ವಿಗ್ನತೆ ಕಡಿಮೆ ಮಾಡಲು ಅಮೆರಿಕ ಸ್ವಲ್ಪ ಮಟ್ಟಿಗೆ ಪ್ರಯತ್ನಿಸ ಬಹುದು. ಆದರೆ ಯುದ್ಧದ ಮಧ್ಯದಲ್ಲಿ ಭಾಗಿ ಯಾಗುವುದಿಲ್ಲ, ಅದು ಮೂಲಭೂತವಾಗಿ ನಮಗೆ ಸಂಬಂಧಿಸಿದ ವಿಷಯವಲ್ಲ. ಭಾರತಕ್ಕಾ ಗಲೀ, ಪಾಕಿಸ್ತಾನಕ್ಕಾಗಲೀ ಶಸ್ತ್ರಾಸ್ತ್ರ ತ್ಯಜಿಸಿ ಎಂದು ಹೇಳಲು ಅಮೆರಿಕಕ್ಕೆ ಸಾಧ್ಯವಿಲ್ಲ. ರಾಜತಾಂತ್ರಿಕ ಮಾರ್ಗಗಳ ಮೂಲಕವಷ್ಟೇ ಈ ವಿಷಯ ಮುಂದುವರಿಸಲಾಗುವುದು ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ.

ಕೇಂದ್ರ ಸರಕಾರ, ಸೇನಾಪಡೆಗೆ ಆರ್‌ಎಸ್‌ಎಸ್ ಅಭಿನಂದನೆ

ನಾಗಪುರ: ಪಹಲ್ಗಾಮ್ ಉಗ್ರ ದಾಳಿಗೆ ಪ್ರತಿಕಾರವಾಗಿ ಭಾರತೀಯ ಸೇನೆ 'ಆಪರೇಷನ್ ಸಿಂದೂರ್' ಆರಂಭಿಸಿರುವುದಕ್ಕೆ ಕೇಂದ್ರ ಸರಕಾರ ಮತ್ತು ಭಾರತೀಯ ಸೇನಾಪಡೆ ಗಳನ್ನು 'ರಾಷ್ಟ್ರೀಯ ಸ್ವಯಂಸೇವಕ ಸಂಘ' (ಆರ್‌ಎಸ್‌ಎಸ್) ಬಹ ಳವಾ ಗಿ ಶ್ಲಾಘಿಷಿದ್ದು, ಅ ಭಿ ನ ಂ ದ ನೆ ಯ ು ನ್ನೂ ಸಲ್ಲಿಸಿದೆ.

ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆ ಚಟುವಟಿಕೆಗಳನ್ನು ಖಂಡಿಸಿರುವ ಆರ್‌ಎಸ್‌ಎಸ್, ದೇಶದ ಸ್ವಾಭಿ ಮಾನ ಮತ್ತು ಭದ್ರತೆಗೆ ಈ ಕ್ರಮ ಅನಿವಾರ್ಯ ಹಾಗೂ ಅತ್ಯವಶ್ಯಕ ವಾಗಿತ್ತು ಎಂದು ಪತ್ರಿಕಾ ಹೇಳಿಕೆಯಲ್ಲಿ ಶುಕ್ರವಾರ ತಿಳಿಸಿದೆ.

ಆಪರೇಷನ್ ಸಿಂದೂರ್ ನಿರ್ಣಾಯಕ ಕ್ರಮವಾಗಿದೆ. ರಾಷ್ಟ್ರೀಯ ಬಿಕ್ಕಟ್ಟಿನ ಈ ಸಮಯದಲ್ಲಿ, ಇಡೀ ದೇಶವು ಸರ್ಕಾರ ಮತ್ತು ಸಶಸ್ತ್ರ ಪಡೆಗಳೊಂದಿಗೆ ನಿಂತಿದೆ ಎಂದು ಹೇಳಿದೆ.

ಭಾರತದ ಗಡಿಯಲ್ಲಿರುವ ಧಾರ್ಮಿಕ ಸ್ಥಳಗಳು ಮತ್ತು ನಾಗರಿಕ ನೆಲೆಗಳ ಮೇಲೆ ಪಾಕಿಸ್ತಾನಿ ಸೇನೆ ನಡೆಸುತ್ತಿರುವ ದಾಳಿಗಳನ್ನು ಆರ್‌ಎಸ್‌ಎಸ್ ಖಂಡಿಸುತ್ತದೆ. ಈ ಘೋರ, ಅಮಾನವೀಯ ದಾಳಿಯಲ್ಲಿ ಮೃತರಾದವರ ಕುಟುಂಬಗಳಿಗೆ ಸಂತಾಪ ಸೂಚಿಸುತ್ತೇವೆ. ಈ ಸವಾಲಿನ ಸಮಯದಲ್ಲಿ ಸರಕಾರ ನೀಡುವ ಸೂಚನೆಗಳನ್ನು ನಾಗರಿಕರು ಪಾಲಿಸಬೇಕು. ನಾಗರಿಕ ಕರ್ತವ್ಯ ಗಳನ್ನು ನಿರ್ವಹಿಸುವಾಗ ಜನರೆಲ್ಲರೂ ಜಾಗರೂಕ ರಾಗಿರಬೇಕು. ಸಾಮಾಜಿಕ ಏಕತೆ ಮತ್ತು ಸಾಮ ರಸ್ಯ ಭಂಗಗೊಳಿಸುವ ದೇಶ ವಿರೋಧಿ ಶಕ್ತಿಗಳ ಪಿತೂರಿ ಯಶಸ್ವಿಯಾಗಲು ಬಿಡಬಾರದು. ದೇಶದ ಪ್ರಜೆಗಳೆಲ್ಲರೂ ದೇಶಭಕ್ತಿ ಪ್ರದರ್ಶಿಸಬೇಕಾದ ಸಮಯವಿದು. ಅಗತ್ಯ ಇರುವಲ್ಲೆಲ್ಲಾ ಸೇನೆ ಮತ್ತು ಸಾರ್ವಜನಿಕ ಆಡಳಿತದ ಜತೆ ಸಹಕರಿ ಸಬೇಕು. ರಾಷ್ಟ್ರೀಯ ಏಕತೆ ಮತ್ತು ಭದ್ರತೆಗೆ ಆದ್ಯತೆ ನೀಡಬೇಕು ಎಂದು ಆರ್‌ಎಸ್‌ಎಸ್ ಕರೆ ನೀಡಿದೆ.

ಭೋವಿ ಜನಜಾಗೃತಿಗೆ ಮಾಹಿತಿ

ಗೌರವಾನ್ವಿತ ನ್ಯಾಯಮೂರ್ತಿ ಡಾ.ಹೆಚ್.ಎನ್.ನಾಗಮೋಹನದಾಸ್
ಏಕ ಸದಸ್ಯ ವಿಚಾರಣಾ ಆಯೋಗ
ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ-2025

ಕಾಲಂ ನಂ.	ವಿಷಯ ಸೂಚಿ	ಕೋಡ್ ಸಂಖ್ಯೆ	ಮಾಹಿತಿ
I	ಜಾತಿ/Caste	023.1	BHOVI (ಭೋವಿ)
		023.4	VADDAR (ವಡ್ಡರ/ಒಡ್ಡರ)
15.	ನಿಮ್ಮ ಕುಟುಂಬದ ಕುಲಕಸುಬು ಯಾವುದು?	63	ಕಲ್ಲು ಕುಟಿಗರು/ಕಲ್ಲು ಕೆತ್ತುವವರು
		29	ಬೀಸುವ ಕಲ್ಲು ತಯಾರಕರು/ದುರಸ್ತಿ ಮಾಡುವವರು
		59	ಶಿಲ್ಪಿ
		00	(ಇತರೆ) ಕೆರೆ, ಬಾವಿ, ನಾಲೆ, ಕುಡಿನೀರುಕಟ್ಟೆ, ರಿವಿಟ್ ಮೆಂಟ್ (ಮಣ್ಣು ಕೊಚ್ಚಿ ಹೋಗದಂತೆ ತಡೆಯುವುದು) ಆಯಪಾಯ, ಮಣ್ಣಿನ ಕೆಲಸ / ಗೃಹ – ಆಲಯ ದೇವಾಲಯ, ರಸ್ತೆ, ಚರಂಡಿ ಶೌಚಾಲಯ ನಿರ್ಮಾಣ
17.	ಅಸಂಘಟಿತ ಕ್ಷೇತ್ರದಲ್ಲಿಯ ದಿನಗೂಲಿ ಕೆಲಸಗಾರರು	2	ಕಟ್ಟಡ ನಿರ್ಮಾಣ
41.	ನಿಮ್ಮ ಕುಟುಂಬವು ಯಾವುದಾದರು ಸಾಮಾಜಿಕ ತಾರತಮ್ಯಕ್ಕೆ ಒಳಗಾಗಿದೆಯೇ?	00	(ಇತರೆ) ಮಾನಸಿಕ ಅಸ್ಪ್ರಶ್ಯತೆ ಬೈಗುಳ ಪದವಾಗಿ ಬಳುಸುತ್ತಾರೆ

ಸಮೀಕ್ಷೆಯ ವಿಧಾನ ಮತ್ತು ವೇಳಾಪಟ್ಟಿ

ಹಂತ	ವಿವರ	ಅವಧಿ
Phase-1	ಗಣತಿದಾರರು ಮನೆ ಮನೆ ಭೇಟಿ ನೀಡಿ ಸಮೀಕ್ಷೆ ಕೈಗೊಳ್ಳುವುದು.	ದಿನಾಂಕ :05-05-2025 ರಿಂದ 17-05-2025
Phase-2	ಮತಗಟ್ಟೆ ಪ್ರದೇಶವಾರು 2 ಶಿಬಿರಗಳಲ್ಲಿ ಸಮೀಕ್ಷೆ ಕೈಗೊಳ್ಳುವುದು.	ದಿನಾಂಕ : 19-05-2025 ರಿಂದ 21-05-2025
Phase-3	ಸ್ವಯಂ ಘೋಷಣೆ (ಆನ್‌ಲೈನ್ ಮೂಲಕ).	ದಿನಾಂಕ : 19-05-2025 ರಿಂದ 23-05-2025

ಸೂಚನೆ : ಚುನಾವಣೆ ಗಣತಿಯಲ್ಲ, ಭೋವಿ/ವಡ್ಡರ ಅಳಿವು- ಉಳಿವಿನ ಪ್ರಶ್ನೆ ಹಾಗಾಗಿ ಗಣತಿದಾರರಿಗೆ ತಪ್ಪದೇ ಮಾಹಿತಿ ನೀಡಿ.
ಬೇರೆ-ಬೇರೆ ಕಡೆ ಇರುವವರನ್ನು ಭಾಗವಹಿಸುವಂತೆ ಬಂಧುಗಳು ಸಂಪರ್ಕಿಸಿ.

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,

ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ–ಆರ್‌ಡಿ 55 ಜಿಆರ್‌ಸಿ 2025 — ದಿನಾಂಕ : 01.02.2025

ಅಧಿಸೂಚನೆ

ಪೊಲೀಸ್ ಇನ್ಸ್‌ಪೆಕ್ಟರ್, ಕೆಂಪೇಗೌಡ ನಗರ ಪೊಲೀಸ್ ಠಾಣೆ, ದಕ್ಷಿಣ ವಿಭಾಗ, ಬೆಂಗಳೂರು ನಗರ ಇವರ ವರದಿಗಳನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ದೂರುಗಳ ಬಗ್ಗೆ ಯುಕ್ತ ತನಿಖೆಯ ತರುವಾಯ ಮೆ॥ ನ್ಯೂ ಫ್ರೆಂಡ್ಸ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಅಪರೇಟಿವ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೆ॥ ನ್ಯೂ ಫ್ರೆಂಡ್ಸ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಅಪರೇಟಿವ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯು ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುಗಳನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೆ॥ ನ್ಯೂ ಫ್ರೆಂಡ್ಸ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಅಪರೇಟಿವ್ ಲಿಮಿಟೆಡ್, ಬೆಂಗಳೂರು ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಮೆಟಟ ನ್ಯೂ ಫ್ರೆಂಡ್ಸ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಅಪರೇಟಿವ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ಪೊಲೀಸ್ ಇನ್ಸ್‌ಪೆಕ್ಟರ್, ಕೆಂಪೇಗೌಡ ನಗರ ಪೊಲೀಸ್ ಠಾಣೆ, ದಕ್ಷಿಣ ವಿಭಾಗ, ಬೆಂಗಳೂರು ನಗರ ಇವರ ವರದಿಯನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ,30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

"ಆದೇಶ"

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲ್ಕಂಡ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಮೆಟಟ ನ್ಯೂ ಫ್ರೆಂಡ್ಸ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಅಪರೇಟಿವ್ ಲಿಮಿಟೆಡ್, ಬೆಂಗಳೂರು ಸಂಸ್ಥೆಗೆ ಸೇರಿದೆ ಎನ್ನಲಾದ ಸ್ಥಿರಾಸ್ತಿ/ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿ ಕೊಳ್ಳುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಮೆಟಟ ನ್ಯೂ ಫ್ರೆಂಡ್ಸ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಅಪರೇಟಿವ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯು ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಅರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧದಲ್ಲಿ ನಿರ್ದಿಷ್ಟ ಪಡಿಸಲಾದಂತೆ ಚಾರಾಸ್ತಿಯನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿ ಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಚರಾ ಸ್ವತ್ತನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1,
ಭೂಮಾಪನ ಮತ್ತು ವಿಶೇಷ ಕೋಶ)

ಅನುಬಂಧ

Sl. No	Name & Address of Account Holders	Name of the Bank & Its Branch	Account Number	Total Amount Freezed (In Rs.)
1	New Friends Multipurpose Souharda Co-Op Ltd, No 43, 2nd floor, 9th cross, 13 A main road, 50 feet road, Hanumanthanagara-560070.	Kotak Mahindra Bank Girinagara Branch, Bengaluru	196011018143	4,88,812/-
2	New Friends Multipurpose Souharda Co-Op Ltd, No 43, 2nd floor, 9th cross, 13 A main road, 50 feet road, Hanumanthanagara-560070.	IDBI Bank BSK 3rd Stage Branch,Bengaluru	868102000011839	62,02,064/-
3	New Friends Multipurpose Souharda Co-Op Ltd, No 43, 2nd floor, 9th cross, 13 A main road, 50 feet road, Hanumanthanagara-560070.	BDCC Bank, Chamarajapete Branch Bengaluru	119000148370	3,91,534/-
4	Smt Puspslatha w/o Viajayakumara, Proprietor, M/S Srivaru Plastice SHOP NO 05, MMT Complex Patnoolpet, o t pet cross, Bengaluru-560053.	Kotak Mahindra Bank BSK 3rd stage Branch, Bengaluru	7011556366	5,58,364/-
5	New Friends Multipurpose Souharda Co-Op Ltd, No 43, 2nd floor, 9th cross, 13 A main road, 50 feet road, Hanumanthanagara-560070.	Thyagaraju Nagar Co-operative Bank/ N R Colony Branch,Bengaluru	3388	27,538/-
6	Krishanamurthy T A No 401, Samrudi Nivas, 4th Cross, 3rd Main Road, Bengalore-560070	Axis Bank Banshankari 3rd stage Branch, Bengaluru	489010100011626	74,002/-
7	Krishanamurthy T A No 401, Samrudi Nivas, 4th Cross, 3rd Main Road, Bengalore-560070	Jan Small finance Bank Ltd & Banashankari Branch, Bengaluru	4800010013385510	9,002/-
8	Krishanamurthy T A No 401, Samrudi Nivas, 4th Cross, 3rd Main Road, Bengalore-560070	ICICI Bank Banashankari 2nd Stage Branch, Bengaluru	105901007250	20,725/-
9	Ramesh M B No 455, Balasathya Nilaya, 8th Main Road, Tara Subbarao Road, Hanumanthanagar, Bengalore-560019	Ashoknagar Co-operative Bank, Ashok Nagara Branch,Bengaluru	200700004979	4,22,709/-
10	Ramesh M B No 455, Balasathya Nilaya, 8th Main Road, Tara Subbarao Road, Hanumanthanagar, Bengalore-560019	Ashoknagar Co-operative Bank, Ashok Nagara Branch,Bengaluru	200200057873	7,959/-
11	Ramesh M B No 455, Balasathya Nilaya, 8th Main Road, Tara Subbarao Road, Hanumanthanagar, Bengalore-560019	Ashoknagar Co-operative Bank, Ashok Nagara Branch,Bengaluru	204300000154	2,000/-
12	Makkana Balaram Surendran No 455, Balasathya Nilaya, Tara subbarao Road, Hanumanthanagar, Bengaluru-560019	Kotak Mahindra Bank Girinagar Branch Bengaluru	196010053286	2,37,055/-
13	Makkana Balaram Surendran No 455, Balasathya Nilaya, Tara subbarao Road, Hanumanthanagar, Bengaluru-560019	Kotak Mahindra Bank Padmanabhanagar Branch, Bengaluru	235010005021	2,764/-
14	Roshni Vijayakumar Makam & Vijayakumar MB S/O M/S Balaram,55years, No 626/11,Srivari Nilaya, 6th main Shivamaharaj road, BhacaninagarGavipurm, Bengaluru-560019.	SBI Bank, Sunkenhalli Branch Bengaluru	39624786315	16,435/-
15	Krishna D S/O Late Kuppa Naidu Plot No VFI 56/6, 9th A Cross, SBM Colony, JP Nagar, 1st Phase, Bengalore-560078	Axis Bank , BSK 3rd stage Branch, Bengaluru	922010006798929	26,986/-
16	Sree Venkateshwara Builders No 287, Yelachenahalli,Kashinagara, Near UNION Bank, Bangaluru-560078.	Axis Bank & DVP Head Branch, Bengaluru	921020049552399	20,092/-
17	Krishna D S/O Late Kuppa Naidu Plot No VFI 56/6, 9th A Cross, SBM Colony, JP Nagar, 1st Phase, Bengalore-560078	Karnataka Bank Uttarahalli Branch Bengaluru	9012000100022100	5,993/-
18	Krishna D S/O Late Kuppa Naidu Plot No VFI 56/6, 9th A Cross, SBM Colony, JP Nagar, 1st Phase, Bengalore-560078	Karnataka Bank Uttarahalli Branch Bengaluru	9012500100431100	2,116/-
19	Surendranath MB S/O No 22, Aiswarya, 8th Main Road, NR Colony, Gavipuram Extension Bengalore-560019	Indusind Bank Basavanagudi Branch Bengaluru	201001628396	6,737/-
20	Sudha Murthy W/O Krishnamurthy No 401, Samrudi Nivas, 4th Cross, 3rd Main Road, Bengalore-560070	Indusland Bank Jayanagara Branch Bengaluru	159900246123	6,723/-
21	Pavithra K w/o B Ramesh, 40 Years Kundalahalli Village K R Puram Hobli, Bengaluru.	Union Bank Marathhalli Branch Bengaluru	13461010015683	6,351/-
22	Viajayakumara, Proprietor, M/S Srivaru Plastice SHOP NO 05, MMT Complex Patnoolpet, o t pet cross, Bengaluru-560053.	ICICI Bank / Koramanagala Branch Bengaluru	4701538340	9,21,847/-
23	Gopal HB s/o Late H B N Shetty, 63 Years, no 551, 53rd Cross,3rd block, Rajajinagara, Bengaluru-560010.	Bank Of India V V Puram Branch Bengaluru	840710110002358	18,229/-
			Total	94,76,037/-

ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1,
ಭೂಮಾಪನ ಮತ್ತು ವಿಶೇಷ ಕೋಶ)

ವಾಸಾಸಂಇ/ವಾಪ್ರ/596/2025–26

ಬಲೂಚಿಗಳ ಬಳಿಕ ರಣಾಂಗಣಕ್ಕಿಳಿದ ತಾಲಿಬಾನ್

ಪಾಕ್ ಸೇನಾ ವಾಹನ ಧ್ವಂಸ: 20 ಸೈನಿಕರ ಹತ್ಯೆ

ಪಾಕ್‌ಗೆ ತ್ರಿಬಲ್ ಆಘಾತ

ದೆಹಲಿ: ಆಪರೇಷನ್ ಸಿಂಧೂರ್ ಮೂಲಕ ಭಾರತೀಯ ಸೇನೆ ಪಾಕಿಸ್ತಾನದ ಮೇಲೆ ವೈಮಾನಿಕ ಕಾರ್ಯಾಚರಣೆ ಆರಂಭಿಸಿದೆ. ಭಾರತೀಯ ಸೇನೆಯ ಪ್ರತಿದಾಳಿಗೆ ಪಾಕಿಸ್ತಾನ ಸೇನೆ ತತ್ತರಿಸಿದೆ. ಇದೇ ವೇಳೆ ಬಲೂಚಿಸ್ತಾನದ ಆರ್ಮಿ ಪಡೆಯೂ ಪಾಕಿಸ್ತಾನದ ಸೇನೆ ಮೇಲೆ ಮುಗಿಬಿದ್ದಿದೆ. 12 ಪಾಕಿಸ್ತಾನ ಸೈನಿಕರು ತೆರಳುತ್ತಿದ್ದ ವಾಹನವನ್ನು ಸ್ಫೋಟಿಸಿದ್ದು ಸೈನಿಕರ ದೇಹಗಳು ಛಿದ್ರವಾಗಿದ್ದ ವಿಡಿಯೋ ವೈರಲ್ ಆಗಿತ್ತು. ಇದರ ಬೆನ್ನಲ್ಲೇ ಇದೀಗ ತಾಲಿಬಾನ್ ಸಹ ಪಾಕಿಸ್ತಾನ ಸೇನೆ ಮೇಲೆ ಮುಗಿಬಿದ್ದಿದೆ.

ತೆಹ್ರೀಕ್–ಇ–ತಾಲಿಬಾನ್ ನಡೆಸಿದ ದಾಳಿಯಲ್ಲಿ 20 ಪಾಕಿಸ್ತಾನಿ ಸೈನಿಕರು ಸಾವನ್ನಪ್ಪಿದ್ದಾರೆ. ಪಾಕಿಸ್ತಾನಿ ಸೈನಿಕರನ್ನು ಲೇಸರ್ ರೈಫಲ್‌ಗಳನ್ನು ಬಳಸಿ ಕೊಲ್ಲಲಾಗಿದೆ ಎಂದು ಹೇಳಲಾಗಿದೆ. ಭಾರತದೊಂದಿಗಿನ ಉದ್ವಿಗ್ನತೆಯ ಮಧ್ಯೆ ಪಾಕಿಸ್ತಾನಕ್ಕೆ ಇದು ದೊಡ್ಡ ಹಿನ್ನಡೆ ಎಂದು ಪರಿಗಣಿಸಲಾಗುತ್ತಿದೆ. ದಕ್ಷಿಣ ವಜೀರಿಸ್ತಾನದ ಶಕೈನಲ್ಲಿ ಈ ದಾಳಿ ನಡೆದಿದೆ.

ಪಾಕಿಸ್ತಾನದ ಸೇನಾ ವಾಹನಗಳು ಸಹ ನಾಶವಾಗಿವೆ. ಈ ದಾಳಿಯಲ್ಲಿ ಟಿಟಿಪಿ ಪಾಕಿಸ್ತಾನಿ ಸೇನೆಯ ಶಸ್ತ್ರಾಸ್ತ್ರಗಳನ್ನು ಸಹ ವಶಪಡಿಸಿಕೊಂಡಿದೆ. ಭಯೋತ್ಪಾದಕ ಮೂಲ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಭಾರತ ನಡೆಸುತ್ತಿರುವ ಆಪರೇಷನ್ ಸಿಂಧೂರ್ ಮಧ್ಯೆ ಪಾಕಿಸ್ತಾನ ಸೇನೆಗೆ ಎರಡು ಬಾರಿ ಹೊಡೆತ ಬಿದ್ದಿದ್ದು, ಬಲೂಚಿಸ್ತಾನ್ ಪ್ರಾಂತ್ಯದ ಬೋಲಾನ್ ಮತ್ತು ಕೆಚ್ ಪ್ರದೇಶಗಳಲ್ಲಿ ನಡೆದ ಎರಡು ಪ್ರತ್ಯೇಕ ದಾಳಿಗಳ ಹೊಣೆಯನ್ನು ಬಲೂಚ್ ಲಿಬರೇಶನ್ ಆರ್ಮಿ (ಬಿಎಲ್‌ಎ) ಹೊತ್ತುಕೊಂಡಿದೆ. ಈ ದಾಳಿಯಲ್ಲಿ 12 ಪಾಕಿಸ್ತಾನಿ ಸೇನಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ಮೊದಲ ದಾಳಿಯಲ್ಲಿ, ಬಿಎಲ್‌ಎಯ ವಿಶೇಷ ಯುದ್ಧತಂತ್ರದ ಕಾರ್ಯಾಚರಣೆ ದಳವು ಶೋರ್ಕಂಡ್ ಪ್ರದೇಶದಲ್ಲಿ ಪಾಕಿಸ್ತಾನಿ ಮಿಲಿಟರಿ ಬೆಂಗಾವಲು ಪಡೆಯ ಮೇಲೆ ದೂರ ನಿಯಂತ್ರಿತ ಐಇಡಿ ಸ್ಫೋಟಿಸಿತು. ವಿಶೇಷ ಕಾರ್ಯಾಚರಣೆ ಕಮಾಂಡರ್ ತಾರಿಕ್ ಇಮ್ರಾನ್ ಮತ್ತು ಸುಬೇದಾರ್ ಉಮರ್ ಫಾರೂಕ್ ಸೇರಿದಂತೆ ಎಲ್ಲಾ 12 ಸೈನಿಕರು ಸ್ಫೋಟದಲ್ಲಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಸ್ಫೋಟದಲ್ಲಿ ಸೇನಾ ವಾಹನಗಳು ಸಂಪೂರ್ಣವಾಗಿ ನಾಶವಾಗಿದೆ.

ಎಫ್‌–16 ಪೈಲಟ್ ವಶಕ್ಕೆ

ದೆಹಲಿ: ಪಾಕಿಸ್ತಾನದ ಸರ್ಗೋಧಾ ವಾಯು ನೆಲೆಯಿಂದ ಹಾರಾಟ ನಡೆಸಿದ ಫೈಟರ್ ಜೆಟ್‌ನ್ನು ಭಾರತೀಯ ಮೇಲ್ಮೈ ವಾಯು ಕ್ಷಿಪಣಿ (ಎಸ್‌ಎಎಂ) ವ್ಯವಸ್ಥೆಯು ಹೊಡೆದುರುಳಿಸಿದ ನಂತರ ಪಾಕಿಸ್ತಾನದ ಈ–16 ಪೈಲಟ್‌ನ್ನು ವಶಕ್ಕೆ ಪಡೆಯಲಾಗಿದೆ ಪಾಕಿಸ್ತಾನದ ಜೆಎಫ್–17– ನಾಲ್ಕನೇ ತಲೆಮಾರಿನ, ಹಗುರವಾದ, ಏಕ– ಎಂಜಿನ್, ಬಹು ಪಾತ್ರದ ಯುದ್ಧ ವಿಮಾನವನ್ನು ಹೊಡೆದುರುಳಿಸಲಾಗಿದೆ ಎನ್ನಲಾಗುತ್ತಿದೆ.

ಪಂಜಾಬ್‌ನ ಹೋಶಿಯಾರ್‌ಪುರದಲ್ಲಿ ಚೀನಾ ನಿರ್ಮಿತ ಪಿಎಲ್–15 ಸಕ್ರಿಯ ರಾಡಾರ್–ಗೈಡೆಡ್ ವಾಯುವಿನಿಂದ ವಾಯುವಿಗೆ ದೀರ್ಘ ಶ್ರೇಣಿಯ ಕ್ಷಿಪಣಿಯನ್ನು ಹೊಡೆದುರುಳಿಸಲಾಗಿದೆ. ಈ ಕ್ಷಿಪಣಿಯನ್ನು ಜೆಎಫ್–17ನಿಂದ ಹಾರಿಸಲಾಗಿದೆ. ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳಿಗೆ ಅನುಗುಣವಾಗಿ ಸಾಮರ್ಥ್ಯಗಳನ್ನು ಬಳಸಿಕೊಂಡು ಭಾರತೀಯ ಸಶಸ್ತ್ರ ಪಡೆಗಳು ಬೆದರಿಕೆಗಳನ್ನು ತ್ವರಿತವಾಗಿ ತಟಸ್ಥಗೊಳಿಸಿವೆ.

ಆಂಧ್ರದ ಯೋಧ ಸಾವು

ಹೈದರಾಬಾದ್: ಪಾಕ್ ಪಡೆಗಳ ಜೊತೆಗೆ ನಡೆದ ಗುಂಡಿನ ಚಕಮಕಿಯಲ್ಲಿ ಅಂಧ್ರಪ್ರದೇಶದ ಶ್ರೀಸತ್ಯಸಾಯಿ ಜಿಲ್ಲೆ ಕಲ್ಲಿತಾಂಡಾ ಬುಡಕಟ್ಟು ಪ್ರದೇಶದ ನಿವಾಸಿ, ಯೋಧ ಮುರಳಿ ನಾಯ್ಕ ಮೃತಪಟ್ಟಿದ್ದಾರೆ. 27 ವರ್ಷ ವಯಸ್ಸಿನ, ಅವಿವಾಹಿತರಾಗಿದ್ದ ಇವರು ಕೆಲದಿನಗಳ ಹಿಂದಷ್ಟೇ ಭಾರತದ ಗಡಿಯಲ್ಲಿ ಸೇವೆಗೆ ನಿಯೋಜಿತರಾಗಿದ್ದರು. ಪಾರ್ಥೀವ ಶರೀರ ಶನಿವಾರ ಗ್ರಾಮಕ್ಕೆ ತಲುಪವ ನಿರೀಕ್ಷೆಗಳಿವೆ. ಅಗ್ನಿವೀರರಾಗಿ ಸೇನೆಗೆ ಸೇರ್ಪಡೆಗೊಂಡಿದ್ದ ಅವರು ನಾಸಿಕ್‌ನಲ್ಲಿ ತರಬೇತಿ ಪಡೆದಿದ್ದರು. ಇವರು ಕೃಷಿ ಕೂಲಿ ಕಾರ್ಮಿಕರಾದ ಮುದವತ್ ಶ್ರೀರಾಮ್ ನಾಯ್ಕ್, ಜ್ಯೋತಿಬಾಯಿ ಅವರ ಏಕೈಕ ಪುತ್ರ. ಸಾವಿನ ಸುದ್ದಿ ತಿಳಿದಂತೆ ತಾಯಿಯ ರೋದನ ಮುಗಿಲುಮುಟ್ಟಿತ್ತು.

ಫ್ಯಾಕ್ಟ್ ಚೆಕ್

ಸುಳ್ಳೇನು?
ಭಾರತ ಎಲ್ಲ ವಿಮಾನ ನಿಲ್ದಾಣ ಗಳಲ್ಲಿಯೂ ವಿಮಾನ ಹಾರಟ ಸಂಪೂರ್ಣ ಸ್ಥಗಿತ.

ಸತ್ಯವೇನು?
ಕೆಲವೊಂದಷ್ಟು ವಿಮಾನ ನಿಲ್ದಾಣಗಳಲ್ಲಿ ನಿರ್ಬಂಧ ವಿಧಿಸಲಾಗಿದೆ.

ಫ್ಯಾಕ್ಟ್ ಚೆಕ್

ಸುಳ್ಳೇನು?
ಜಮ್ಮು ಮತ್ತು ಕಾಶ್ಮೀರದ ರಾಜೌರಿ ಸೇನಾ ಬ್ರಿಗೇಡ್ ನೆಲೆ ಮೇಲೆ ಆತ್ಮಾಹುತಿ ಅಥವಾ ಉಗ್ರರಿಂದ ದಾಳಿ. ಭಾರಿ ಪ್ರಮಾಣದ ನಷ್ಟ

ಸತ್ಯವೇನು?
ಸೇನಾ ನೆಲಯ ಮೇಲೆ ಈ ರೀತಿ ಯಾವುದೇ ದಾಳಿ ನಡೆದಿಲ್ಲ. ದೇಶದ ಜನರನ್ನು ಆತಂಕಕ್ಕೀಡು ಅನಾಮಧೇಯ ಸ್ಥಳದ ವಿಡಿಯೊದೊಂದಿಗೆ ಪಾಕಿಸ್ತಾನಿಯರಿಂದ ಸುಳ್ಳು ಸುದ್ದಿ ಪ್ರಚಾರ.

ಏಳು ಜೈಷೆ ಉಗ್ರರು ಯಮಪುರಿಗೆ

ದೆಹಲಿ: ಆಪರೇಷನ್ ಸಿಂಧೂರ ಕಾರ್ಯಾಚರಣೆಯ ನಡುವೆ ಬಳಿಕ ಜಮ್ಮು ಮತ್ತು ಕಾಶ್ಮೀರದ ಸಾಂಬಾ ಸೆಕ್ಟರ್‌ನಲ್ಲಿ ನಡುವೆ ಭಾರತ ಗಡಿ ಪ್ರವೇಶಕ್ಕೆ ಯತ್ನಿಸಿದ ಪಾಕಿಸ್ತಾನ ಮೂಲದ 7 ಉಗ್ರರನ್ನು ಭಾರತದ ಗಡಿ ಭದ್ರತಾ ಪಡೆ ಹೊಡೆದುರುಳಿಸಿದೆ. ಈ ಮೂಲಕ ಭಯೋತ್ಪಾದಕರ ಬಹುದೊಡ್ಡ ಒಳನುಸುಳುವಿಕೆ ಯತ್ನವನ್ನು ಬಿಎಸ್‌ಎಫ್ ವಿಫಲಗೊಳಿಸಿದೆ. ಮೇ 8ರ ರಾತ್ರಿ 11 ಗಂಟೆ ಸುಮಾರಿಗೆ ಜಮ್ಮು–ಕಾಶ್ಮೀರದ ಸಾಂಬಾ ಜಿಲ್ಲೆಯ ಅಂತಾರಾಷ್ಟ್ರೀಯ ಗಡಿಯಲ್ಲಿ ಪ್ರಮುಖ ಒಳನುಸುಳುವಿಕೆ ಯತ್ನವನ್ನು ಬಿಎಸ್‌ಎಫ್ ವಿಫಲಗೊಳಿಸಿದೆ ಎಂದು ಗಡಿ ಭದ್ರತಾ ಪಡೆ ಮಾಹಿತಿ ನೀಡಿದೆ.

ಪಾಕ್ ರೇಂಜರ್ಸ್ ನೆರವು: ಭಾರತದ ಗಡಿಯೊಳಗೆ ನುಸುಳುತ್ತಿದ್ದ ಉಗ್ರರಿಗೆ ಅಲ್ಲಿಯೇ ಸಮೀಪದ ಧಂಧರ್ ಪೋಸ್ಟ್‌ನಲ್ಲಿದ್ದ ಪಾಕ್ ರೇಂಜರ್ಸ್ ನೆರವು ನೀಡುತ್ತಿದ್ದರು. ಉಗ್ರರ ಹೆಡೆಮುರಿ ಕಟ್ಟಿದ ಬಿಎಸ್‌ಎಫ್ ಬಳಿಕ ಧಂಧರ್ ಪೋಸ್ಟ್‌ನಲ್ಲಿದ್ದ ಪಾಕ್ ರೇಂಜರ್ಸ್ ಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿದೆ. ಈ ಪೋಸ್ಟ್ ಧ್ವಂಸವಾಗಿದ್ದು ಪಾಕ್ ರೇಂಜರ್ಸ್‌ಗಳು ಪರಾರಿಯಾಗಿದ್ದಾರೆ ಎನ್ನಲಾಗಿದೆ.

ವಿದೇಶಾಂಗ ಸಚಿವಾಲಯ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್, ಕರ್ನಲ್ ಸೋಫಿಯಾ ಖುರೇಷಿ ಹಾಗೂ ವಿದೇಶಾಂಗ ಇಲಾಖೆಯ ಕಾರ್ಯದರ್ಶಿ ವಿಕ್ರಮ ಮಿಶ್ರಿ ಉಪಸ್ಥಿತರಿದ್ದರು.

4 ಗಂಟೆಗಳ ಹೈವೋಲ್ಟೇಜ್ ಮೀಟಿಂಗ್

ನಿರ್ಣಾಯಕ ಯುದ್ಧಕ್ಕೆ ಸಿದ್ಧ

ದೆಹಲಿ: ಆಪರೇಶನ್ ಸಿಂದೂರ ಕಾರ್ಯಾಚರಣೆ ಬಳಿಕ ಪಾಕಿಸ್ತಾನ ಡ್ರೋನ್ ಮತ್ತು ಕ್ಷಿಪಣಿ ದಾಳಿಯ ಜತೆಗೆ ಗಡಿಯಲ್ಲಿ ಶೆಲ್ ದಾಳಿ ಮುಂದುವರಿಸಿದೆ. ಇದಕ್ಕೆ ಭಾರತವೂ ತಕ್ಕ ಪ್ರತ್ಯುತ್ತರ ನೀಡಿದೆ. ಶತ್ರು ರಾಷ್ಟ್ರವು ದಾಳಿ ಮುಂದುವರಿಸಿದರೆ ಪೂರ್ಣ ಪ್ರಮಾಣದ ಯುದ್ಧ ನಡೆಸಲು ಸೇನೆಗೆ ಪರಮಾಧಿಕಾರ ನೀಡಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಭೆಯಲ್ಲಿ ನಿರ್ಧರಿಸಲಾಗಿದೆ ಎನ್ನಲಾಗಿದೆ.

ಸಂಘರ್ಷವನ್ನು ತಗ್ಗಿಸುವುದಿಲ್ಲ ಎಂದು ಪಾಕಿಸ್ತಾನ ಹೇಳಿದ ಬೆನ್ನಿಗೇ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಗೃಹ ಸಚಿವ ಅಮಿತ್ ಷಾ, ರಾಜ್‌ನಾಥ್ ಸಿಂಗ್, ನಿರ್ಮಾಲಾ ಸೀತರಾಮನ್, ಜೈ ಶಂಕರ್ ಅವರು ಪ್ರತ್ಯೇಕವಾಗಿ ಸಭೆ ನಡೆಸಿರುವುದು ಯುದ್ಧದ ಮುನ್ಸೂಚನೆ ಎಂದೇ ಹೇಳಲಾಗಿದೆ.

ಮೋದಿ ಅವರು ಪಾಕಿಸ್ತಾನದ ಜೊತೆ ಗಡಿ ಹಂಚಿಕೊಂಡಿರುವ ಗುಜರಾತ್, ಪಂಜಾಬ್, ರಾಜಸ್ತಾನ ಹಾಗೂ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಿ ಪರಿಸ್ಥಿತಿಯ ಆವಲೋಕನ ನಡೆಸಿದ್ದಾರೆ. ಇನ್ನೊಂದೆಡೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೇಶಾದ್ಯಂತ ಎಲ್ಲಾ ಪ್ರಮುಖ ಸಂಸ್ಥೆಗಳಲ್ಲಿ ಭದ್ರತೆಯನ್ನು ಹೆಚ್ಚಿಸುವಂತೆ ಸಿಐಎಸ್‌ಎಫ್ (ಕೇಂದ್ರ ಕೈಗಾರಿಕಾ ಭದ್ರತಾ ಪಡೆ)ಗೆ ನಿರ್ದೇಶನ ನೀಡಿದ್ದಾರೆ.

ದೇಶಾದ್ಯಂತ ವಿಮಾನ ನಿಲ್ದಾಣಗಳು, ವಿದ್ಯುತ್ ಸ್ಥಾವರಗಳು, ಪರಮಾಣು ಸ್ಥಾಪನೆಗಳು, ಬಾಹ್ಯಾಕಾಶ ಸಂಶೋಧನಾ ಸೌಲಭ್ಯಗಳು ಮತ್ತು ಪ್ರಮುಖ ಸರ್ಕಾರಿ ಕಟ್ಟಡಗಳು ಸೇರಿದಂತೆ ನಿರ್ಣಾಯಕ ಮೂಲಸೌಕರ್ಯಗಳನ್ನು ರಕ್ಷಿಸುವ ಕಾರ್ಯವನ್ನು ಸಿಐಎಸ್‌ಎಫ್ ಹೊಂದಿದೆ. ಗಡಿ ಪರಿಸ್ಥಿತಿ ಮತ್ತು ವಿಮಾನ ನಿಲ್ದಾಣದ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಲು ಶಾ ಅವರು ಬಿಎಸ್‌ಎಫ್ ಮಹಾನಿರ್ದೇಶಕರು, ಸಿಐಎಸ್‌ಎಫ್ ಮಹಾನಿರ್ದೇಶಕರು ಮತ್ತು ಗೃಹ ಸಚಿವಾಲಯದ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ.

ರಕ್ಷಣಾ ಸಚಿವರ ಸಭೆ: ಇದೇ ವೇಳೆ ಸೇನಾ ಕಾರ್ಯಾಚರಣೆಯ ಬಗ್ಗೆ ಸಿಡಿಎಸ್ ಮತ್ತು ಮೂರು ಸೇನಾ ಮುಖ್ಯಸ್ಥರ ಜೊತೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೈವೋಲ್ಟೇಜ್ ಸಭೆ ನಡೆಸಿದ್ದಾರೆ. ದೆಹಲಿಯಲ್ಲಿ ಸಿಡಿಎಸ್ ಜನರಲ್ ಅನಿಲ್ ಚೌಹಾಣ್ ಮತ್ತು ಮೂರು ಸೇನಾ ಮುಖ್ಯಸ್ಥರೊಂದಿಗೆ 2 ಗಂಟೆಗಳ ಕಾಲ ಸಚಿವರು ಸಭೆ ನಡೆಸಿರುವುದು ಕುತೂಹಲ ಮೂಡಿಸಿದೆ. ಈ ವೇಳೆ ಪಾಕ್ ಕ್ಷಿಪಣಿ ಮತ್ತು ಡ್ರೋನ್ ದಾಳಿಯನ್ನು ಭಾರತ ಯಶಸ್ವಿಯಾಗಿ ತಡೆದ ಬಗ್ಗೆ ಅವರು ಮಾಹಿತಿ ಪಡೆದರು. ರಾಜಧಾನಿ ದೆಹಲಿಯಲ್ಲಿ ಹೈ ಅಲರ್ಟ್ ಘೋಷಿಸಲಾಗಿದ್ದು, ಎಲ್ಲಾ ನಗರ ಸರ್ಕಾರಿ ನೌಕರರ ರಜೆಗಳನ್ನು ರದ್ದುಪಡಿಸಲಾಗಿದೆ. ಇಂಡಿಯಾ ಗೇಟ್‌ನಲ್ಲಿ ಓಡಾಡುವವರನ್ನು ಅಲ್ಲಿಂದ ತೆರಳುವಂತೆ ಸೂಚಿಸಲಾಗಿದೆ. ಜನರು ಆ ಪ್ರದೇಶದಿಂದ ಹೊರಹೋಗುವಂತೆ ಪೊಲೀಸರು ಸೂಚಿಸಿದ್ದಾರೆ. ಗಡಿ ಪ್ರದೇಶಗಳ ಸಮೀಪವಿರುವ ಅನೇಕ ನಗರಗಳಲ್ಲಿ ವಿದ್ಯುತ್ ಕಡಿತಗೊಳಿಸಲಾಗಿದೆ. ಗಡಿಭಾಗದ ನಾಲ್ಕು ರಾಜ್ಯಗಳಲ್ಲಿ ರಾತ್ರಿಯಿಡೀ ಶೆಲ್ಲಿಂಗ್ ನಡೆಯುತ್ತಿದ್ದ ಕಾರಣ ಅಲ್ಲಿ ಬ್ಲ್ಯಾಕ್ ಔಟ್ ಮಾಡಲಾಗಿತ್ತು. ಬೆಳಗ್ಗೆ ವಿದ್ಯುತ್ ಪೂರೈಕೆಯನ್ನು ಮರುಸ್ಥಾಪಿಸಲಾಗಿದೆ.

ನಿಲ್ಲದ ಶೆಲ್ ದಾಳಿ: ಜಮು ಮತ್ತು ಕಾಶ್ಮೀರದ ನಿಯಂತ್ರಣ ರೇಖೆಯ ಉದ್ದಕ್ಕೂ ಪಾಕ್ ಪಡೆಗಳು ಶಾಲೆಗಳು, ಪ್ರಾರ್ಥನಾ ಮಂದಿರ, ದೇಗುಲಗಳ ಮೇಲೆ ಗುರಿ ಇಟ್ಟು ಸತತವಾಗಿ ಶೆಲ್ ದಾಳಿ ನಡೆಸಿವೆ.

ಟ್ವೀಟೂ-ಖಾರಾ

ಆರ್.ಅಶೋಕ, ಪ್ರತಿಪಕ್ಷ ನಾಯಕ

ಮಂಗಳೂರಿನಲ್ಲಿ ನಡೆದ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ವಿದೇಶಿ ಶಕ್ತಿಗಳ ಕೈವಾಡವಿದೆ. ಕಾಂಗ್ರೆಸ್ ಸರಕಾರ ನೀಡಿದ ಪರಿಹಾರ ಧನವನ್ನು ಕೊಲೆಗೆ ಸುಪಾರಿಯಾಗಿ ನೀಡಲಾಗಿದೆ. ಫಾಝಿಲ್ ಕುಟುಂಬ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ ಎಂದು ಸ್ಪೀಕರ್ ಅವರು ಸಮರ್ಥಿಸಿಕೊಂಡಿದ್ದಾರೆ, ಆದರೆ ಪೊಲೀಸ್ ತನಿಖೆ ಫಾಝಿಲ್ ಕುಟುಂಬ ಭಾಗಿಯಾಗಿರುವುದನ್ನು ಸ್ಪಷ್ಟಪಡಿಸಿದೆ. ಕೊಲೆ ಪ್ರಕರಣದಲ್ಲಿ ಕೊಲೆಗಾರರ ಬಗ್ಗೆ ಇದುವರೆಗೆ ಯಾವ ಸ್ಪೀಕರ್ ಕೂಡಾ ಹೇಳಿಕೆ ನೀಡಿರಲಿಲ್ಲ, ಆದರೆ ಖಾದರ್ ಅವರು ಭಾರೀ ಉತ್ಸಾಹದಿಂದ ಹೇಳಿಕೆ ನೀಡಿದ್ದಾರೆ.

ರಾಜು .ಪಿ

ಪರಿಶಿಷ್ಟ ಜಾತಿಯ ಹೆಣ್ಣಿನ ಮೇಲೆ ಅತ್ಯಾಚಾರ ಮಾಡಿದವ ಪರಿಶಿಷ್ಟ ಜಾತಿಯವರ ದೌರ್ಜನ್ಯ ದಬ್ಬಾಳಿಕೆ ಮಾಡಿದವ ಕೊಲೆಪಾದಕ. ಕೋಮುದ್ವೇಷ ಸಾಧಿಸಿ ಕೊಲೆ ಮಾಡಿರುವ ಆರೋಪ ಹೊರಿಸಿ ದೂರು ದಾಖಲಿಸಿರುವುದು ರೌಡಿಶೀಟರ್ ಮಾಡಿದ್ದು ಬಿಜೆಪಿ ಸರಕಾರ. ಈಗ ಆತನ ಕೊಲೆಯಾಗಿದೆ ಬಿಜೆಪಿಯವರ ಪಾಲಿಗೆ ಈತ ಸಂತ– ಹಿಂದುತ್ವ ಹೋರಾಟಗಾರ?

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಬೆಂಗಳೂರು
- **ಸಮಸ್ಯೆ ಯೇನು..?:** ಕೂಡ್ಲು ಹಾಗೂ ಹರಳೂರು ಮುಖ್ಯರಸ್ತೆಯಲ್ಲಿ ಎಸ್‌ವಿಆರ್ ಫ್ಲೋರ ಹತ್ತಿರದ ರಾಮಾಂಜನೇಯ ಹಾಗೂ ವಿಜಿಪಿ ಕೂಡ್ಲು ಗ್ರಾಮದ ವಿವಿಧ ಬಡಾವಣೆಗಳಿಗೆ ಕಾವೇರಿ ನೀರನ್ನು ಪರಿವೀಕ್ಷಣೆಯ ಸಂದರ್ಭದಲ್ಲಿ ನೀರು ಸೋರುವಿಕೆಯಾಗಿರುವ ಬಗ್ಗೆ.
- **ಪರಿಹಾರ:** ಕೂಡ್ಲು ಹಾಗೂ ಹರಳೂರು ಮುಖ್ಯರಸ್ತೆಯಲ್ಲಿ ಎಸ್‌ವಿಆರ್ ಫ್ಲೋರ ಹತ್ತಿರದ ರಾಮಾಂಜನೇಯ ಹಾಗೂ ವಿಜಿಪಿ ಕೂಡ್ಲು ಗ್ರಾಮದ ವಿವಿಧ ಬಡಾವಣೆಗಳಲ್ಲಿ ಕಾವೇರಿ ನೀರು ಸೋರುತ್ತಿದ್ದು, ಸದರಿ ಸ್ಥಳದ 300 ಮಿ.ಮಿ ವ್ಯಾಸದ ಕೊಳವೆ ಮಾರ್ಗವು ದುರಸ್ತಿ ಮಾಡಲಾಗಿದೆ.

ಸಮಾಚಾರ ಸಣ್ಣದಲ್ಲ

ಬೈಕ್ ಅಪಘಾತ: ಇಬ್ಬರು ಸಾವು

ದೊಡ್ಡಬಳ್ಳಾಪುರ: ತ್ರಿಬಲ್ ರೈಡ್ ಮಾಡುತ್ತಿದ್ದ ಬೈಕ್ ಅಪಘಾತಗೊಂಡು ಇಬ್ಬರು ಸವಾರರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಗುಂಡಮಗೆರೆ ಕ್ರಾಸ್ ಸಮೀಪದ ನೆಲ್ಲುಕುಂಟೆ ಸರ್ಕಲ್ ಬಳಿ ತಡರಾತ್ರಿ ನಡೆದಿದೆ. ಘಟನೆಯಲ್ಲಿ ಓರ್ವ ಗಾಯಗೊಂಡಿದ್ದಾನೆ. ಗುಂಡಮಗೆರೆ ಗ್ರಾಮದ ವೆಂಕಟೇಶ್ (45), ಶಿವಪುರ ಗ್ರಾಮದ ರಕ್ಷಿತ್ (25) ಮೃತ ದುರ್ದೈವಿಗಳು. ಮುತ್ತೂರು ಗ್ರಾಮದ ವೆಂಕಟೇಶ್ (45)ಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಮಧ್ಯರಾತ್ರಿ ಒಂದೇ ಬೈಕಿನಲ್ಲಿ ಮೂವರು ಗುಂಡಮಗೆರೆ ಕ್ರಾಸ್‌ನಿಂದ ನೆಲ್ಲುಕುಂಟೆ ಕಡೆ ಹೋಗುವಾಗ ಆಯತಪ್ಪಿ ಮರಕ್ಕೆ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲೇ ಇಬ್ಬರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ತಿಳಿಸಿದ್ದಾರೆ. ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಪಾಕಿಸ್ತಾನದ ಪಾಪದ ಕೊಡ ತುಂಬಿದೆ

ಮಂಗಳೂರು: ಪಹಲ್ಗಾಮ್‌ನಲ್ಲಿ ಪ್ರವಾಸಿಗರು, ಜನಸಾಮಾನ್ಯರ ಮೇಲೆ ದಾಳಿ ನಡೆಸಿದ ಪಾಕಿಸ್ತಾನಕ್ಕೆ ಭಾರತ ಸೈನ್ಯ ತಕ್ಕ ಉತ್ತರ ನೀಡಿದೆ. ಪಾಕಿಸ್ತಾನದ ಪಾಪದ ಕೊಡ ತುಂಬಿದ್ದು, ಮುಂದಿನ ದಿನಗಳಲ್ಲಿ ತಕ್ಕ ಶಾಸ್ತಿ ಅನುಭವಿಸಲಿದೆ ಎಂದು ಮಾಜಿ ಸಂಸದ ನಳಿನ್ ಕುಮಾರ ಕಟೀಲ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಲವು ವರ್ಷಗಳಿಂದ ಉಗ್ರರನ್ನು ಸಾಕಿ ಭಾರತದ ಮೇಲೆ ಛೂ ಬಿಡುವ ಕೆಲಸ ಪಾಕಿಸ್ತಾನ ಮಾಡಿಕೊಂಡು ಬಂದಿದೆ. ಇದಕ್ಕೆ ಸಮರ್ಥ ಉತ್ತರ ನೀಡಲಾಗಿದ್ದು, ಉಗ್ರರ ಡೇರೆಗಳನ್ನು ಹುಡುಕಿ ಹೊಡೆಯುವ ಕೆಲಸ ನಡೆದಿದೆ. ಭಾರತದ ಉತ್ತರದಿಂದ ಪಾಕಿಸ್ತಾನ ಪಾಠ ಕಲಿಯಬೇಕು. ಆದರೆ, ಪಾಠ ಕಲಿತಂತಿಲ್ಲ. ಪಾಕಿಸ್ತಾನದ ಪ್ರತಿದಾಳಿಗೆ ಭಾರತದ ಸೈನಿಕರು ಸಮರ್ಥವಾಗಿ ಉತ್ತರ ನೀಡುವ ಕೆಲಸ ಮಾಡುತ್ತಿದ್ದಾರೆ. ಭಾರತದಿಂದ ಉಗ್ರವಾದಿಗಳ ಡೇರೆ ಮಾತ್ರ ಹೊಡೆದುರುಳಿದ್ದು ಹೊರತಾಗಿ ಪಾಕಿಸ್ತಾನದ ಪ್ರಜೆಗಳ ಮೇಲೆ ದಾಳಿ ನಡೆಸಿಲ್ಲ. ಆದರೆ ಪಾಕಿಸ್ತಾನ ತನ್ನ ಬುದ್ಧಿಯನ್ನು ಬಿಡದೆ ನಮ್ಮ ಜನಸಾಮಾನ್ಯರ ಮೇಲೆ ದಾಳಿ ಮಾಡಿದೆ. ಎಲ್ಲವನ್ನೂ ನಿಗ್ರಹಿಸುವ ಕೆಲಸ ನಮ್ಮ ಸೇನೆ, ಸರಕಾರ ಮಾಡುತ್ತಿದೆ ಎಂದು ತಿಳಿಸಿದರು.

ಯಾತ್ರೆಯಲ್ಲಿ ವಿದ್ಯಾರ್ಥಿಗಳು, ಸರಕಾರಿ ನೌಕರರು ಸೇರಿ ಸುಮಾರು 10 ಸಾವಿರಕ್ಕೂ ಹೆಚ್ಚು ಜನ ಭಾಗಿ

ಸೇನೆ ಬೆಂಬಲಿಸಿ ತಿರಂಗಾ ಯಾತ್ರೆ



1. ಪಹಲ್ಗಾಮ್ ನರಮೇಧಕ್ಕೆ ಪ್ರತೀಕಾರವಾಗಿ ಭಾರತೀಯ ಸೇನೆ ನಡೆಸುತ್ತಿರುವ ಆಪರೇಷನ್ ಸಿಂದೂರ ಕಾರ್ಯಚರಣೆಗೆ ಬೆಂಬಲ ಸೂಚಿಸಲು ರಾಜ್ಯ ಕಾಂಗ್ರೆಸ್ ಸರಕಾರ ಶುಕ್ರವಾರ ಬೆಂಗಳೂರಿನಲ್ಲಿ ಜೈಹಿಂದ್ ತಿರಂಗಾ ಯಾತ್ರಾ ನಡೆಸಿತು. 2. ಜೈಹಿಂದ್ ತಿರಂಗಾ ಯಾತ್ರೆಯಲ್ಲಿ ಭಾಗವಹಿಸಿದ್ದ ಜನಸ್ತೋಮ.

ಫೋಟೊ: ಸುಧಾಕರ್ ದೇವರಾಜ

ಬೆಂಗಳೂರು: ಪಹಲ್ಗಾಮ್ ನರಮೇಧಕ್ಕೆ ಪ್ರತೀಕಾರವಾಗಿ ಭಾರತೀಯ ಸೇನೆ ನಡೆಸುತ್ತಿರುವ ಆಪರೇಷನ್ ಸಿಂದೂರ ಕಾರ್ಯಚರಣೆಗೆ ಬೆಂಬಲ ಸೂಚಿಸಲು ರಾಜ್ಯ ಕಾಂಗ್ರೆಸ್ ಸರಕಾರ ಶುಕ್ರವಾರ ಬೆಂಗಳೂರಿನಲ್ಲಿ ಜೈಹಿಂದ್ ತಿರಂಗಾ ಯಾತ್ರಾ ನಡೆಸಿತು.

ಭಾರತೀಯ ಯೋಧರಿಗೆ ಬೆಂಬಲ ಸೂಚಿಸಲು ಮತ್ತು ದೇಶದ ಒಗ್ಗಟ್ಟು ಪ್ರದರ್ಶಿಸುವ ಸಲುವಾಗಿ ರಾಜ್ಯ ಸರಕಾರದಿಂದ ಆಯೋಜಿಸಿದ್ದ ತಿರಂಗಾ ಯಾತ್ರೆ ನಗರದ ಕೆಆರ್ ಸರ್ಕಲ್ ನಿಂದ ಮಿನ್ಸ್‌ಕ್ವೇರ್ ಚೌಕದವರೆಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆಯಿತು. ಯಾತ್ರೆಯಲ್ಲಿ ವಿದ್ಯಾರ್ಥಿಗಳು, ಸರಕಾರಿ ನೌಕರರು ಸೇರಿದಂತೆ ಸುಮಾರು 10 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿ, ತ್ರಿವರ್ಣ ಧ್ವಜ ಹಿಡಿದು ಜೈ ಹಿಂದ್-ಜೈ ಭಾರತ್-ಜೈ ತಿರಂಗಾ, ಭಾರತ ಜಿಂದಾಬಾದ್, ಭಾರತ ಮಾತಾ ಕಿ ಜೈ ಮತ್ತು ನಮ್ಮ ಸೈನಿಕರು ನಮ್ಮ ಹೆಮ್ಮೆ ಎಂಬ ಘೋಷಣೆ ಕೂಗುತ್ತಾ ಹೆಜ್ಜೆ ಹಾಕಿದರು. ಆ ಮೂಲಕ ದೇಶದ ಭದ್ರತೆ ವಿಚಾರದಲ್ಲಿ ಎಲ್ಲರೂ ಒಟ್ಟಾಗಿ ನಿಲ್ಲುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರ ಹಾಗೂ ಭಾರತೀಯ ಸೇನಾ ಪಡೆಗಳಿಗೆ ಸಂಪೂರ್ಣ ಬೆಂಬಲ ಸೂಚಿಸುತ್ತೇವೆ ಎಂಬ ಸಂದೇಶ ರವಾನಿಸಲಾಯಿತು.

ಈ ವೇಳೆ ಸಚಿವರಾದ ಎಚ್.ಕೆ.ಪಾಟೀಲ್, ಡಾ.ಜಿ.ಪರಮೇಶ್ವರ್, ಕೆ.ಎಚ್.ಮುನಿಯಪ್ಪ, ದಿನೇಶ್ ಗುಂಡೂ ರಾವ್, ಪ್ರಿಯಾಂಕ್ ಖರ್ಗೆ, ಡಾ.ಎಂ.ಸಿ. ಸುಧಾಕರ್, ಬೋಸರಾಜು, ಕೃಷ್ಣಬೈರೇಗೌಡ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಕಾಂತ್, ಶಾಸಕರಾದ ರಿಜ್ವಾನ್ ಅರ್ಷದ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿ ಭಾಗವಹಿಸಿದ್ದರು.

ಸುದ್ದಿಗಾರರೊಂದಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿ, ಕರ್ನಾಟಕದಲ್ಲಿ ಜೈ ಹಿಂದ್ ತಿರಂಗ ಯಾತ್ರೆ ಆಯೋಜಿಸಲಾಗಿತ್ತು. ನಮ್ಮ ಸೇನೆಯ ಯೋಧರು ದೇಶ ರಕ್ಷಣೆಗೆ ಹೋರಾಟ ಮಾಡುತ್ತಿದ್ದಾರೆ. ಕೇಂದ್ರ ಸರಕಾರದ ತೀರ್ಮಾನವನ್ನು ಎಲ್ಲರೂ ಒಟ್ಟಾಗಿ ಬೆಂಬಲಿಸಬೇಕು. ಹೀಗಾಗಿ ಈ ಯಾತ್ರೆ ನಡೆಸಲಾಗಿದೆ. ಇದಕ್ಕೆ ಸಮಾಜದ ಎಲ್ಲಾ ವರ್ಗದವರನ್ನು ಆಹ್ವಾನಿಸಲಾಗಿತ್ತು. ವಿದ್ಯಾರ್ಥಿಗಳು, ಸರಕಾರಿ ನೌಕರರು, ಸಂಘಸಂಸ್ಥೆಗಳು ಸೇರಿದಂತೆ ಎಲ್ಲರಿಗೂ ಆಹ್ವಾನಿಸಲಾಗಿತ್ತು. ಈ ಯಾತ್ರೆಗೆ ಕರೆ ಕೊಟ್ಟ ಅಲ್ಪಾವಧಿಯಲ್ಲಿ ಎಲ್ಲಾ ವರ್ಗದ ಜನರು ಭಾರಿ ಪ್ರಮಾಣದಲ್ಲಿ ಆಗಮಿಸಿರುವುದಕ್ಕೆ ಧನ್ಯವಾದಗಳು ಎಂದರು.

ಭಯೋತ್ಪಾದನೆ ನಿರ್ಮೂಲನೆ ಆಗಬೇಕು

ಪಾಕಿಸ್ತಾನವು ಭಾರತದ ಮೇಲೆ ಇದೇನು ಮೊದಲ ಬಾರಿ ದಾಳಿ ನಡೆಸುತ್ತಿಲ್ಲ, ಈ ಹಿಂದೆಯೂ ಬಹಳ ಸಲ ದಾಳಿ ನಡೆಸಿದೆ ಅದಕ್ಕೆ ನಮ್ಮ ಭಾರತೀಯ ಯೋಧರು ಪ್ರತ್ಯುತ್ತರ ನೀಡುತ್ತಲೇ ಬಂದಿದ್ದಾರೆ. ಇಂದಿರಾ ಗಾಂಧಿ ಅವರ ಕಾಲದಲ್ಲಿ ಹೇಗೆ ಪಾಕಿಸ್ತಾನವನ್ನು ಬಗ್ಗುಬಡಿಯಲಾಗಿತ್ತೋ, ಅದೇ ರೀತಿ ನಮ್ಮ ಸೇನೆಯವರು ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡುತ್ತಿದ್ದಾರೆ. ಅವರ ಕಾರ್ಯವೈಖರಿ ಬಗ್ಗೆ ಬಹಳ ಹೆಮ್ಮೆ ಇದೆ. ಸೈನಿಕರು ನಮ್ಮ ಬಾವುಟವನ್ನು ಉತ್ತುಂಗದಲ್ಲಿ ಹಾರುವಂತೆ ಮಾಡಿದ್ದಾರೆ. ಅವರಿಗೆ ನಾವೆಲ್ಲರೂ ಒಟ್ಟಾಗಿ ಬೆಂಬಲ ಸೂಚಿಸಬೇಕು. ಭಯೋತ್ಪಾದನೆ ನಿರ್ಮೂಲನೆ ಆಗಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ಭಾರತ ಬಲಿಷ್ಠವಾಗಿದೆ, ಪಾಕಿಸ್ತಾನದ ದಾಳಿಯನ್ನು ಸಮರ್ಥವಾಗಿ ಎದುರಿಸಿ, ಮಟ್ಟಹಾಕಲಿದೆ. ಪಾಕಿಸ್ತನದ ದಾಳಿಗೆ ಭಾರತೀಯ ಯೋಧರು ತಕ್ಕ ಉತ್ತರ ನೀಡುತ್ತಿದ್ದಾರೆ ದೇಶದ ರಕ್ಷಣೆಗೆ ನಮ್ಮ ಯೋಧರು ಮಾಡುತ್ತಿರುವ ಹೋರಾಟಕ್ಕೆ ನಾವೆಲ್ಲರೂ ಬೆಂಬಲ ನೀಡಬೇಕು. ಆದ್ದರಿಂದ ಜೈಹಿಂದ್ ತಿರಂಗಾ ಯಾತ್ರೆ ಮೂಲಕ ಸೈನಿಕರಿಗೆ ಬೆಂಬಲ ಸೂಚಿಸಲಾಗುತ್ತಿದೆ. ನಮ್ಮ ಸೈನಿಕರು ನಮ್ಮ ಹೆಮ್ಮೆ.

– ಡಿ.ಕೆ.ಶಿವಕುಮಾರ್ ಡಿಸಿಎಂ

ದೇಶದ ಗಡಿಯಲ್ಲಿ ಪ್ರಾಣದ ಹಂಗು ತೊರೆದು ಹೋರಾಡುತ್ತಿರುವ ನಮ್ಮ ಹೆಮ್ಮೆಯ ಸೈನಿಕರಿಗೆ ನೈತಿಕ ಸ್ಥೈರ್ಯ ತುಂಬುವ ಸಲುವಾಗಿ ತಿರಂಗಾ ಯಾತ್ರೆ ಹೆಸರಿನಲ್ಲಿ ತ್ರಿವರ್ಣ ಧ್ವಜ ಹಿಡಿದು ಪಾದಯಾತ್ರೆಯಲ್ಲಿ ಹೆಜ್ಜೆಹಾಕುತ್ತಾ, ರಾಷ್ಟ್ರದ ಏಕತೆ ಮತ್ತು ಸಾರ್ವಭೌಮತೆಯನ್ನು ಎತ್ತಿ ಹಿಡಿದೆವು. ಭಯೋತ್ಪಾದನೆ ತೊಲಗಲಿ ಎಂದು ಇಡೀ ದೇಶ ಒಂದು ದನಿಯಾಗಿ ನಿಂತಿದೆ. ಮತ್ತೊಮ್ಮೆ ಭಾರತ ನೆಲದಲ್ಲಿ ಭಯೋತ್ಪಾದಕ ಕೃತ್ಯಕ್ಕೆ ಬೆಂಬಲ ಕೊಡುವ ಮೊದಲು ನೂರು ಬಾರಿ ಯೋಚಿಸುವಂತೆ ಪಾಕ್‌ಗೆ ನಮ್ಮ ಸೇನೆ ಪಾಠ ಕಲಿಸಲಿದೆ ಎಂಬ ಪೂರ್ಣ ವಿಶ್ವಾಸವಿದೆ. ನಮ್ಮ ಸೈನ್ಯ ನಮ್ಮ ಹೆಮ್ಮೆ.

– ಸಿದ್ದರಾಮಯ್ಯ ಮುಖ್ಯಮಂತ್ರಿ

ನಮ್ಮ ಸೇನೆ ಪಾಕಿಸ್ತಾನಕ್ಕೆ ಸಿಂದೂರ ಮಹತ್ವ ತಿಳಿಸಿದೆ

ಬೆಂಗಳೂರು: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಕ್ಕೆ ಬಂದಿದ್ದ 26 ಮಂದಿ ಪ್ರವಾಸಿಗರನ್ನು ಹತ್ಯೆ ಮಾಡಿ ಅವರ ಪತ್ನಿಯರ ಸಿಂದೂರವನ್ನು ಅಳಿಸಿದ ಉಗ್ರಗಾಮಿಗಳನ್ನು ಬೆಂಬಲಿಸಿದ ಪಾಕಿಸ್ತಾನಕ್ಕೆ ಭಾರತೀಯ ಸೇನೆ ಸಿಂದೂರದ ಮಹತ್ವ ಸಾರಿದೆ ಎಂದು

ಅಂತಾರಾಷ್ಟ್ರೀಯ ವಾಸ್ತು ತಜ್ಞ ಶ್ರೀ ಚಂದ್ರಶೇಖರ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ಉಗ್ರಗಾಮಿಗಳ ಬೆಂಬಲಿತ ಪಾಕಿಸ್ತಾನ ಮತ್ತು ಪಿಒಕೆ ನೆಲೆಗಳಿಗೆ ಭಾರತೀಯ ಸೇನೆಯು ಆಪರೇಷನ್ ಸಿಂದೂರ ಮೂಲಕ ದಾಳಿ ನಡೆಸಿ ಉಗ್ರರ ತಾಣವನ್ನು ಹೊಡೆದುರುಳಿಸುವ ಮೂಲಕ ಸಿಂದೂರದ ಮಹತ್ವವನ್ನು ಪಾಕಿಸ್ತಾನಕ್ಕೆ ತಿಳಿಸಿದೆ. ಪಾಕಿಸ್ತಾನವು ಕಳೆದ ಹಲವು ವರ್ಷಗಳಿಂದ ಉಗ್ರಗಾಮಿಗಳನ್ನು ಪೋಷಿಸುತ್ತಿದ್ದು ಉಗ್ರಗಾಮಿಗಳು ಕಳೆದ ಹಲವಾರು ವರ್ಷಗಳಿಂದ ನಮ್ಮ ದೇಶದ ಮೇಲೆ ನಿರಂತರ ದಾಳಿ ಮಾಡುತ್ತಿದ್ದಾರೆ. ಇದೀಗ ನಡೆಸಿದ ಆಪರೇಷನ್ ಮೂಲಕ ಅವರಿಗೆ ಭಾರತದ ಶಕ್ತಿಯ ಅರಿವಾಗಿದೆ. ಭಾರತೀಯ ಸೇನೆ ಪಾಕಿಸ್ತಾನದ ಸಾಮಾನ್ಯ ನಾಗರಿಕರಿಗೆ ಯಾವುದೇ ಪರಿಣಾಮವಾಗದ ರೀತಿಯಲ್ಲಿ ಪಾಕಿಸ್ತಾನ ಹಾಗೂ ಪಿಒಕೆಯ 9 ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿ ಎಚ್ಚರಿಕೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೈನಕ್ಕೆ ಯಾವುದೇ ನಿರ್ಧಾರ ತೆಗೆದುಕೊಳ್ಳಲು ಸಂಪೂರ್ಣ ಅಧಿಕಾರ ನೀಡಿದ್ದು ಅದರಂತೆ ಕಾರ್ಯಚರಣೆಯಲ್ಲಿ ಭಾಗವಹಿಸಿದ ಎಲ್ಲಾ ಸೈನಿಕರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ಮಹಿಳಾ ಉದ್ಯಮಿ ಸಾಧಕರ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗೆ ಆಹ್ವಾನ

ಬೆಂಗಳೂರು: ಜೂನ್ 4ರಂದು ಯಶವಂತಪುರದ ವಿವಂತ ತಾಜ್ ಹೋಟೆಲ್‌ನಲ್ಲಿ ನಡೆಯಲಿರುವ ಮಹಿಳಾ ಉದ್ಯಮಿ ಸಾಧಕರಿಗೆ ನೀಡಲಾಗುವ ವುಮೆನ್ ಆಫ್ ವರ್ತ್ (ವಾವ್) 2025ರ 5ನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಉಬುಂಟು ಮಹಿಳಾ ನಿಯೋಗದ ವತಿಯಿಂದ ಆಹ್ವಾನ ನೀಡಲಾಯಿತು.

ಸರಕಾರ ನಿವೃತ್ತ ಮುಖ್ಯ ಕಾರ್ಯದರ್ಶಿ ಮತ್ತು ಉಬುಂಟು ಸಂಸ್ಥಾಪಕಿ ಕೆ.ರತ್ನಪ್ರಭಾ ಸೇರಿದಂತೆ ಇತರ ಸಂಸ್ಥಾಪಕರು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಅಧಿಕೃತವಾಗಿ ಆಮಂತ್ರಣ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯವಾಗಿ ಮಹಿಳಾ ಉದ್ಯಮಿ ಸಾಧಕರನ್ನು ಗುರುತಿಸಿ ವಾವ್ 2025 ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಬಳಿಕ ಮಾತನಾಡಿದ ಕೆ. ರತ್ನಪ್ರಭಾ ಅವರು, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರಾದ ಶರಣಬಸಪ್ಪ ದರ್ಶನಾಪುರ ಪಾಲ್ಗೊಳ್ಳಲಿದ್ದಾರೆ. ಮಹಿಳಾ ಉದ್ಯಮಿಗಳು, ಉದ್ಯಮ ಮುಖಂಡರು, ಉದ್ಯಮ ಪಾಲುದಾರರನ್ನು ಒಗ್ಗೂಡಿಸಿ ನೆಟ್‌ವರ್ಕಿಂಗ್, ವ್ಯಾಪಾರ ಪರಿಶೋಧನೆ ಮತ್ತು ಮಹಿಳಾ ನೇತೃತ್ವದ ಉದ್ಯಮಗಳ ಪ್ರಚಾರಕ್ಕಾಗಿ ವೇದಿಕೆ ರಚಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬಾಕಿ ಬಿಲ್‌ಗೆ ಮತ್ತೆ ಸಿಎಂಗೆ ಪತ್ರ

ಬೆಂಗಳೂರು: ಗುತ್ತಿಗೆದಾರರ ಬಾಕಿ ಬಿಲ್‌ನ ಶೇ.50 ರಷ್ಟು ಹಣ ಬಿಡುಗಡೆ ಕುರಿತು ರಾಜ್ಯ ಸರಕಾರ ಆಶ್ವಾಸನೆ ಕೊಟ್ಟು ಎರಡು ತಿಂಗಳು ಕಳೆದರೂ ಈವರೆಗೆ ಕಾರ್ಯರೂಪಕ್ಕೆ ಬಂದಿಲ್ಲ ಎಂದು ರಾಜ್ಯ ಗುತ್ತಿಗೆದಾರರ ಸಂಘ ಬೇಸರ ವ್ಯಕ್ತಪಡಿಸಿದೆ. ಈ ಕುರಿತು ಸಿಎಂ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಆರ್.ಮಂಜುನಾಥ್, ಮಾ.3ರಂದು ನಿಮ್ಮನ್ನು ಭೇಟಿ ಮಾಡಿದ್ದ ಸಂದರ್ಭದಲ್ಲಿ ಬಾಕಿ ಇರುವ ಬಿಲ್‌ಗಳಿಗೆ ಶೇ.50ರಷ್ಟು ಹಣ ಬಿಡುಗಡೆ ಮಾಡುತ್ತೇವೆ ಎಂದು ಸಂಘದ ಪದಾಧಿಕಾರಿಗಳಿಗೆ ಭರವಸೆ ನೀಡಲಾಗಿತ್ತು. ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೈದಾರರು ಅಂದಾಜು 3 ವರ್ಷಗಳಿಂದ ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಈಡೇರಿಸುವಂತೆ ಅಧಿಕಾರಿಗಳಿಗೆ ನೀವು ಸೂಚನೆ ನೀಡಿದ್ದೀರಿ. ಆದರೆ ಈವರೆಗೆ ನಮ್ಮ ಯಾವ ಸಮಸ್ಯೆಗೂ ಅಧಿಕಾರಿಗಳು ಪರಿಹಾರ ನೀಡಿಲ್ಲ ಎಂದು ತಿಳಿಸಿದ್ದಾರೆ.

ಕೆಆರ್‌ಎಸ್‌ನಲ್ಲಿ ಮೇ 11 ರಂದು ಮಾಕ್ ಡ್ರಿಲ್

ಮಂಡ್ಯ: ತುರ್ತು ಸಂದರ್ಭಗಳಲ್ಲಿ ಅಣೆಕಟ್ಟು ರಕ್ಷಣೆ ಮಾಡುವ ಬಗ್ಗೆ ಸಾರ್ವಜನಿಕರು, ಪ್ರವಾಸಿಗರಿಗೆ ಜಾಗೃತಿ ಮೂಡಿಸಲು ಮೇ 11ರಂದು ಕೆಆರ್‌ಎಸ್ ಬೃಂದಾವನ ಉದ್ಯಾನವನದಲ್ಲಿ ಛಆಪರೇಷನ್ ಅಭ್ಯಾಸ್ ಅಡಿಯಲ್ಲಿ ಅಣಕು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ ಸಂಜೆ 4 ಗಂಟೆಯಿಂದ 7 ಗಂಟೆ ವರೆಗೆ ಅಣಕು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಇದು ಜಾಗೃತಿ ಉದ್ದೇಶದಿಂದ ಮಾಡಲಾಗುತ್ತಿದ್ದು, ಸಾರ್ವಜನಿಕರು, ಪ್ರವಾಸಿಗರು ಆತಂಕ ಪಡುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ತಿಳಿಸಿದ್ದಾರೆ.

ಮಂಡ್ಯ ಜಿಲ್ಲಾ ಪಂಚಾಯಿತಿ ಕಾವೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಬೆಂಕಿ ಅನಾಹುತಗಳು, ತುರ್ತು ಸಂದರ್ಭದಲ್ಲಿ ಜನರು ಗಾಬರಿ ಅಥವಾ ಆತಂಕಕ್ಕೆ ಒಳಗಾಗದಂತೆ ಆತ್ಮ ವಿಶ್ವಾಸ ತುಂಬಿ, ಅರಿವು ಮೂಡಿಸುವ ಉದ್ದೇಶದಿಂದ ಅಣುಕು ಪ್ರದರ್ಶನ ಆಯೋಜಿಸಲಾಗುತ್ತಿದೆ. ಅಲ್ಲದೇ ತುರ್ತು ಕಾರ್ಯಾಚರಣೆ ವೇಳೆ ನಾಗರಿಕರ ರಕ್ಷಣೆ, ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವಿಕೆ, ಗಾಯಗೊಂಡವರಿಗೆ ಆಸ್ಪತ್ರೆಗೆ ಸ್ಥಳಾಂತರಿಸುವ ಕುರಿತು ಹಾಗೂ ಬ್ಲಾಕ್ ಔಟ್ ಚಟುವಟಿಕೆಗಳ ಬಗ್ಗೆ ಅಣುಕು ಪ್ರದರ್ಶನ ಮಾಡಲಾಗುತ್ತದೆ. ಜನರು ಜನತೆ ಯಾವುದೇ ರೀತಿಯ ಗಾಬರಿ, ಆತಂಕಕ್ಕೆ ಒಳಗಾಗದೇ ಜಿಲ್ಲಾಡಳಿತದೊಂದಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಭಾರತಾಂಬೆಯ ಸೇವೆಗೆ ಮರಳಿದ ಕನ್ಯಾಕುಮಾರ

ಇಂಡೋ-ಪಾಕ್ ನಡುವೆ ಯುದ್ಧದ ಕಾರ್ಮೋಡ | ರಜೆ ಮೇಲೆ ಬಂದಿದ್ದ ಯೋಧನಿಗೆ ಬುಲಾವ್

ಕಲಬುರಗಿ: ದೇಶದಲ್ಲಿ ಸದ್ಯ ಭಾರತ ಹಾಗೂ ಪಾಕಿಸ್ತಾನದ ನಡುವೆ ಯುದ್ಧದ ಸನ್ನಿವೇಶಗಳು ಗೋಚರವಾಗುತ್ತಿರುವ ನಿಟ್ಟಿನಲ್ಲಿ ರಜೆಯ ಮೇಲೆ ತೆರಳಿದ ಸೈನಿಕರ ಅವಶ್ಯಕತೆ ಭಾರತಾಂಬೆಗೆ ಇದ್ದು, ಅವರನ್ನು ಮರಳಿ ಕರೆಸಿಕೊಳ್ಳುವ ಪ್ರಕ್ರಿಯೆ ನಡೆದಿದ್ದು, ಇತ್ತ ಕಲಬುರಗಿಯ ಯೋಧ ಸಹ ತಾಯಿ ಭಾರತೀಯ ಸೇವೆಗಾಗಿ ರಜೆ ಮೊಟಕುಗೊಳಿಸಿ ಸೇನೆಗೆ ತೆರಳಿದ್ದಾನೆ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಅರ್ಜುಣಗಿ ತಾಂಡಾದ ನಿವಾಸಿಯಾದ ಕನ್ಯಾಕುಮಾರ್ ಚೌಹಾಣ್ ತಂಗಿಯ ಮದುವೆ ಹಾಗೂ ಹೆತ್ತ ತಾಯಿಯ ಅನಾರೋಗ್ಯ ಸಮಸ್ಯೆ ಹಿನ್ನೆಲೆ ಒಂದು ತಿಂಗಳ ರಜೆಯ ಮೇಲೆ ಕಲಬುರಗಿಗೆ ಬಂದಿದ್ದ, ಈಗ ಯುದ್ಧದ ಕಾರ್ಮೋಡ ಹೆಚ್ಚಾಗಿದರಿಂದ ಮರಳಿ ತನ್ನ ಕರ್ತವ್ಯಕ್ಕೆ ಹಾಜರಾಗಲು ಕಲಬುರಗಿಯಿಂದ ಪ್ರಯಾಣ ಬೆಳೆಸಿದ್ದಾನೆ.

20 ವರ್ಷಗಳಿಂದ ಸಿಆರ್‌ಪಿಎಫ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದು,ಮನೆಯಲ್ಲಿ ಬರುವ ಮೇ.19ರಂದು ತಂಗಿಯ ಮದುವೆ ನಿಮಿತ್ತ ಒಂದು ತಿಂಗಳ ರಜೆ ಪಡೆದ ಮೇ.6ರಂದು ಕಲಬುರಗಿಗೆ ಆಗಮಿಸಿದ್ದರು.ಇದೀಗ ಪಹಲ್ಗಾಮ್ ದಾಳಿ ಪ್ರತೀಕಾರವಾಗಿ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಯುದ್ಧ ಏರ್ಪಟ್ಟ ಹಿನ್ನೆಲೆಯಲ್ಲಿ,ರಜೆ ರದ್ದುಪಡಿಸಿ ನಿಮ್ಮ ಕರ್ತವ್ಯಕ್ಕೆ ಹಾಜರಾಗುವಂತೆ ಹೆಡ್ ಕ್ವಾರ್ಟರ್ಸ್‌ನಿಂದ ಕರೆ ಬಂದಿದೆ.

ಯೋಧ ಕನ್ಯಾಕುಮಾರ ಚೌಹಾಣ್ ಅವರ ತಾಯಿಯ ಅನಾರೋಗ್ಯ ಹಾಗೂ ತಂಗಿಯ ಮದುವೆಯನ್ನು ಬಿಟ್ಟು,ಇದೀಗ ದೇಶದ ಸೇವೆಗಾಗಿ ಪುನಃ ತನ್ನ ಕರ್ತವ್ಯಕ್ಕೆ ಹಾಜರಾಗುತ್ತಿದ್ದು,ಜಮ್ಮು ಕಾಶ್ಮೀರದ ಶ್ರೀನಗರದಲ್ಲಿ ಕಳೆದ 20 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಹೆಡ್ ಕ್ವಾರ್ಟರ್ಸ್ ನಿಂದ ಕರೆ ಬಂದ ಕೂಡಲೇ ಕಲಬುರಗಿ ರೈಲ್ವೆ ನಿಲ್ದಾಣದಿಂದ ಹೈದರಾಬಾದ್ ಗೆ ತೆರಳಿ ಅಲ್ಲಿಂದ ಶ್ರೀನಗರಕ್ಕೆ ರಿಪೋರ್ಟ್ ಮಾಡಿಕೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ.

ಸಿಆರ್‌ಪಿಎಫ್ ಯೋಧ ಕನ್ಯಾಕುಮಾರ ಚೌಹಾಣ್ ಮರಳಿ ಕರ್ತವ್ಯಕ್ಕೆ ಹಾಜರಾಗಲು ಹೋಗುತ್ತಿದ್ದಂತೆ ಕಲಬುರಗಿ ನಗರದ ರೈಲ್ವೆ ನಿಲ್ದಾಣದಲ್ಲಿ ಯೋಧನ ಪತ್ನಿ ಸಹ ಕಣ್ಣೀರು ಹಾಕಿ, ಆತಂಕದಲ್ಲೇ ಪತಿಯನ್ನು ಯುದ್ಧ ಭೂಮಿಗೆ ಕಳುಹಿಸಿದರು.

ದೇಶದ ಮೇಲೆ ಶತ್ರುಗಳ ಹಾವಳಿ ಹೆಚ್ಚಾಗಿದ್ದು, ಹೆಡ್ ಕ್ವಾರ್ಟರ್ಸ್‌ನಿಂದ ಕರೆ ಬಂದಿದೆ. ಹೋಗಲೇ ಬೇಕಾಗುತ್ತದೆ. ಹೋಗಲಿಲ್ಲ ಅಂದರೆ ನಡೆಯುವುದಿಲ್ಲ. ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ದೇಶ ಮುಖ್ಯವಾಗಲಿದೆ. ಅಮಾಯಕರ ಬಲಿ ತೆಗೆದುಕೊಂಡ ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡುತ್ತೇವೆ.

– ಕನ್ಯಾಕುಮಾರ್ ಚೌಹಾಣ್
ಸಿಆರ್‌ಪಿಎಫ್ ಯೋಧ, ಕಲಬುರಗಿ

ಕಣ್ಣೀರಿಡುತ್ತಾ ಬೀಳ್ಕೊಟ್ಟ ಹೆಂಡತಿ

ತಂಗಿಯ ಮದುವೆಗೆ ಬಂದಿದ್ದ ಸಿಆರ್‌ಪಿಎಫ್ ಯೋಧ ಕನ್ಯಾಕುಮಾರ ಚೌಹಾಣ್ ಮರಳಿ ಕರ್ತವ್ಯಕ್ಕೆ ಹಾಜರಾಗಲು ಹೋಗುತ್ತಿದ್ದಂತೆ ಕಲಬುರಗಿ ನಗರದ ರೈಲ್ವೆ ನಿಲ್ದಾಣದಲ್ಲಿ ಸಂಬಂಧಿಕರು ಹಾಗೂ ಸಾರ್ವಜನಿಕರು ಹೂವಿನ ಹಾರ ಹಾಕಿ ಯುದ್ಧದಲ್ಲಿ ಜಯಶಾಲಿಯಾಗಲಿ ಎಂದು ಪ್ರೀತಿಯಿಂದ ದೇಶ ಸೇವೆಗೆ ಕಳುಹಿಸಿ ಕೊಟ್ಟಿದ್ದಾರೆ. ಇತ್ತ ಯೋಧನ ಪತ್ನಿ ಸಹ ಕಣ್ಣೀರು ಹಾಕಿ, ಆತಂಕದಲ್ಲೇ ಪತಿಯನ್ನು ಯುದ್ಧ ಭೂಮಿಗೆ ಕಳುಹಿಸಿದ್ದಾರೆ.

ಪಾಕ್ ಪರ ಸಂದೇಶ: ದೂರು ದಾಖಲು

ಆಲ್ ಅಮೀನ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯಿಂದ ಪೋಸ್ಟ್



ವಿಜಯಪುರ: ಭಾರತ ಪಾಕಿಸ್ತಾನ ಮಧ್ಯೆ ದಾಳಿ ಪ್ರತಿದಾಳಿ ನಡೆಯುತ್ತಿರುವ ಮಧ್ಯೆ ವಿಜಯಪುರದಲ್ಲಿ ಪಾಕ್ ಪ್ರೇಮಿ ಎಂದು ವಿದ್ಯಾರ್ಥಿನಿಯೊಬ್ಬಳು ಪಾಕಿಸ್ತಾನ ಪರವಾಗಿ ಪೋಸ್ಟ್ ಹಾಕಿದ್ದು ಆಕೆಯ ವಿರುದ್ಧ ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಸ್ವಯಂಪ್ರೇರಿತ ದೂರು ದಾಖಲಾಗಿದೆ.

ವಿಜಯಪುರ ಆಲ್ ಅಮೀನ್ ಮೆಡಿಕಲ್ ಕಾಲೇಜಿನಲ್ಲಿ ದಂತ ವೈದ್ಯಕೀಯ ವಿದ್ಯಾರ್ಥಿನಿ ತಷಾವುದ್ದ ಪಾರೂಖಿ ಶೇಖ್ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪಾಕ್ ಪರ ಪೋಸ್ಟ್ ಹಾಕಿದ್ದಾಳೆ. To my pakistani Friends, people of IOJK, Ajk, Avoide Going near Military Govt Installation if you are leaving close to 200 km border Radius please move Inland my allah protect us all from India ameen # ಎಂದು ಪಾಕ್ ಧ್ವಜ ದೊಂದಿಗೆ ಪೋಸ್ಟ್ ಮಾಡಿದ್ದಾಳೆ. ಪಾಕಿಸ್ತಾನ ಹಾಗೂ ಇತರರಿಗೆ ದೇವರು ಸಂರಕ್ಷಣೆ ಮಾಡಲಿ ಎಂದು ಭಾರತ ವಿರೋಧಿ ಪೋಸ್ಟ್ ಹಾಕಿದ ವಿದ್ಯಾರ್ಥಿನಿಗೆ ವಿಜಯಪುರ ಗ್ರಾಮೀಣ ಪೊಲೀಸ್ ಠಾಣಾ ಪಿಎಸ್‌ಐ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿದ್ದಾರೆ. ದೂರು ದಾಖಲಾಗುತ್ತಿದ್ದಂತೆ ಯೂಟರ್ನ್ ಹೊಡೆದ ವಿದ್ಯಾರ್ಥಿನಿ ಮತ್ತೆ ಕ್ಷಮೆಯಾಚಿಸಿ ಪೋಸ್ಟ್ ಮಾಡಿದ್ದಾಳೆ.

ಯೂಟರ್ನ್ ಹೊಡೆದ ವಿದ್ಯಾರ್ಥಿನಿ

ನನ್ನ ಪೋಸ್ಟ್ ಬಹಳಷ್ಟು ಜನರಿಗೆ ನೋವು ತಂದಿದೆ, ನಾನು ಎಲ್ಲರಿಗೂ ಹೃದಯದಿಂದ ಕ್ಷಮೆ ಯಾಚಿಸುತ್ತೇನೆ. ಭಾರತೀಯಳಾದ ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ, ಭಾರತದಲ್ಲಿ ಹುಟ್ಟಿ ಬೆಳೆದಿದ್ದು, ಇದು ನನ್ನ ತಾಯ್ನಾಡು. ನನ್ನ ಮೂರ್ಖತನದ ಪೋಸ್ಟ್‌ಗೆ ನಾನು ಮತ್ತೊಮ್ಮೆ ಎಲ್ಲರಿಗೂ ಕ್ಷಮೆ ಯಾಚಿಸುತ್ತೇನೆ. ಇನ್ಮುಂದೆ ಎಂದಿಗೂ ತಪ್ಪು ಮಾಡುವುದಿಲ್ಲ ಎಂದು ಪ್ರಮಾಣ ಮಾಡುತ್ತೇನೆ, ಜೈ ಹಿಂದ್' ಎಂದು ಭಾರತದ ಧ್ವಜ ಚಿತ್ರದೊಂದಿಗೆ ಪೋಸ್ಟ್ ಮಾಡಿದ್ದಾಳೆ

ವಿಶ್ವವಾಣಿ

ಸಂಪಾದಕೀಯ

ಸರಣಿ ಸಂಕಷ್ಟದಲ್ಲಿ ಪಾಕಿಸ್ತಾನ

ಗ್ರಹಚಾರ ನೆಟ್ಟಗಿಲ್ಲದಿದ್ದರೆ ಹಗ್ಗವೂ ಹಾವಾಗಿ ಕಚ್ಚುತ್ತದೆ ಎಂಬುದೊಂದು ಮಾತು ನಮ್ಮ ಜನರ ನಡುವೆ ಚಾಲ್ತಿಯಲ್ಲಿದೆ. ಪಾಕಿಸ್ತಾನ ಸದ್ಯ ಹಾದುಹೋಗುತ್ತಿರುವ ಪರಿಸ್ಥಿತಿಯನ್ನು ಅವಲೋಕಿಸಿದವರಿಗೆ ಈ ಮಾತು ನೆನಪಾದಲ್ಲಿ ಅಚ್ಚರಿಯೇನಿಲ್ಲ. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕ್-ಪೋಷಿತ ಉಗ್ರರು ನಡೆಸಿದ ಅಮಾಯಕರ ಮಾರಣಹೋಮಕ್ಕೆ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಮೂಲಕ ಭಾರತ ಸರಿಯಾಗೇ ತಪರಾಕಿ ನೀಡಿದೆ, ನೀಡುತ್ತಿದೆ. ಇದರಿಂದ ಸುಧಾರಿಸಿಕೊಳ್ಳುವ ಮುನ್ನವೇ ಇತ್ತ ಬಲೂಚಿಸ್ತಾನದ ಬಂಡುಕೋರರು, ಅತ್ತ ಕಡೆ ತಾಲಿಬಾನಿಗಳು ಕೂಡ ಪಾಕಿಸ್ತಾನದ ಮೇಲೆ ದಾಳಿಗೆ ಮುಂದಾಗಿದ್ದಾರೆ. 12 ಮಂದಿ ಪಾಕ್ ಸೈನಿಕರು ಯುದ್ಧ ಸಾಮಗ್ರಿಗಳೊಂದಿಗೆ ಸಾಗುತ್ತಿದ್ದ ವಾಹನವನ್ನು ಬಲೂಚಿ ಬಂಡುಕೋರರು ಸ್ಫೋಟಿಸಿದ ವಿಡಿಯೋ ದೃಶ್ಯ ಎಲ್ಲೆಡೆ ವೈರಲ್ ಆಗಿತ್ತು. ಈಗ 'ತೆಹ್ರೀಕ್-ಇ-ತಾಲಿಬಾನ್' ನಡೆಸಿದ ದಾಳಿಯಲ್ಲಿ 20 ಮಂದಿ ಪಾಕ್ ಸೈನಿಕರು ಅಸುನೀಗಿದ್ದಾರೆ ಹಾಗೂ ಪಾಕಿಗಳ ಶಸ್ತ್ರಾಸ್ತ್ರಗಳನ್ನೂ ಅವರು ವಶಪಡಿಸಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಉಗ್ರವಾದದ ಅಬ್ಬರ ಹಾಗೂ 'ಛಾಯಾಸಮರದ' ಮೂಲಕ ಶಾಂತಿಪ್ರಿಯ ರಾಷ್ಟ್ರಗಳಿಗೆ ಕಂಟಕಪ್ರಾಯವಾಗಿದ್ದ ಪಾಕಿಸ್ತಾನಕ್ಕೆ, ಈಗ ಎಲ್ಲವೂ ತನ್ನ ಲೆಕ್ಕಾಚಾರದಂತೆ ನಡೆಯುತ್ತಿಲ್ಲ ಎಂಬ ಕಹಿಸತ್ಯದ ಅರಿವಾಗಿರಬೇಕು! 'ಕಿಡಿಗೇಡಿ ವ್ಯಕ್ತಿಗೆ ಕಿರಿಕಿರಿ ತಪ್ಪಿದ್ದಲ್ಲ' ಎಂಬರ್ಥದ ಮಾತನ್ನು ನಮ್ಮ ಜನರು ಆಡುವುದುಂಟು. ಅಂದರೆ, ಪರಿಶ್ರಮದ ಹಾದಿಯನ್ನು ಕೈಬಿಟ್ಟು, ಕಿಡಿಗೇಡಿತನದಿಂದಲೋ, ಮತ್ತೊಬ್ಬರನ್ನು ಸುಲಿಗೆ ಮಾಡಿಯೋ, ಹಿಂಸಿಸಿಯೋ ಅನ್ನ ದಕ್ಕಿಸಿಕೊಳ್ಳುವವನು ನೆಮ್ಮದಿಯಿಂದ ಇರಲಾಗದು ಅಂತ ಈ ಮಾತಿನ ಅರ್ಥ. ಪಾಕಿಸ್ತಾನ ಇದನ್ನು ಇನ್ನಾದರೂ ಗ್ರಹಿಸಿ, ಆತ್ಮಾವಲೋಕನಕ್ಕೆ ಮುಂದಾದರೆ ಒಳಿತು. ಇಲ್ಲವಾದಲ್ಲಿ, ಜಾಗತಿಕ ಸಮುದಾಯದೆದುರು ಈಗಾಗಲೇ ಮೂರಾಬಟ್ಟೆಯಾಗಿರುವ ಅದರ ಪರಿಸ್ಥಿತಿ ಮತ್ತಷ್ಟು ಅಧೋಗತಿಗೆ ಇಳಿಯುವ ದಿನಗಳು ದೂರವಿಲ್ಲ. ಸಮುದ್ರದಲ್ಲಿ ಸಂಚರಿಸುವ ಹಡಗು ದಡದಲ್ಲಿ ನಿಂತಿರುವವರಿಗೆ ಕಾಣುವುದಕ್ಕೂ ಮೊದಲು ಹಡಗಿನ ಧ್ವಜ ಕಾಣುತ್ತದೆ. ಪಾಕಿಸ್ತಾನಕ್ಕೆ ಈಗ ಸಂಕಷ್ಟದ ಪತಾಕೆ ಕಾಣಿಸಿಕೊಂಡಿದೆ. ಅದು ತಪ್ಪನ್ನು ಇನ್ನಾದರೂ ತಿದ್ದಿಕೊಳ್ಳದಿದ್ದಲ್ಲಿ, ಹಡಗು ಬಂದು ಅಪ್ಪಳಿಸುವ ದಿನಗಳು ದೂರವಿಲ್ಲ...

ಸೊಂಪಾದಕೀಯ

ಐಪಿಎಲ್‌ಗೆ ಸ್ಟ್ರಾಟೆಜಿಕ್ ಟೈಮ್ ಔಟ್

ದೇಶದಲ್ಲೀಗ ಯುದ್ಧದ್ದೇ ಸದ್ದು. ಗಡಿಯಲ್ಲಿ ಗುಂಡಿನ ಮೊರೆತ, ಭಯೋತ್ಪಾದಕರ ಕುಕೃತ್ಯಕ್ಕೆ ಸೇಡು ತೀರಿಸಿಕೊಳ್ಳಲು ಭಾರತ ಪಾಕಿಸ್ತಾನದ ಮೇಲೆ ಅಟ್ಯಾಕ್ ಮಾಡುತ್ತಿದೆ. ಆದರೆ ಇದು ಅಸಲಿಗೆ ಯುದ್ಧವೋ ಅಲ್ಲವೋ ಅಂತ ಯಾರಿಗೂ ಕ್ಲಾರಿಟಿ ಇಲ್ಲ. ಭಯೋತ್ಪಾದಕರ ನೆಲೆಗಳ ಮೇಲೆ ದಾಳಿ ಅಂತ 'ಆಪರೇಷನ್ ಸಿಂದೂರ್' ಶುರು ಮಾಡಿ ಈಗ ಪಾಕಿಸ್ತಾನದ ನಗರಗಳ ಮೇಲೂ, ರಾವಲ್ಪಿಂಡಿ ಸ್ಟೇಡಿಯಂ ಮೇಲೂ ಭಾರತ ಅಟ್ಯಾಕ್ ಮಾಡಿದೆ. ಆ ಕಡೆಯಿಂದ ಪಾಕಿಸ್ತಾನ ಕೂಡಾ ಭಾರತದ ಮೇಲೆ ದಾಳಿ ಮಾಡಲು ಪ್ರಯತ್ನ ಪಡ್ತಾ ಇದೆ. ಇದೇ ಆತಂಕದಲ್ಲಿ ಮೊನ್ನೆ ನಡೆಯುತ್ತಿದ್ದ ಐಪಿಎಲ್ ಪಂದ್ಯವನ್ನು ಸ್ಥಗಿತಗೊಳಿಸಲಾಗಿದೆ. ಯಾಕಂದ್ರೆ ನಾವು ಅವರ ಸ್ಟೇಡಿಯಂ ಮೇಲೆ ಅಟ್ಯಾಕ್ ಮಾಡಿದರೆ ಅವರೂ ಅದೇ ಕೆಲಸ ಮಾಡುವ ಸಾಧ್ಯತೆ ಇದ್ದೇ ಇದೆ. ಹಾಗಾಗಿ ಈಗ ಇಡೀ ಐಪಿಎಲ್ ಪಂದ್ಯಾವಳಿಯನ್ನೇ ಸ್ಥಗಿತಗೊಳಿಸಲಾಗಿದೆ. ಬಿಸಿಸಿಐ ಮತ್ತು ಐಪಿಎಲ್ ಸಂಘಟಕರಿಂದ ಈಗ ಐಪಿಎಲ್ ಅನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಅನ್ನೋ ಮಾಹಿತಿ ಬಂದಿದೆ. ಕನಿಷ್ಠಪಕ್ಷ ಒಂದು ವಾರದವರೆಗೆ ಐಪಿಎಲ್ ತಡೆಹಿಡಿಯಲಾಗಿದೆ ಅಂತ ಹೇಳಲಾಗಿದೆ. ನಂತರ ಮತ್ತೆ ಪಂದ್ಯ ಮುಂದುವರಿಯುವ ಬಗ್ಗೆ ಮಾಹಿತಿ ಇಲ್ಲ. ಆದರೆ ಸದ್ಯಕ್ಕಂತೂ ಐಪಿಎಲ್ ಅಭಿಮಾನಿಗಳಿಗೆ ಬ್ಯಾಡ್ ನ್ಯೂಸ್. ಐಪಿಎಲ್ ಪಂದ್ಯಗಳಿಗೆ ಒಂಥರಾ ಸ್ಟ್ರಾಟೆಜಿಕ್ ಟೈಮ್ ಔಟ್ ಕೊಡಲಾಗಿದೆ. ಆದರೆ ಈ ಬಾರಿ ಸ್ಟ್ರಾಟೆಜಿಕ್ ಟೈಮ್ ಔಟ್ ಕೇವಲ ಎರಡೂವರೆ ನಿಮಿಷ ಅಲ್ಲ. ಕನಿಷ್ಠ ಒಂದು ವಾರ ಅಥವಾ ಇನ್ನೂ ಹೆಚ್ಚಾಗಬಹುದು. ಭಾರತ ಮತ್ತು ಪಾಕಿಸ್ತಾನ ತಂಡಗಳು ಈಗ ಯುದ್ಧ ಭೂಮಿಯಲ್ಲಿ ತಮ್ಮದೇ ಆದ ಸ್ಟ್ರಾಟೆಜಿ ಮಾಡ್ತಾ ಇರೋದ್ರಿಂದ ಈ ಬ್ರೇಕ್. ಒಂದು ಲೆಕ್ಕದಲ್ಲಿ ಯುದ್ಧದ ಸಮಯದಲ್ಲಿ ಕೊಟ್ಟಿರೋ ಬ್ರೇಕ್ ಆದ್ದರಿಂದ ಇದನ್ನು ಐಪಿಎಲ್‌ನ ಕದನವಿರಾಮ ಅಂತಲೂ ಕರೆಯಬಹುದು. ಸದ್ಯಕ್ಕಂತೂ ಕ್ರಿಕೆಟ್ ಮೂಡಿನಲ್ಲಿ ಇರ್ತಾ ಇದ್ದ ಅಭಿಮಾನಿಗಳಿಗೆ ನಿರಾಸೆ ಆಗಿದೆ. ಈಗೇನಿದ್ದರೂ ಫೇಸ್‌ಬುಕ್, ವಾಟ್ಸ್ಯಾಪ್‌ಗಳಲ್ಲಿ ಬರೋ ರೂಮರ್‌ಗಳು, ನ್ಯೂಸ್ ಚಾನೆಲ್‌ಗಳಲ್ಲಿ ತೋರಿಸ್ತಾ ಇರೋ ವಿಡಿಯೋ ಗೇಮ್ ದೃಶ್ಯಗಳನ್ನು ನೋಡಿ 'ವಾರ್ ಮೂಡ್' ಅನ್ನು ಎಂಜಾಯ್ ಮಾಡಬೇಕು ಅಷ್ಟೇ.

ಸಂಪಾದಕರ ಸದ್ಯಶೋಧನೆ

ನಿಂಟೆಂಡೋ ಪ್ರಭಾವ

ನಿಂಟೆಂಡೋ ಕಂಪನಿ ಬಗ್ಗೆ ನಾನು ಸಾಕಷ್ಟು ಸಲ ಕೇಳಿದ್ದೆ. ಇದು ಜಪಾನಿನ ಕ್ಯೋಟೋ ನಗರದಲ್ಲಿರುವ, ಜಾಗತಿಕವಾಗಿ ಪ್ರಸಿದ್ಧವಾದ ವಿಡಿಯೋ ಗೇಮ್ ಕಂಪನಿ. ಇದು 1889ರಲ್ಲಿ ಫುಸಾಜಿರೋ ಯಮೌಚಿ ಸ್ಥಾಪಿಸಿದ ಸಂಸ್ಥೆಯಾಗಿ ಆರಂಭವಾದರೂ, ಹಾನಾಫುಡಾ ಎಂಬ ಜಪಾನಿ ಆಟದ ಕಾರ್ಡ್‌ಗಳನ್ನು ತಯಾರಿಸಿ ವಿಶ್ವದೆಲ್ಲೆಡೆ ಜನಪ್ರಿಯವಾಯಿತು. ಇದರಿಂದ ಆರಂಭವಾದ ನಿಂಟೆಂಡೋ, ಇಂದಿನ ದಿನಗಳಲ್ಲಿ ಗೇಮಿಂಗ್ ಮತ್ತು ಮನರಂಜನಾ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಕ್ಯೋಟೋ ನಗರದಲ್ಲಿ ಸಂಚರಿಸುವಾಗ ನಿಂಟೆಂಡೋ ಸಂಸ್ಥೆಯನ್ನು ಅನೇಕ ಸಲ ನೆನಪಿಸಿಕೊಂಡಿದ್ದುಂಟು. 1889ರಲ್ಲಿ ಫುಸಾಜಿರೋ ಯಮೌಚಿ ನಿಂಟೆಂಡೋ ಕೊಪ್ಪೈ ಎಂಬ ಹೆಸರಿನಲ್ಲಿ ಕ್ಯೋಟೋದಲ್ಲಿ ಸಂಸ್ಥೆಯನ್ನು ಸ್ಥಾಪಿಸಿದ. ಆತ ಹಾನಾಫುಡಾ ಎಂಬ ಜಪಾನಿ ಆಟದ ಕಾರ್ಡ್‌ಗಳನ್ನು ಕೈಯಿಂದ ತಯಾರಿಸುತ್ತಿದ್ದ. ಈ ಕಾರ್ಡ್‌ಗಳು ಜಪಾನಿನಲ್ಲಿ ಜನಪ್ರಿಯತೆ ಪಡೆದವು. ಕಂಪನಿಯು ಶೀಘ್ರದಲ್ಲೇ ಈ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಪಡೆಯಿತು. ಫುಸಾಜಿರೋ ನಿವೃತ್ತಿಯಾದ ನಂತರ, ಆತನ ಮೊಮ್ಮಗ ಹಿರೋಷಿ ಯಮೌಚಿ 1949ರಲ್ಲಿ ಕಂಪನಿಯ ಅಧ್ಯಕ್ಷನಾಗಿ ನೇಮಕಗೊಂಡ. ಆತ ನಿಂಟೆಂಡೋವನ್ನು ಹೊಸ ದಿಕ್ಕಿನಲ್ಲಿ ಮುನ್ನಡೆಸಿದ ಮತ್ತು ಕಂಪನಿಯು ಆಟದ ಕಾರ್ಡ್‌ಗಳ ಹೊರತಾಗಿ ಇತರ ವ್ಯವಹಾರಗಳಲ್ಲೂ ತೊಡಗಿಸಿಕೊಳ್ಳುವಂತೆ ಮಾಡಿದ. 1960ರ ದಶಕದಲ್ಲಿ, ನಿಂಟೆಂಡೋ ಆಟಿಕೆಗಳ ಉತ್ಪಾದನೆಗೆ ಪ್ರವೇಶಿಸಿತು. ಈ ಸಮಯದಲ್ಲಿ, ಕಂಪನಿಯು ವಿವಿಧ ರೀತಿಯ ಆಟಿಕೆಗಳನ್ನು ತಯಾರಿಸಿತು. ಕೆಲವು ಉತ್ಪನ್ನಗಳು ಜನಪ್ರಿಯತೆ ಪಡೆದವು. ಇದರಲ್ಲಿ 'ಅಲ್ಟ್ರಾ ಹ್ಯಾಂಡ್' ಎಂಬ ಆಟಿಕೆಯನ್ನು ವಿಶೇಷವಾಗಿ ಉಲ್ಲೇಖಿಸಲೇಬೇಕು. ನಿಂಟೆಂಡೋ 1963ರಲ್ಲಿ ತನ್ನ ಹೆಸರನ್ನು 'ನಿಂಟೆಂಡೋ ಕಂಪನಿ ಲಿಮಿಟೆಡ್' ಎಂದು ಬದಲಿಸಿಕೊಂಡಿತು. ಇದರಿಂದ ಕಂಪನಿಯು ತನ್ನ ವ್ಯವಹಾರವನ್ನು ವಿಸ್ತರಿಸಲು ಮತ್ತು ಹೊಸ ತಂತ್ರಜ್ಞಾನಗಳಲ್ಲಿ ಪ್ರವೇಶಿಸಲು ಸಿದ್ಧವಾಯಿತು. 1970ರ ದಶಕದ ಕೊನೆಯಲ್ಲಿ, ನಿಂಟೆಂಡೋ ಇಲೆಕ್ಟ್ರಾನಿಕ್ ಆಟಿಕೆಗಳ ವಲಯವನ್ನು ಪ್ರವೇಶಿಸಿತು. ಅದಾಗಿ ಏಳು ವರ್ಷಗಳ ಬಳಿಕ, ಕಂಪನಿಯು ತನ್ನ ಮೊದಲ ವಿಡಿಯೋ ಗೇಮ್ ಕಾನ್ಸೋಲ್ 'ಕಲರ್ ಟಿವಿ-ಗೇಮ್' ಅನ್ನು ಬಿಡುಗಡೆ ಮಾಡಿತು. ಇದರಿಂದ ನಿಂಟೆಂಡೋವು ವಿಡಿಯೋ ಗೇಮಿಂಗ್ ಕ್ಷೇತ್ರದಲ್ಲಿ ಪದಾರ್ಪಣೆ ಮಾಡಿತು. ನಂತರ ಬಂದಿದ್ದು 'ಡಾಂಕೀ ಕಾಂಗ್' ಎಂಬ ಆರ್ಕೇಡ್ ಗೇಮ್. ಇದರಲ್ಲಿ 'ಮಾರಿಯೋ' ಎಂಬ ಪಾತ್ರವು ಮೊದಲ ಬಾರಿಗೆ ಪರಿಚಯವಾಯಿತು. ಈ ಗೇಮ್‌ನ ಯಶಸ್ಸು ನಿಂಟೆಂಡೋಗೆ ಜಾಗತಿಕ ಖ್ಯಾತಿ ತಂದಿತು. ನಂತರದ ದಿನಗಳಲ್ಲಿ 'ಸೂಪರ್ ಮಾರಿಯೋ ಬ್ರದರ್ಸ್' ಗೇಮ್ ಕೂಡ ಬಿಡುಗಡೆಗೊಂಡಿತು. ಇದು ನಿಂಟೆಂಡೋಗೆ ಅಪಾರ ಯಶಸ್ಸನ್ನು ತಂದುಕೊಟ್ಟಿತು. ನಿಂಟೆಂಡೋ ನಂತರ ಹಲವು ಯಶಸ್ವಿ ಗೇಮ್ ಕಾನ್ಸೋಲ್‌ಗಳನ್ನು ಬಿಡುಗಡೆ ಮಾಡಿತು. ಈ ಪೈಕಿ ಸೂಪರ್ ನಿಂಟೆಂಡೋ ಎಂಟರ್ಟೈನ್ಮೆಂಟ್ ಸಿಸ್ಟಮ್ ಪ್ರಮುಖವಾದುದು. ತರುವಾಯ ಸಂಸ್ಥೆಯು ತ್ರಿಡಿ ಗೇಮಿಂಗ್‌ಗೆ ಹೊಸ ದಿಕ್ಕು ನೀಡಿತು. ಡ್ಯುಯಲ್ ಸ್ಕ್ರೀನ್ ಮತ್ತು ಟಚ್ ಸ್ಕ್ರೀನ್ ಅನ್ನು ಪರಿಚಯಿಸಿತು. ಮೋಶನ್ ಕಂಟ್ರೋಲ್‌ನೊಂದಿಗೆ ಹೊಸ ಅನುಭವ ನೀಡಿತು. ನಿಂಟೆಂಡೋ ಹಲವಾರು ಜನಪ್ರಿಯ ಗೇಮ್ ಶ್ರೇಣಿಗಳನ್ನು ಮತ್ತು ಪಾತ್ರಗಳನ್ನು ಪರಿಚಯಿಸಿದೆ. ಅವುಗಳಲ್ಲಿ ಪ್ಲಂಬರ್ ಪಾತ್ರ, 'ಸೂಪರ್ ಮಾರಿಯೋ' ಶ್ರೇಣಿಯ ನಾಯಕ ಮಾರಿಯೋ, ಗೊರಿಲ್ಲಾ ಪಾತ್ರದ ಡಾಂಕೀ ಕಾಂಗ್, ದಿ ಲೆಜೆಂಡ್ ಆಫ್ ಝೆಲ್ಡಾ, ಪೋಕೆಮಾನ್, ಪಿಕಾಚು, ಮೆಟ್ರಾಯ್ಡ್, ಕಿರ್ಬಿ ಮುಂತಾದವು ಪ್ರಮುಖವಾಗಿವೆ. ಈ ಪಾತ್ರಗಳು ಮತ್ತು ಗೇಮ್‌ಗಳು ನಿಂಟೆಂಡೋಗೆ ಜಾಗತಿಕ ಮಟ್ಟದಲ್ಲಿ ಅಪಾರ ಯಶಸ್ಸು ತಂದಿವೆ. ಕಳೆದ 50 ವರ್ಷಗಳಲ್ಲಿ ಈ ಸಂಸ್ಥೆಯು ಅಭಿವೃದ್ಧಿಪಡಿಸಿದ ಪ್ರತಿ ಉತ್ಪನ್ನವೂ ಆ ಪೀಳಿಗೆಯನ್ನು ಪ್ರಭಾವಗೊಳಿಸದೇ ಹೋಗಿಲ್ಲ. ಅದರಲ್ಲೂ ಮಕ್ಕಳು ಮತ್ತು ಯುವಜನರಲ್ಲಿ ಈ ಉತ್ಪನ್ನಗಳು ಗಾಢ ಪ್ರಭಾವವನ್ನು ಬೀರಿದ್ದು ದಾಖಲೆಯೇ. ಈ ದಿನಗಳಲ್ಲಿ ನಿಂಟೆಂಡೋ ತನ್ನ ಮನರಂಜನಾ ವ್ಯವಹಾರಗಳನ್ನು ವಿಸ್ತರಿಸಲು ಯೋಜಿಸುತ್ತಿದೆ. ವಿಶೇಷವಾಗಿ 'ಸೂಪರ್ ಮಾರಿಯೋ' ಮತ್ತು 'ದಿ ಲೆಜೆಂಡ್ ಆಫ್ ಝೆಲ್ಡಾ' ಶ್ರೇಣಿಗಳ ಆಧಾರದ ಮೇಲೆ ಹೊಸ ಚಲನಚಿತ್ರಗಳನ್ನು ನಿರ್ಮಿಸುವ ಹವಣಿಕೆಯಲ್ಲಿದೆ.

ಪಾಕ್‌ನ ಆದಾಯ ಮೂಲ: ಉಗ್ರರ ಪೋಷಣೆ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಪಾಕಿಸ್ತಾನದಲ್ಲಿ ಮಿಲಿಟರಿ, ಐಎಸ್‌ಐ ಮತ್ತು ಮೂಲಭೂತವಾದಿಗಳ 'ಅಪವಿತ್ರ ಮೈತ್ರಿ'ಯು ಉಗ್ರ ಗುಂಪುಗಳ ಸೃಷ್ಟಿಗೆ ಮೂಲ ಕಾರಣವಾಗಿದೆ. ಅಲ್ಲಿ ಹಲವು ರೀತಿಯ ಉಗ್ರಗಾಮಿ ಗುಂಪುಗಳು ಕಾರ್ಯನಿರ್ವಹಿಸುತ್ತಿವೆ. 'ಹಿಜ್ಬುಲ್ ಮುಜಾಹಿದೀನ್' ಎಂಬ ದೊಡ್ಡ ಭಯೋತ್ಪಾದಕ ಸಂಘಟನೆಯು ಮುಹಮ್ಮದ್ ಅಹ್ಸಾನ್ ದಾರ್ ಎಂಬ ಮಾಜಿ ಶಾಲಾ ಶಿಕ್ಷಕನಿಂದ 1989ರಲ್ಲಿ ಸ್ಥಾಪಿತವಾಯಿತು. ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸುವಿಕೆ ಮತ್ತು ಇಸ್ಲಾಮೀಕರಣದ ಅಭಿಯಾನ ಇವು ಈ ಸಂಘಟನೆಯ ಪ್ರಮುಖ ಉದ್ದೇಶವಾಗಿವೆ. ಒಂದು ಕಾಲದಲ್ಲಿ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶೇ.60ರಷ್ಟು ಉಗ್ರರನ್ನು ಹಿಜ್ಬುಲ್ ಮುಜಾಹಿದೀನ್ ನಿಯಂತ್ರಿಸುತ್ತಿತ್ತು ಮತ್ತು 1997ರಿಂದ ಈಚೆಗೆ 'ಲಷ್ಕರ್-ಎ-ತೈಬಾ'ದೊಂದಿಗೆ ಜತೆಗೂಡಿ ಈ ಸಂಘಟನೆ ಉಗ್ರಕೃತ್ಯಗಳನ್ನು ನಡೆಸುತ್ತಿದೆ.

ಲಷ್ಕರ್-ಎ-ತೈಬಾ ಸಂಘಟನೆಯು ಅಫ್ಘಾನಿಸ್ತಾನದ ಕುನಾರ್ ಪ್ರಾಂತ್ಯದಲ್ಲಿ 1980ರಲ್ಲಿ ಸ್ಥಾಪನೆಯಾಯಿತು. ಇದರ ಸದಸ್ಯರು ಭಾರತದಲ್ಲಿ ಹಲವು ಭಯೋತ್ಪಾದಕ ದಾಳಿಗಳನ್ನು ನಡೆಸಿದ್ದಾರೆ. 2008ರ ನವೆಂಬರ್ 26ರಂದು ಮುಂಬೈ ನಗರದಲ್ಲಿ ಸಾರ್ವಜನಿಕರನ್ನು ಗುರಿಯಾಗಿಸಿ ತಾಜ್ ಹೋಟೆಲ್, ಲಿಯೋಪೋಲ್ಡ್ ಕೆಫೆ, ಟ್ರೈಡೆಂಟ್ ಹೋಟೆಲ್, ಛತ್ರಪತಿ ಶಿವಾಜಿ ಮಹಾರಾಜ್ ರೈಲು ನಿಲ್ದಾಣದಲ್ಲಿ ದಾಳಿಯನ್ನು ನಡೆಸಿ 168 ಜನರ ಸಾವಿಗೆ ಕಾರಣವಾಗಿದ್ದ ಭಯೋತ್ಪಾದಕ ಸಂಘಟನೆಯಿದು. ಅಂದು ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದ ಉಗ್ರ ಅಜ್ಮಲ್ ಕಸಬ್, ಪಾಕಿಸ್ತಾನ ತನ್ನ ಮೂಲನೆಲೆಯೆಂದು ಬಾಯಿಬಿಟ್ಟಿದ್ದ. ಮುಂಬೈ ಮೇಲಿನ ದಾಳಿಗೆ ಪಾಕಿಸ್ತಾನದ 'ಇಂಟರ್ ಸರ್ವೀಸಸ್ ಇಂಟೆಲಿಜೆನ್ಸ್' (ಐಎಸ್‌ಐ) ಗುಪ್ತಚರ ಸಂಸ್ಥೆಯು ಲಷ್ಕರ್-ಎ-ತೈಬಾಕ್ಕೆ ಗುಪ್ತಚರ ನೆರವು ಮತ್ತು ರಕ್ಷಣೆಯನ್ನು ಒದಗಿಸಿತ್ತು.

ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್‌ರ ನೀತಿಗಳನ್ನು ವಿರೋಧಿಸಲು ಪಾಕಿಸ್ತಾನದಲ್ಲಿ, ವಿಶೇಷವಾಗಿ ಕರಾಚಿಯಲ್ಲಿ ದಾಳಿಗಳನ್ನು ನಡೆಸಲು ಮೌಲಾನಾ ಮಸೂದ್ ಅಜರ್ 2000ನೇ ಇಸವಿಯ ಜನವರಿಯಲ್ಲಿ 'ಜೈಶ್-ಎ-ಮೊಹಮ್ಮದ್' (ಜೆಇಎಂ) ಎಂಬ ಉಗ್ರಸಂಘಟನೆಯನ್ನು ಸ್ಥಾಪಿಸಿದ. ಈ ಹಿಂದೆ 'ಹರ್ಕ ಅತ್-ಉಲ್-ಮುಜಾಹಿದೀನ್' ಸಂಘಟನೆಯ ಪ್ರಭಾವಿ ನಾಯಕನಾಗಿದ್ದ ಈತ, ಜಿಹಾದ್ ಅನ್ನು ವಿಭಿನ್ನ ರೀತಿಯಲ್ಲಿ ಪ್ರತಿಪಾದಿಸುವ ಪ್ರಯತ್ನ ಮಾಡಿದ್ದ. ಜೆಇಎಂ ಉಗ್ರ ಸಂಘಟನೆಯು ಪಾಶ್ಚಿಮಾತ್ಯರ ಮತ್ತು ಯಹೂದಿಗಳ ವಿರೋಧಿ ಹಾಗೂ ಇದು ಇಸ್ಲಾಮಿಕ್ ಭಯೋತ್ಪಾದನೆಯನ್ನು ಪ್ರತಿಪಾದಿ ಸುತ್ತದೆ. ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸುವುದು ಈ ಸಂಘಟನೆಯ ಪ್ರಾಥಮಿಕ ಉದ್ದೇಶವಾಗಿದೆ. 2001ರ ಅಕ್ಟೋಬರ್ 1ರಂದು ಕಾಶ್ಮೀರ ಶಾಸನಸಭೆಯ ಮೇಲೆ ದಾಳಿ ನಡೆಸಿ 31 ಜನರನ್ನು ಕೊಂದ ಅಪರಾಧಿಗಳು ಈ ಜೆಇಎಂನ ಸದಸ್ಯರು. 2001ರ ಡಿಸೆಂಬರ್ 13ರಂದು ಭಾರತದ ಸಂಸತ್ತಿನ ಮೇಲೆ ನಡೆದ ದಾಳಿಯ ಸಂಚುಕೋರ ಈ ಜೆಇಎಂ ಸಂಘಟನೆ. ಪಾಕಿಸ್ತಾನದ ಆತ್ಮಾಹುತಿ ಬಾಂಬರ್‌ಗಳ ಪೈಕಿ ಒಬ್ಬನ ಮೊಬೈಲ್ ಫೋನ್ ನಂಬರ್‌ಗಳನ್ನು ಅಧಿಕಾರಿಗಳು ಪತ್ತೆ ಹಚ್ಚಿದ ನಂತರ ತಿಳಿದ ವಿಷಯವೇನೆಂದರೆ, 2003ರ ಕೊನೆಯಲ್ಲಿ ಪಾಕಿಸ್ತಾನದ ಅಧ್ಯಕ್ಷ ಮುಷರಫ್ ಹತ್ಯೆಯ ಪ್ರಯತ್ನಗಳಲ್ಲಿ ಭಾಗಿಯಾಗಿದ್ದ ಗುಂಪುಗಳಲ್ಲಿ ಜೆಇಎಂ ಕೂಡ ಸೇರಿತ್ತು. ಅನೇಕ ಚರ್ಚುಗಳ ಮೇಲೆ ನಡೆದ ಭಯೋತ್ಪಾದಕ ದಾಳಿಗಳಲ್ಲೂ ಈ ಭಯೋತ್ಪಾದಕ ಸಂಘಟನೆಯ ಹೆಸರು ಕೇಳಿಬಂದಿತ್ತು.

1980ರ ಜನವರಿಯಲ್ಲಿ, ಇಸ್ಲಾಮಿಕ್ ಕಾನ್ಫರೆನ್ಸ್‌ನ 34 ರಾಷ್ಟ್ರಗಳ ವಿದೇಶಾಂಗ ಸಚಿವರುಗಳು ಅಫ್ಘಾನಿಸ್ತಾನದಿಂದ ಸೋವಿಯತ್ ಪಡೆಗಳನ್ನು ಬೇಷರತ್ತಾಗಿ, ತುರ್ತಾಗಿ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿದ್ದರು. ಆದರೆ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು 104 ಮತಗಳ ಮೂಲಕ ಸೋವಿಯತ್‌ನ ಹಸ್ತಕ್ಷೇಪವನ್ನು ಪ್ರತಿಭಟಿಸುವ ನಿರ್ಣಯವನ್ನು ಅಂಗೀಕರಿಸಿತು. ನಂತರ ಅಫ್ಘಾನಿಸ್ತಾನದಲ್ಲಿ ನೆಲೆಸಿದ್ದ ಹಲವು ದಂಗೆಕೋರರು ನೆರೆಯ ಪಾಕಿಸ್ತಾನ ಮತ್ತು ಚೀನಾದಲ್ಲಿ ಬೃಹತ್ ಪ್ರಮಾಣದ ಮಿಲಿಟರಿ ತರಬೇತಿಯನ್ನು ಪಡೆಯಲಾರಂಭಿಸಿದರು. 1988ರಲ್ಲಿ ಅಫ್ಘಾನಿಸ್ತಾನ, ಸೋವಿಯತ್ ಒಕ್ಕೂಟ, ಅಮೆರಿಕ ಮತ್ತು ಪಾಕಿಸ್ತಾನ ದೇಶಗಳು ಶಾಂತಿ ಒಪ್ಪಂದಗಳಿಗೆ ಸಹಿ ಹಾಕಿ, ಕೊನೆಯ ಸೋವಿಯತ್ ಸೈನಿಕ 1989ರ ಫೆಬ್ರವರಿಯಲ್ಲಿ ಅಫ್ಘಾನಿಸ್ತಾನವನ್ನು ಖಾಲಿಮಾಡಿದ್ದ.

ಒಂದು ಕಾಲದಲ್ಲಿ ಪಾಕಿಸ್ತಾನ ಸರಕಾರವು ಅಫ್ಘಾನಿಸ್ತಾನದಲ್ಲಿ ನೆಲೆಸಿದ್ದ ಭಯೋತ್ಪಾದಕರಿಗೆ ಅಂತಾರಾಷ್ಟ್ರೀಯ ಶಸ್ತ್ರಾಸ್ತ್ರಗಳನ್ನು ಪೂರೈಸುವ ಮಧ್ಯವರ್ತಿಯಾಗಿತ್ತು. ಭೌಗೋಳಿಕತೆಯ ಅನುಕೂಲ ಮತ್ತು ಪಾಕಿಸ್ತಾನದ ಆರ್ಥಿಕ ಅಗತ್ಯಗಳು, ಅಲ್ಲಿನ ರಾಜಕೀಯ ನಾಯಕರುಗಳು ಯುದ್ಧದ ಸಮಯದಲ್ಲಿ ಮಧ್ಯವರ್ತಿಗಳಾಗುವುದನ್ನು ಪ್ರೇರೇಪಿಸಿತ್ತು. ಅಫ್ಘನ್ ಮತ್ತು ಸೋವಿಯತ್ ಪಡೆಗಳ ಸಂಘಟಿತ ಕಮ್ಯುನಿಸ್ಟ್ ದಾಳಿಯನ್ನು ಎದುರಿಸುವ ಸಾಧ್ಯತೆಯು ಪಾಕಿಸ್ತಾನದ ಮಿಲಿಟರಿಗೆ ಕಳವಳದ ವಿಷಯವಾಗಿತ್ತು. ಇದರಿಂದಾಗಿ ಸೋವಿಯತ್ ಪಡೆಗಳನ್ನು ಅಫ್ಘಾನಿಸ್ತಾನದಿಂದ ತೆಗೆದುಹಾಕುವುದು ಅದಕ್ಕೆ ಅನಿವಾರ್ಯವಾಗಿತ್ತು. ಒಂದು ದೇಶವು ತನ್ನ ಆಂತರಿಕ ಆದಾಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಅಭಿವೃದ್ಧಿಯೆಡೆಗೆ ಗಮನಹರಿಸಬೇಕು. ಆದರೆ ಪಾಕಿಸ್ತಾನವು, ಅಫ್ಘನ್ ಮತ್ತು ರಷ್ಯಾ ನಡುವಿನ ಸಂಘರ್ಷದಲ್ಲಿ ಅಮೆರಿಕ ನೀಡುವ ಶಸ್ತ್ರಾಸ್ತ್ರ ಮತ್ತು ಹಣವನ್ನು ತನ್ನ ಆದಾಯದ ಮೂಲವನ್ನಾಗಿಸಿಕೊಂಡಿತ್ತು.

ಅಫ್ಘನ್ ಮತ್ತು ರಷ್ಯಾ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಬರುತ್ತಿದ್ದಂಥ ಶಸ್ತ್ರಾಸ್ತ್ರಗಳ ಪೂರೈಕೆಯನ್ನು 'ಐಎಸ್‌ಐ' ನಿಯಂತ್ರಿಸುತ್ತಿತ್ತು. ಶಸ್ತ್ರಾಸ್ತ್ರಗಳು ಹಡಗು ಮತ್ತು ವಿಮಾನಗಳ ಮೂಲಕ ಪಾಕಿಸ್ತಾನವನ್ನು ತಲುಪುತ್ತಿದ್ದವು. ನಂತರ ಗಡಿಪ್ರದೇಶಗಳಿಗೆ ಪಾಕಿಸ್ತಾನದ ಮೇಲ್ವಿಚಾರಣೆಯಲ್ಲಿ ಟ್ರಕ್ ಮೂಲಕ ಕಳುಹಿಸಿಕೊಡಲಾಗುತ್ತಿತ್ತು. ಪೇಶಾವರ ಮೂಲದ ಪ್ರತ್ಯೇಕ ಗುಂಪುಗಳ ನಿಯಂತ್ರಣದಲ್ಲಿರುವ ಸಣ್ಣ ಸಣ್ಣ ವಿತರಣಾ ಕೇಂದ್ರಗಳಲ್ಲಿ ಮುಜಾಹಿದೀನ್‌ಗಳು ಪಾಕಿಸ್ತಾನದೊಳಗೆ ಶಸ್ತ್ರಾಸ್ತ್ರಗಳನ್ನು ತಲುಪಿಸುತ್ತಿದ್ದರು. ಒಂದು ಕಾಲದಲ್ಲಿ ಪಾಕಿಸ್ತಾನ ಸೇನೆಗೆ ಅಮೆರಿಕದಿಂದ ಒಂದು ದಶಕದ ಕೊಡುಗೆಯಾಗಿ ಸುಮಾರು 2 ಬಿಲಿಯನ್ ಡಾಲರ್‌ನಷ್ಟು ಹಣ ಸಂದಾಯವಾಗಿತ್ತೆಂದು ಹೇಳಲಾಗುತ್ತದೆ. ಇದರ ಜತೆಗೆ 1980ರ ಆರಂಭದಲ್ಲಿ ಸೌದಿ ಅರೇಬಿಯಾದಿಂದ ಸುಮಾರು 300 ಮಿಲಿಯನ್ ಅಮೆರಿಕನ್ ಡಾಲರ್ ಹಣವನ್ನು ಪಾಕಿಸ್ತಾನ ಪಡೆದಿತ್ತು.

ಸೋವಿಯತ್ ಪ್ರಾಯೋಜಿತ ಕಮ್ಯುನಿಸಂ ವಿರುದ್ಧ ಇಸ್ಲಾಮಿನ ರಕ್ಷಕನಾಗಿ ಬಿಂಬಿಸಿಕೊಳ್ಳಲು ಪಾಕಿಸ್ತಾನದ ಅಂದಿನ ಅಧ್ಯಕ್ಷ ಜಿಯಾ-ಉಲ್-ಹಕ್, ಇಸ್ಲಾಮಿಕ್ ಧಾರ್ಮಿಕ ತತ್ವಗಳು ಮತ್ತು ಸಂಪ್ರದಾಯಗಳಿಂದ ಮಾರ್ಗದರ್ಶಿಸಲ್ಪಟ್ಟ ರಾಜಕೀಯ ವ್ಯವಸ್ಥೆಯನ್ನು ಉತ್ತೇಜಿಸಿ ಹಾಗೂ ಇಸ್ಲಾಮಿಕ್ ಕಾನೂನಿಗೆ ಅನುಗುಣವಾಗಿ ಕ್ರಿಮಿನಲ್ ಶಿಕ್ಷೆಗೆ ಕರೆ ನೀಡಿದ್ದ. ಪಾಕಿಸ್ತಾನದಲ್ಲಿ ಇಸ್ಲಾಮಿಕ್ ರಿಲಿಜನ್ ಅನುಸರಿಸುವ ಬ್ಯಾಂಕಿಂಗ್ ವ್ಯವಸ್ಥೆಗಳು ಮತ್ತು ಆರ್ಥಿಕ ಚಟುವಟಿಕೆಗಳ ಅನುಷ್ಠಾನಕ್ಕೆ ಆತ ಒತ್ತಾಯಿಸಿದ್ದ. ಪಾಕಿಸ್ತಾನ ಬೆಂಬಲಿತ ಅಫ್ಘನ್ ಮುಜಾಹಿದೀನ್‌ನೊಂದಿಗಿನ ಒಂದು ದಶಕದ ಸುದೀರ್ಘ ಯುದ್ಧದ ನಂತರ ಕೊನೆಯ ಸೋವಿಯತ್ ಸೈನಿಕನನ್ನು ಅಫ್ಘಾನಿಸ್ತಾನದಿಂದ ಹಿಂತೆಗೆದುಕೊಳ್ಳುವುದರೊಂದಿಗೆ, ಶಸ್ತ್ರಾಸ್ತ್ರ ತರಬೇತಿ ಶಿಬಿರಗಳನ್ನು 'ಐಎಸ್‌ಐ' ಮೂಲಭೂತವಾದಿಗಳ ಬೋಧನಾ ಕೇಂದ್ರಗಳನ್ನಾಗಿ ಪರಿವರ್ತಿಸಿತು. ನಂತರ ಅವರನ್ನು ಕಾಶ್ಮೀರ ಕಣಿವೆಗೆ ಕಳುಹಿಸುವ ಕೆಲಸವನ್ನು ಪಾಕಿಸ್ತಾನ ಮಾಡಿತು. ಅಮೆರಿಕದ ಅವಳಿ ಕಟ್ಟಡಗಳ ಮೇಲೆ 2001ರ ಸೆಪ್ಟೆಂಬರ್ 11ರಂದು ನಡೆದ ಭಯೋತ್ಪಾದಕ ದಾಳಿಯ ನಂತರ, ವಿಶ್ವಾದ್ಯಂತ 'ಭಯೋತ್ಪಾದನೆಯ ವಿರುದ್ಧ ಯುದ್ಧ' ಎಂದು ಘೋಷಿಸುವ ಅಂತಾರಾಷ್ಟ್ರೀಯ ಮಿಲಿಟರಿ ಕಾರ್ಯಾಚರಣೆಯನ್ನು ಜಾರ್ಜ್ ಬುಷ್ ಪ್ರಾರಂಭಿಸಿದರು. ಮುಕ್ತ ಹಾಗೂ ರಹಸ್ಯ ಮಿಲಿಟರಿ ಕಾರ್ಯಾಚರಣೆ, ಹೊಸ ಭದ್ರತಾ ಕಾನೂನಿನ ಜಾರಿಯನ್ನು ಮತ್ತು ಭಯೋತ್ಪಾದನೆಗೆ ಹಣಕಾಸು ಒದಗಿಸುವುದನ್ನು ತಡೆಯುವ ಪ್ರಯತ್ನಗಳನ್ನು ಈ ಸಮರವು ಒಳಗೊಂಡಿತ್ತು.

ತಾಲಿಬಾನ್ ಆಡಳಿತದ ಭೌಗೋಳಿಕತೆ ಮತ್ತು ರಾಜತಾಂತ್ರಿಕ ಸಂಬಂಧಗಳಿಗಾಗಿ, ಭಯೋತ್ಪಾದನೆ ವಿರುದ್ಧದ ತನ್ನ ಯುದ್ಧದಲ್ಲಿ ಪಾಕಿಸ್ತಾನವನ್ನು ಮುಂದಾಳತ್ವದ ದೇಶವೆಂದು ಅಮೆರಿಕ ಘೋಷಿಸಿತು. ಪಾಕಿಸ್ತಾನ ಮತ್ತು ತಾಲಿಬಾನ್ ಮೈತ್ರಿಯನ್ನು ಮುರಿದು, ಅಫ್ಘಾನಿಸ್ತಾನವನ್ನು ಪ್ರತ್ಯೇಕಿಸುವ ಗುರಿಯನ್ನು ಅಮೆರಿಕ ಹೊಂದಿತ್ತು, ಈ ಯುದ್ಧದಿಂದ ಪಾಕಿಸ್ತಾನಕ್ಕೆ ಗಣನೀಯವಾದ ಆರ್ಥಿಕ ಲಾಭ ಮತ್ತು ಮಿಲಿಟರಿ ಬೆಂಬಲ ಸಿಗುತ್ತದೆಯೆಂದು ತಿಳಿದಿತ್ತು. ಅಮೆರಿಕಕ್ಕೆ ಬೆಂಬಲಿಸಿದ ಪಾಕಿಸ್ತಾನ ತನ್ನ ಭೂಪ್ರದೇಶದಲ್ಲಿ 'ಅಲ್ ಖೈದಾ' ಕಾರ್ಯಾಚರಣೆಗಳನ್ನು ನಿಲ್ಲಿಸಲು ಹಾಗೂ ತಾಲಿಬಾನಿಗೆ ಶಸ್ತ್ರಾಸ್ತ್ರ ಸಾಗಣೆ ಮತ್ತು ಲಾಜಿಸ್ಟಿಕ್ ಬೆಂಬಲವನ್ನು ಕಡಿತಗೊಳಿಸುವಂತೆ 'ಐಎಸ್‌ಐ'ಗೆ ಸೂಚಿಸುವ ನಾಟಕವನ್ನಾಡಿತ್ತು.

ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳ ವಿರುದ್ಧ ನಡೆಯುತ್ತಿರುವ ಭಯೋತ್ಪಾದಕತೆಯನ್ನು ನಿರ್ಮೂಲನೆ ಮಾಡಲು, ಅಮೆರಿಕದ ವಿಮಾನಗಳಿಗೆ ಪಾಕಿಸ್ತಾನದಲ್ಲಿನ ಬಂದರುಗಳು, ಮಿಲಿಟರಿ, ಗುಪ್ತಚರ ಕಾರ್ಯಾಚರಣೆಗಳಿಗೆ ಪ್ರಾದೇಶಿಕ ಪ್ರವೇಶವನ್ನು ನೀಡುವಂತೆ ಅಮೆರಿಕ ಕೇಳಿತ್ತು. ಅಮೆರಿಕದ ವಿಮಾನಗಳಿಗೆ ಓವರ್-ಫ್ಲೈಟ್ ಮತ್ತು ಲ್ಯಾಂಡಿಂಗ್ ಹಕ್ಕುಗಳನ್ನು ಒದಗಿಸುವಂತೆ ಕೇಳಿತ್ತು. ಅಮೆರಿಕದಿಂದ ಬರುವ ಆರ್ಥಿಕ ಲಾಭಕ್ಕಾಗಿ, ಪಾಕಿಸ್ತಾನದ ಅಧ್ಯಕ್ಷ ಪರ್ವೇಜ್ ಮುಷರಫ್ ಅವರ ಬೇಡಿಕೆಗಳನ್ನು ಒಪ್ಪಿ, ಅವರೊಂದಿಗೆ ವಿಚಿತ್ರವಾದ ಸಂಬಂಧವನ್ನು ಅನ್ವೇಷಿಸಲು ನಿರ್ಧರಿಸಿದ್ದ. ಅಮೆರಿಕವು 2002-2003ರಲ್ಲಿ ಸುಮಾರು 1.2 ಶತಕೋಟಿ ಡಾಲರ್ ಹಣವನ್ನು ಪಾಕಿಸ್ತಾನಕ್ಕೆ ನೀಡಿತ್ತು. ಇದರಲ್ಲಿ 'ಯುನೈಟೆಡ್ ಸ್ಟೇಟ್ಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್' (ಯುಎಸ್‌ಎಐಡಿ) ನಿರ್ವಹಿಸುವ ಅಭಿವೃದ್ಧಿ ನೆರವು ಮತ್ತು 600 ಮಿಲಿಯನ್ ಡಾಲರ್‌ಗಿಂತಲೂ ಅಧಿಕ ನಗದು ವರ್ಗಾವಣೆಯನ್ನು ಸಾಲ ತೀರಿಸಲು ಪಾಕಿಸ್ತಾನ ಸರಕಾರಕ್ಕೆ ನೇರವಾಗಿ ನೀಡಲಾಗಿತ್ತು. ಪ್ಯಾರಿಸ್ ಕ್ಲಬ್ ಸದಸ್ಯರೊಂದಿಗೆ ಪಾಕಿಸ್ತಾನದ 12.5 ಶತಕೋಟಿ ಡಾಲರ್ ದ್ವಿಪಕ್ಷೀಯ ಸಾಲವನ್ನು ಮರುಹೊಂದಿಸುವುದನ್ನು ಬೆಂಬಲಿಸಲು ಅಮೆರಿಕ ಒಪ್ಪಿಕೊಂಡಿತು. ಅದರಲ್ಲಿ 2.9 ಶತಕೋಟಿಯನ್ನು ಅಮೆರಿಕಕ್ಕೆ ಮತ್ತು 5.3 ಶತಕೋಟಿಯನ್ನು ಜಪಾನ್‌ಗೆ ನೀಡಬೇಕಿತ್ತು.

ಪಾಕಿಸ್ತಾನದಲ್ಲಿ ಮುಷರಫ್ ವಿರುದ್ಧ ಟೀಕೆಗಳು ಕೇಳಿಬಂದವು, ಅಫ್ಘನ್ನರ ಪರವಾಗಿ ಉಗ್ರಗಾಮಿಗಳಿಂದ ಪ್ರತಿಭಟನೆಗಳು ನಡೆದವು ಮತ್ತು ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್‌ಐ' ಅತನ ನಿರ್ಧಾರದ ಬಗ್ಗೆ ಭಿನ್ನಾಭಿಪ್ರಾಯ ಹೊಂದಿತ್ತು. ತನ್ನ ಪರವಾಗಿ 'ಐಎಸ್‌ಐ' ಬೆಂಬಲ ಗಳಿಸಲು ಅಧ್ಯಕ್ಷ ಮುಷರಫ್, ಪಾಕಿಸ್ತಾನದ ಗುಪ್ತಚರ ಮುಖ್ಯಸ್ಥನಾಗಿದ್ದ ಜನರಲ್ ಮಹಮೂದ್ ಮತ್ತು ಅವನ ಲೆಫ್ಟಿನೆಂಟ್‌ಗಳನ್ನು ವಜಾ ಮಾಡಿ ಹೊಸ ನಾಟಕ ಪ್ರಾರಂಭಿಸಿದ್ದ. ಈತ ತೆಗೆದುಕೊಂಡ ನಿರ್ಧಾರದಿಂದ ಪಾಕಿಸ್ತಾನದ ಊಸರವಳ್ಳಿ ಬುದ್ಧಿ ಅಮೆರಿಕಕ್ಕೆ ತಿಳಿಯಿತು. ಒಂದೆಡೆ ಅಮೆರಿಕದಿಂದ ಆರ್ಥಿಕ ನೆರವು ಪಡೆದು, ಮತ್ತೊಂದೆಡೆ ದೇಶದೊಳಗೆ ಉಗ್ರರನ್ನು ಪೋಷಿಸುವ ಕೆಲಸವನ್ನು ಪಾಕಿಸ್ತಾನ ಮಾಡಿತ್ತು. ಆದರೂ ಅಮೆರಿಕವು ಒಸಾಮಾ ಬಿನ್ ಲಾಡೆನ್‌ನನ್ನು ಬೇಟೆಯಾಡುವ ಸಲುವಾಗಿ ಪಾಕಿಸ್ತಾನಕ್ಕೆ ಹಣಕಾಸಿನ ನೆರವು ನೀಡುವುದನ್ನು ನಿಲ್ಲಿಸಲಿಲ್ಲ.

ಪಾಕಿಸ್ತಾನವೆಂಬ ದಾರಿತಪ್ಪಿದ ದೇಶವು ತನ್ನ ಹುಟ್ಟಿನಿಂದಲೂ ದೇಶವನ್ನು ಕಟ್ಟುವ ಉತ್ತಮ ನೀತಿಗಳ ಬಗ್ಗೆ ಚಿಂತಿಸಲಿಲ್ಲ, ಅದು ಭಯೋತ್ಪಾದಕರ ತವರೂರಾಗಿ ಭಾರತದ ಮೇಲೆ ಎರಗಲು ಯತ್ನಿಸಿ ಸ್ವತಃ ದಿವಾಳಿಯಾಗಿದೆ. ವಿಶ್ವದ ಇತರ ದೇಶಗಳು ನೀಡುವ ಹಣಕಾಸಿನ ಸಹಾಯವನ್ನೇ ನಂಬಿಕೊಂಡಿದೆ. ಒಂದು ಕಾಲದಲ್ಲಿ ರಷ್ಯಾವನ್ನು ಅಫ್ಘಾನಿಸ್ತಾನದಿಂದ ಓಡಿಸಲು ಅದು ಅಮೆರಿಕದ ಬಳಿ ಭಿಕ್ಷೆ ಬೇಡಿತ್ತು. ನಂತರ ಭಯೋತ್ಪಾದಕತೆಯ ವಿರುದ್ಧದ ಹೋರಾಟದಲ್ಲಿ ಅಮೆರಿಕದ ಪರವಾಗಿ ನಿಂತಿದ್ದೇವೆಂದು ಸುಳ್ಳು ಹೇಳಿ ಧನಸಹಾಯ ಪಡೆದು, ನಂತರ ಅದರ ಬೆನ್ನಿಗೆ ಚೂರಿ ಹಾಕಿ, ತನ್ನ ನೆಲದಲ್ಲಿ ಉಗ್ರ ಒಸಾಮಾ ಬಿನ್ ಲಾಡೆನ್‌ಗೆ ಆಶ್ರಯ ನೀಡಿತ್ತು. ಇದನ್ನರಿತ ಅಮೆರಿಕ ತಾನು ನೀಡುತ್ತಿದ್ದಂಥ ಧನಸಹಾಯವನ್ನು ಸಂಪೂರ್ಣವಾಗಿ ನಿಲ್ಲಿಸಿತು. ಇದು ನಿಲ್ಲುತ್ತಿದ್ದಂತೆ ಪಾಕಿಸ್ತಾನವು ಚೀನಾದ ಬಾಗಿಲು ತಟ್ಟಿತು. ಚೀನಾದ ಭಿಕ್ಷೆ ಕೆಲ ವರ್ಷಗಳ ಕಾಲ ಮುಂದುವರಿಯಿತು. ಒಟ್ಟಿನಲ್ಲಿ, ಹುಟ್ಟಿನಿಂದಲೇ ದಾರಿತಪ್ಪಿದ ದೇಶವೆನಿಸಿರುವ ಪಾಕಿಸ್ತಾನವು ತನ್ನ ನೆಲದಲ್ಲಿ ಭಯೋತ್ಪಾದಕರನ್ನು ಪೋಷಿಸುವುದನ್ನೇ ಆದಾಯದ ಮೂಲವಾಗಿಸಿಕೊಂಡಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಯುದ್ಧ ಮತ್ತು ಶಾಂತಿ

'ಯುದ್ಧ' ಮತ್ತು 'ಶಾಂತಿ' ಇವು ಪರಸ್ಪರ ವಿರುದ್ಧಾರ್ಥಕ ಪದಗಳಷ್ಟೆ. ಆದರೆ ಇಂದು, 'ಯುದ್ಧದಿಂದಲೇ ಶಾಂತಿ' ಎಂಬ ಮಾನಸಿಕ ಘಟ್ಟಕ್ಕೆ ಜಗತ್ತು ಬಂದು ನಿಂತಿದೆ. ಭಾರತದ ಮಟ್ಟಿಗೆ ಹೇಳುವುದಾದರೆ, 1947ರಿಂದಲೂ ಪಾಕಿಸ್ತಾನವು ತೋರುತ್ತಿರುವ ದುರ್ವರ್ತನೆಯಿಂದಾಗಿ, ನಿರ್ಣಾಯಕ ಯುದ್ಧದ ಮುಖೇನವೇ ಪಾಕಿಸ್ತಾನವನ್ನು ಸುಮ್ಮನಾಗಿಸಬೇಕಾದ ಅನಿವಾರ್ಯ ಸ್ಥಿತಿಗೆ ಭಾರತವಿಂದು ಬಂದಂತಿದೆ.

ಪ್ರಸಕ್ತ ಭಾರತ-ಪಾಕಿಸ್ತಾನ ಕದನವೂ ಸೇರಿದಂತೆ ಯಾವುದೇ ಯುದ್ಧವಾಗಲೀ ಈ ದಿನಮಾನದಲ್ಲಿ ನಿರ್ಣಾಯಕವಾಗಬಹುದೇ, ಫಲಸ್ವರೂಪವಾಗಿ ಶಾಂತಿಯನ್ನು ಸ್ಥಾಪಿಸಬಹುದೇ ಎಂಬುದು ಚರ್ಚಾರ್ಹ ವಿಷಯ. ಎಳೆದುಕೊಂಡು ಹೋಗುತ್ತಿರುವ ರಷ್ಯಾ-ಉಕ್ರೇನ್ ಯುದ್ಧ,



ಇಸ್ರೇಲ್-ಹಮಾಸ್ ಕದನ, ಸಿರಿಯಾ, ಸೂಡಾನ್, ಮ್ಯಾನ್ಮಾರ್ ದೇಶಗಳ ಆಂತರಿಕ ಸಂಘರ್ಷ ಇವುಗಳು, 'ಯುದ್ಧದಿಂದ ಶಾಂತಿ'ಯ ಸಾಧ್ಯತೆಯ ಬಗ್ಗೆ ಅನುಮಾನ ಹುಟ್ಟಿಸುತ್ತಿವೆ. ಈಗ ನಡೆಯುತ್ತಿರುವ ಭಾರತ-ಪಾಕ್ ಸಂಘರ್ಷದಲ್ಲಿ ಭಾರತವೇನೋ ನ್ಯಾಯಪರವಾಗಿ ಮಾತ್ರ ವಲ್ಲ, ಕೇವಲ ಪ್ರತಿಕ್ರಿಯಾತ್ಮಕವಾಗಿ ಹೆಜ್ಜೆ ಇಡುತ್ತಿದೆ, ಸರಿಯೇ. ಆದರೆ, ಭಾರತವನ್ನು ದುರ್ಬಲಗೊಳಿಸುವ ದುರುದ್ದೇಶದಿಂದ ಪಾಕಿಸ್ತಾನದ ಹಿಂದಿರುವ ಚೀನಾ ಆಗಲೀ, ಭಾರತದ ಪರ ತಾನೆಂದು ಹೇಳುತ್ತ, ಶಾಂತಿಮಂತ್ರ ಜಪಿಸುತ್ತಲೇ, ಸ್ವಹಿತಾಸಕ್ತಿಯಿಂದಾಗಿ ಯುದ್ಧಗಳಿಗೆ ಪರೋಕ್ಷ ಪ್ರೋತ್ಸಾಹ ಕೊಡುತ್ತಿರುವ ಅಮೆರಿಕವಾಗಲೀ 'ಭಾರತ-ಪಾಕ್ ಸಂಘರ್ಷವನ್ನು ಶಾಶ್ವತ ಶಾಂತಿಯೆಡೆಗೆ ಸಾಗಲು ಬಿಟ್ಟಾವೇ? ಎಂಬುದು ಅನುಮಾನ. ಇಂಥ ಸಂದಿಗ್ಧ ಸನ್ನಿವೇಶದಲ್ಲಿ, ಚೀನಾ ಮತ್ತು ಅಮೆರಿಕಗಳ ಒಳ ಅಭಿಲಾಷೆಗಳಿಗೆ ತುತ್ತಾಗದೆ ಪಾಕಿಸ್ತಾನವನ್ನು ಬಗ್ಗುಬಡಿದು ಅಥವಾ ಶರಣಾಗುವಂತೆ ಮಾಡಿ ಕಾಶ್ಮೀರ ಸಮಸ್ಯೆಯನ್ನೂ ಉಗ್ರರ ಸಮಸ್ಯೆಯನ್ನೂ ನಿವಾರಿಸುವುದರ ಜತೆಗೆ, ಉಭಯ ದೇಶಗಳ ವಿಷಯದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸಬಲ್ಲ ಚಾತುರ್ಯ ಮತ್ತು ಪ್ರೌಢಿಮೆಯನ್ನು ಭಾರತವು ಈಗ ತೋರಬೇಕಾಗಿದೆ. ಈ ವಿಷಯದಲ್ಲಿ ನಮ್ಮ ಪ್ರಧಾನಿ ನರೇಂದ್ರ ಮೋದಿಯವರ ಮೇಲೆ, ನನ್ನನ್ನೂ ಒಳಗೊಂಡಂತೆ ದೇಶವು ಸಂಪೂರ್ಣ ವಿಶ್ವಾಸ ಇಟ್ಟುಕೊಂಡಿದೆ.

ನೋಡೋಣ. ನಾಗರಿಕರಾಗಿ ನಾವು ಈ ಸಮಯದಲ್ಲಿ, ವ್ಯವಸ್ಥೆಗೆ ಸಹಕಾರ ನೀಡುವುದು, ಸ್ಥೈರ್ಯ ಹೊಂದಿರುವುದು, ಪ್ರಚೋದನಕಾರಿ ಹೇಳಿಕೆಗಳನ್ನು ನೀಡದಿರುವುದು, ಸುಳ್ಳು ಸುದ್ದಿಗಳನ್ನು ಹಬ್ಬಿಸದಿರುವುದು ಮುಂತಾಗಿ ನಮ್ಮ ಹೊಣೆಗಳ ನಿರ್ವಹಣೆಯನ್ನು ತಪ್ಪದೆ ಮಾಡೋಣ.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಚೀನಾ ವಸ್ತುಗಳನ್ನು ಬಹಿಷ್ಕರಿಸಿ

ಶತ್ರುವಿನ ಮಿತ್ರನೂ ಶತ್ರುವೇ' ಎಂಬ ಮಾತಿನಂತೆ ಭಾರತದ ಪರಮವೈರಿ ಪಾಕಿಸ್ತಾನಕ್ಕೆ ಬೆಂಬಲ ಸೂಚಿಸಿರುವ ಚೀನಾ ನಮ್ಮ ಆಪ್ತ ರಾಷ್ಟ್ರವೇನಲ್ಲ. ತನ್ನ ಸರಕುಗಳಿಗೆ ವಿಶಾಲವಾದ ಮಾರುಕಟ್ಟೆಯನ್ನು ಒದಗಿಸಿರುವ ಭಾರತದಿಂದ ಹಣ ಸಂಪಾದಿಸಿ ನಮ್ಮ ಶತ್ರುರಾಷ್ಟ್ರಕ್ಕೆ ಬೆಂಬಲ ನೀಡುತ್ತಿರುವ ಚೀನಾಕ್ಕೆ ತಕ್ಕ ಪಾಠ ಕಲಿಸಲು ಇದು ಸುಸಮಯ. ಆದ್ದರಿಂದ, ಪ್ರಜ್ಞಾವಂತ ನಾಗರಿಕರೆಲ್ಲರೂ ಪಾಕಿಸ್ತಾನದ ಮಿತ್ರದೇಶವಾದ ಚೀನಾದ ಸಾಮಗ್ರಿಗಳಿಗೆ ಬಹಿಷ್ಕಾರ ಹಾಕಬೇಕು. ಚೀನಿ ವಸ್ತುವನ್ನು ಖರೀದಿ ಮಾಡುವುದಿಲ್ಲವೆಂದು ಪ್ರತಿಯೊಬ್ಬರೂ ಪಣತೊಟ್ಟು ಸ್ವದೇಶಿ ವಸ್ತುಗಳನ್ನು ಉಪಯೋಗಿಸಿ ನಮ್ಮ ದೇಶದ ಜನರ ಭದ್ರತೆಗೆ ಸಹಾಯಹಸ್ತ ನೀಡುವಂತಾಗಬೇಕು.

- ಉದಯ ಮ.ಯಂಡಿಗೇರಿ, ಧಾರವಾಡ

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಕೆನ್ನೆಗಲ್ಲದೇ ಬೇರೆಡೆ ಹೊಡೆದಾಗ ಏನು ಮಾಡ್ಬೇಕು ಮಿಸ್ಟರ್ ಗಾಂಧಿ?

ಪದಸಾಗರ

ನವೀನ್ ಸಾಗರ್
vveditoped@gmail.com

ಲಗೇ ರಹೋ ಮುನ್ನಾಭಾಯ್ ಸಿನಿಮಾದಲ್ಲಿ ಒಂದು ದೃಶ್ಯವಿತ್ತು.

ಗಾಂಧಿವಾದದ ಗುಂಗಲ್ಲಿ ಭ್ರಮಣೆಗೆ ಒಳಗಾದ ಮುನ್ನಾಭಾಯ್ ಮೇಲೆ ಖಳನಾಯಕ ಎಗರಿ ಬಂದು ಕೆನ್ನೆಗೆ ಬಾರಿಸ್ತಾನೆ. ಮುನ್ನಾಭಾಯ್‌ಗೆ ಗಾಂಧಿ ಹೇಳಿದ್ದು ನೆನಪಾಗುತ್ತೆ. ಯಾರಾದ್ರೂ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸು ಅಂತ..! ಬಹಳ ವಿನಮ್ರತೆಯಿಂದ ಇನ್ನೊಂದು ಕೆನ್ನೆ ಮುಂದಿಡುತ್ತಾನೆ. ಇನ್ನೊಂದು ಕೆನ್ನೆ ತೋರಿಸಿದಾಕ್ಷಣ ಹೊಡೆಯದೇ ಇರೋದಕ್ಕೆ ಅವನೇನು ಗಾಂಧಿಯ ಅನುಯಾಯಿಯಾ? ರಪ್ಪನೆ ಇನ್ನೊಂದು ಕೆನ್ನೆಗೆ ಇನ್ನೂ ಬಲವಾಗಿಯೇ ಕಪಾಳಮೋಕ್ಷ ಮಾಡ್ತಾನೆ. ಆಗ ಮುನ್ನಾಭಾಯಿಗೆ ಅಸಲಿ ಗೊಂದಲ ಶುರು ಆಗತ್ತೆ. ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸು ಅಂತ ಬಾಪು ಹೇಳಿದ್ರು. ಆದರೆ ಎರಡೂ ಕೆನ್ನೆಗೆ ಹೊಡೆದಾಗ ಏನು ಮಾಡಬೇಕು ಅಂತ ಹೇಳಲೇ ಇಲ್ವಲ್ಲ..!! ಆಗ ತನಗೆ ಮೆಟ್ಕೊಂಡಿದ್ದ ಗಾಂಧೀಭೂತಕ್ಕೆ ಕೆಲ ನಿಮಿಷ ಗುಡ್ ಬೈ ಹೇಳೋ ಮುನ್ನಾಭಾಯ್ ವಿಲನ್‌ಗಳ ಗ್ರಹಚಾರ ಬಿಡಿಸ್ತಾನೆ.

ಅತ್ತ ಭಾರತದ ಸೇನೆ ಉಗ್ರರ ನೆಲೆಗಳ ಮೇಲೆ ದಾಳಿ ಮಾಡಿ ಆಪರೇಷನ್ ಸಿಂದೂರ ಎಂಬ ಘೋಷ ಮೊಳಗಿಸ್ತಾ ಇದ್ರೆ... ಇತ್ತ ಕರ್ನಾಟಕ ಕಾಂಗ್ರೆಸ್ ಗಾಂಧಿಯ ಫೋಟೋ ಮೇಲೆ ಮನುಕುಲದ ಅತ್ಯಂತ ಶಕ್ತಿಯುತ ಶಸ್ತ್ರ ಎಂದರೆ ಶಾಂತಿ ಎಂದು ಬರೆದು ಪೋಸ್ಟ್ ಮಾಡಿತ್ತು. ಆಗ ನೆನಪಾಗಿದ್ದು ಮುನ್ನಾಭಾಯ್ ಚಿತ್ರದ ಆ ದೃಶ್ಯ.

ಬಲಗೆನ್ನೆಗೆ ಹೊಡೆದರೆ ಎಡಗೆನ್ನೆ ತೋರಿಸು ಅಂದ ಗಾಂಧಿ, ಎರಡೂ ಕೆನ್ನೆಗೆ ಹೊಡೆದಾಗ ಏನು ಮಾಡಬೇಕು ಅಂತ ಹೇಳೋದನ್ನ ಮರೆತಿದ್ರು. ಬಿಡಿ, ಹೊಡೆಯೋವ್ರು ಯಾವಾಗ್ಲೂ ಕೆನ್ನೆಗೇ ಹೊಡೀತಾರಾ? ಪಾಕಿಸ್ತಾನದಂಥ ಹೇಡಿ ರಾಷ್ಟ್ರಕ್ಕೆ ಎದುರು ನಿಂತು ಹೊಡೆಯೋ ತಾಕತ್ತು ಧೈರ್ಯ ಇದೆಯಾ? ಅವರು ಹೊಡೆಯೋಕೆ ಪ್ರಯತ್ನಿಸೋದು ಯಾವ ಜಾಗಕ್ಕೆ ಅಂತ ಬಿಡಿಸಿ ಹೇಳಬೇಕಾ? ಕೆನ್ನೆ ಬದಲು ಬೆನ್ನಿಗೋ ಪೃಷ್ಠಕ್ಕೋ ಹೊಡೆಯೋ ನೀಚ ರಣಹೇಡಿಗಳನ್ನು ಎದುರಿಸೋದು ಹೇಗೆ ಅಂತ ಗಾಂಧಿ ಹೇಳಿಕೊಡಬೇಕಿತ್ತಲ್ವಾ? ಅಲ್ಲಿ ಒಂದಕ್ಕೆ ಹೊಡೆದರೆ ಇನ್ನೊಂದು ತೋರಿಸೋ ಚಾನ್ಸೇ ಇಲ್ಲವಲ್ಲ..! ಆಗೇನು ಮಾಡಬೇಕಿತ್ತು? ಗಾಂಧಿ ಏನೂ ಹೇಳಿಲ್ಲ ಅಂತ ಅವರ ನಕಲೀ ಶಿಷ್ಯವೃಂದದ ಮಾತು ಕೇಳಬೇಕಿತ್ತಾ?

'ಮೈ ಎಕ್ಸ್‌ಪರಿಮೆಂಟ್ಸ್ ವಿಥ್ ಸ್ಲಾಪ್ಸ್' ಅಂತ ಗಾಂಧಿ ಈ ಕಪಾಳಮೋಕ್ಷ ಪ್ರಯೋಗವನ್ನು ಖುದ್ದು ಅನುಭವಿಸಿದ್ದಿದ್ದರೆ ಬಹುಶಃ ಈ ಬಿಟ್ಟಿ ಉಪದೇಶ ಕೊಡ್ತಾ ಇರಲಿಲ್ಲ. ಶಾಂತಿ ಪಾಲಿಸೋದಕ್ಕೆ ಒಂದು ದೇಶ, ಭಯೋತ್ಪಾದನೆಗೆ ಒಂದು ದೇಶ ಅಂತ ಈ ರೀತಿ ವಿಭಜನೆ ಕೂಡ ಮಾಡ್ತಾ ಇರಲಿಲ್ಲ. ಹಿಂದೂಗಳು ಯಾವತ್ತಿಗೂ ಎಂಥ ಸಂದರ್ಭದಲ್ಲೂ ತಮ್ಮ ಹೃದಯದಲ್ಲಿ ಮುಸಲ್ಮಾನರ ವಿರುದ್ಧ ಕೋಪ ಇಟ್ಟುಕೊಳ್ಳಬಾರದು. ಮುಸಲ್ಮಾನರು ನಿಮ್ಮನ್ನು ಸರ್ವನಾಶ ಮಾಡಲು ಬಂದರೂ ಸಂಯಮದಿಂದಲೇ ಇರಬೇಕು. ಮುಸಲ್ಮಾನರು ಹಿಂದೂಗಳನ್ನು ಕೊಲ್ಲಲು ಬಂದರೆ ಧೈರ್ಯದಿಂದ ಸಾವನ್ನು ಎದುರಿಸಬೇಕೇ ಹೊರತು ತಿರುಗಿ ಕೊಲ್ಲಲು ಹೋಗಬಾರದು. ಸಾವಿಗೆಂದೂ ಹೆದರಬಾರದು. ಮನುಷ್ಯನಾಗಿ ಹುಟ್ಟಿದ ಮೇಲೆ ಹುಟ್ಟು-ಸಾವು ಅನಿವಾರ್ಯ... ಹೀಗೆಲ್ಲಾ ಪ್ರವಚನ ನೀಡಿದ ಗಾಂಧಿಯೇ ಅಲ್ಲವಾ ಪರೋಕ್ಷವಾಗಿ ಪಾಕಿಸ್ತಾನದ ಭಯೋತ್ಪಾದನಾ ಮನಸ್ಥಿತಿಯ ಸೃಷ್ಟಿಕರ್ತರು? ಕೊಲ್ಲುವ ವರ್ಗ ಮತ್ತು ಸಾಯುವ ವರ್ಗ ಸೃಷ್ಟಿಸಿದ್ದೇ ಈ ಗಾಂಧೀವಾದ ಅಲ್ಲವಾ? ಸ್ವಾತಂತ್ರ್ಯಪೂರ್ವಕಾಲದಿಂದ ಬ್ರಿಟಿಷರಿಗೆ ಲವ್ ಲೆಟರ್ ಬರೆಯುತ್ತಾ, ಮುಸಲ್ಮಾನರನ್ನು ಓಲೈಸುತ್ತಾ ಬಂದ ಗಾಂಧೀಜಿ, ಗೋಡ್ಸೆಯ ಗುಂಡೇಟು ಬೀಳುವ ತನಕ ಎಂದಿಗೂ ಸಾವನ್ನು ಹತ್ತಿರದಿಂದ ನೋಡಲಿಲ್ಲ. ಬಲಿದಾನ ಮಾಡಿದವರ್‍ಯಾರೋ, ಸತ್ಯಾಗ್ರಹ ಉಪವಾಸ ಮಾಡಿ ಸ್ವಾತಂತ್ರ್ಯ ತಂದುಕೊಟ್ಟೆ ಎಂದು ಕ್ರೆಡಿಟ್ ತಗೊಂಡವರ್‍ಯಾರೋ..!

ಅಂದಿನಿಂದ ಇಂದಿನ ತನಕ ಕಾಂಗ್ರೆಸ್ ಮನಸ್ಥಿತಿ ಬದಲಾಗಲೇ ಇಲ್ಲ. ಹಿಂದೂಗಳೇ ಇಲ್ಲಿ ಶಾಂತಿಯಿಂದ ಇರಬೇಕು. ಕೊಂದರೂ ತಿರುಗಿಬೀಳಬಾರದು. ಮುಸಲ್ಮಾನರು ಉಗ್ರವಾದ ಮಾಡಿದರೂ ಸರಿ, ಅವರನ್ನು ಕೂರಿಸಿ ಪಾಠ ಹೇಳಿ ಮನಪರಿವರ್ತನೆ ಮಾಡಬೇಕು. ಇದು ಕಾಂಗ್ರೆಸ್ ಗಾಂಧೀವಾದ. ಪ್ರಾದೇಶಿಕತೆ ಬಂದಾಗ ಕನ್ನಡಕ್ಕೋಸ್ಕರ ರಕ್ತ ಹರಿಸೋಕೆ ಸಿದ್ಧರಾಗಿ ಹಿಂದಿ ಭಾಷಿಕರನ್ನು ಕೊಂದು ಮುಗಿಸುವಂತೆ ಮುಗಿಬೀಳುವ ಇವರಿಗೆ ದೇಶದ ಧರ್ಮದ ವಿಚಾರ ಬಂದಾಗ ವಿಶ್ವಮಾನವ ತತ್ವದ ಪಾಲಕರಾಗಿ ಬಿಡುತ್ತಾರೆ. ಅಹಿಂಸೆ, ಹೃದಯ ವೈಶಾಲ್ಯ, ಯುದ್ಧದಿಂದ ಆಗುವ ಅಡ್ಡಪರಿಣಾಮ, ನೆರೆಹೊರೆಯವರು ನಮ್ಮವರು ಎಂಬ ಸೌಹಾರ್ದಭಾವ ಉಕ್ಕಿ ಹರಿಯತೊಡಗುತ್ತದೆ.

ಕೇವಲ ಒಂದು ವಾರದ ಹಿಂದೆ ಕನ್ನಡಕ್ಕಾಗಿ ಕೈಯಲ್ಲಿ ಮಚ್ಚು ಹಿಡಿದವರು, ಇವತ್ತು ಯುದ್ಧದ ಹೊಸ್ತಿಲಲ್ಲಿ ದೇಶ ನಿಂತಿರುವಾಗ ಗುಲಾಬಿ ಹಿಡಿದು ಶಾಂತಿಮಂತ್ರ ಜಪಿಸ್ತಾ ಇದ್ದಾರೆ. ಇವರನ್ನು ಲಾಜಿಕ್‌ಲೆಸ್ ಜನಗಳು ಅನ್ನಬೇಕೋ, ಹಿಪೋಕ್ರೈಟ್ಸ್ ಅನ್ನಬೇಕೋ, ಕೇವಲ ತಮ್ಮ ಮೂಗಿನ ನೇರಕ್ಕಷ್ಟೇ ಬದುಕುವವರು ಅನ್ನಬೇಕೋ ಗೊತ್ತಿಲ್ಲ.

ಒಂದು ಮಾತು ಹೇಳ್ತೀನಿ. ಇಲ್ಲಿ ಯುದ್ಧ ಯಾರಿಗೂ ಬೇಕಿಲ್ಲ. ಖುದ್ದು ಮೋದಿಗೂ ಬೇಕಾಗಿಲ್ಲ. ಒಂದು ಕೋವಿಡ್‌ನಿಂದ ದೇಶಕ್ಕಾದ ಹಿನ್ನಡೆ ಕಣ್ಮುಂದೆ ಇದೆ. ಜಾಗತಿಕವಾಗಿ ಆರ್ಥಿಕ ಹಿಂಜರಿತ ಕಾಣುತ್ತಿರುವಾಗ, ಯುದ್ಧವಾದರೆ ಏನೆಲ್ಲ ಅಡ್ಡಪರಿಣಾಮವಾಗುತ್ತೆ ಅನ್ನೋದು ಮೋದಿಗೆ ಗೊತ್ತಿಲ್ಲದ ವಿಷಯವೇನಲ್ಲ. ಯುದ್ಧ ಮಾಡಿ ಜನರನ್ನು ಮರುಳು ಮಾಡಿ ಮತ್ತೆ ಪ್ರಧಾನಿಯಾಗೋಕೆ, ಮುಂದಿನ ತಿಂಗಳು ಲೋಕಸಭಾ ಚುನಾವಣೆಯೇನೂ ಇಲ್ಲ. ಹೀಗಿದ್ದೂ ಭಾರತ ಇಂದು ಕೆರಳಿ ನಿಂತಿರೋದ್ಯಾಕೆ? ಪಾಕಿಸ್ತಾನಕ್ಕೆ ಪಾಠ ಕಲಿಸಲು ನಿರ್ಧರಿಸಿರೋದ್ಯಾಕೆ? ಉಗ್ರವಾದದ ದಮನಕ್ಕೆ ಟೊಂಕ ಕಟ್ಟಿರೋದ್ಯಾಕೆ?

ಒಂದು ಕಾರ್ಗಿಲ್ ಯುದ್ಧದ ನಂತರ ಮತ್ತೊಮ್ಮೆ ಭಾರತ ನರಸಿಂಹಾವತಾರ ತಾಳೋದಕ್ಕೆ ಕಾರಣ ಏನು? ಇದು ಕೇವಲ ಪಾಕಿಸ್ತಾನಕ್ಕೆ ಅಥವಾ ಉಗ್ರರಿಗೆ ಪಾಠ ಕಲಿಸಲು ಹೊರಟಿದ್ದಲ್ಲ. ದೇಶದೊಳಗಿನ ಆಂತರಿಕ ಭಯೋತ್ಪಾದಕರಿಗೆ, ದೇಶವಿರೋಧಿಗಳಿಗೆ ಸಮರ್ಥ ಉತ್ತರ ಕೊಡಲು ಸೃಷ್ಟಿಸಿಕೊಂಡ ವೇದಿಕೆ.

ಪಹಲ್ಗಾಮ್ ಘಟನೆಗೂ ಮುನ್ನ ಭಾರತವನ್ನು ಪಾಕ್ ಎಷ್ಟು ಬಾರಿ ಕೆಣಕಿತು ಅಂತ ಒಮ್ಮೆ ಯೋಚಿಸಿ. ಪ್ರತಿ ಬಾರಿಯೂ ಭಾರತ ಕೇವಲ ಕ್ರಿಯೆಗೆ ತಕ್ಕಷ್ಟು ಪ್ರತಿಕ್ರಿಯೆ ಕೊಟ್ಟಿತು. ದೇಶದ ಒಳಗಿನ ವಿರೋಧಿಗಳು ಪ್ರತಿ ಬಾರಿ ಮೋದಿಯನ್ನು ಟಾರ್ಗೆಟ್ ಮಾಡಿದರೇ ಹೊರತು, ಮೋದಿಯನ್ನು ಅನುಮಾನಿಸಿದರೇ ಹೊರತು, ಉಗ್ರರನ್ನು ಮನಸಾರೆ ಖಂಡಿಸಲೇ ಇಲ್ಲ. ದೇಶದಲ್ಲಿ ಉಗ್ರಕೃತ್ಯಗಳು ನಡೆಯಬೇಕು, ಮೋದಿ ಆಳ್ವಿಕೆಯಲ್ಲಿ ದೇಶ ಸೊರಗಬೇಕು, ಅದು ರಾಜಕೀಯ ಅಸ್ತ್ರವಾಗಬೇಕು ಅಂತಲೇ ಬಯಸಿದರು. ಪುಲ್ವಾಮಾ ದಾಳಿಗೆ ಬಾಲಾಕೋಟ್ ಸ್ಟ್ರೈಕ್ ಮೂಲಕ ಉತ್ತರ ಕೊಟ್ಟರೆ ಸಾಕ್ಷ್ಯ ಕೇಳಿದ್ರು. ಪಹಲ್ಗಾಮ್ ದಾಳಿಯಾದಾಗ, ಮೋದಿಗೆ ಯುದ್ಧ ಮಾಡೋಕೆ ದಮ್ ಇಲ್ವಾ ಅಂತ ಕಿಚಾಯಿಸಿದವರು, ಈಗ ಯುದ್ಧ ಉತ್ತರ ಅಲ್ಲ ಅಂತ ಶಾಂತಿಕವನ ಬರೀತಿದಾರೆ.

ಪಹಲ್ಗಾಮ್‌ನಲ್ಲಿ ಸತ್ತ ಅಮಾಯಕರ ಜೀವದ ಬಗ್ಗೆ ಕಿಂಚಿತ್ತಾದರೂ ಇವರಿಗೆ ಬೇಸರ ಇದ್ದಿದ್ದರೆ ಉಗ್ರವಾದವನ್ನು ಮಟ್ಟ ಹಾಕಿ ಎಂದು ಮೋದಿಗೆ ಒಕ್ಕೊರಲ ಬೆಂಬಲ ನೀಡ್ತಾ ಇದ್ರು. ರಾಜಕೀಯೇತರವಾಗಿ ಬೆನ್ನಿಗೆ ನಿಲ್ತಾ ಇದ್ರು. ಇಷ್ಟಕ್ಕೂ ಕೇಂದ್ರ ಸರಕಾರ ಮತ್ತು ನಮ್ಮ ಸೇನೆ ಯುದ್ಧ ಶುರು ಮಾಡಿಯೇ ಇಲ್ಲವಲ್ಲ. ಉಗ್ರರ ನೆಲೆಯನ್ನು, ನಮ್ಮ ದೇಶದ ಹೆಣ್ಮಕ್ಕಳ ಸಿಂದೂರ ಅಳಿಸಿದವರನ್ನು ಧ್ವಂಸ ಮಾಡಲು ಆಪರೇಷನ್ ಸಿಂದೂರ ಲಾಂಚ್ ಮಾಡಿತಷ್ಟೇ. ಅದಕ್ಕೆ ಪಾಕ್ ಯಾಕೆ ವಿಲವಿಲ ಒದ್ದಾಡಬೇಕಿತ್ತು? ಪಾಕಿಸ್ತಾನ ಕೂಡ ಉಗ್ರವಾದದ ವಿರುದ್ಧ ಹೋರಾಡ್ತಾ ಇರೋ ದೇಶವಾಗಿದ್ರೆ, ನಮ್ಮನ್ನು ಬೆಂಬಲಿಸಬೇಕಿತ್ತು.. ಆದರೆ ಅದು ಪ್ರತಿದಾಳಿ ಮಾಡಿದ್ಯಾಕೆ? ಪೂಂಚ್‌ಗೆ ಬಂದು ಮತ್ತೆ ಅಮಾಯಕರ ಹತ್ಯೆ ಮಾಡಿದ್ಯಾಕೆ? ಇದ್ಯಾವುದೂ ನಮ್ಮ ದೇಶದಲ್ಲಿರೋ ಶಾಂತಿಪ್ರಿಯರಿಗೆ ಕಾಣಿಸೋದಿಲ್ವಾ? ದೇಶಾಭಿಮಾನವೇ ಇಲ್ವಾ ಇವ್ರಿಗೆ? ಇವರು ಬಯಸುತ್ತಾ ಇರೋ ಶಾಂತಿಯ ಸ್ಥಾಪನೆಗೆ ಕ್ರಾಂತಿ ಅನಿವಾರ್ಯ. ಯುದ್ಧ ಅನಿವಾರ್ಯ ಅನ್ನೋ ಸರಳ ಸತ್ಯ ಇವರಿಗೆ ಅರ್ಥ ಆಗೋದಿಲ್ವಾ? ದೇಶಕ್ಕೆ ದೇಶ ಒಂದುಗೂಡಬೇಕಾದ ಪರಿಸ್ಥಿತಿ ಇದ್ದಾಗ್ಲೂ ರಾಜಕೀಯದ ಭೂತಗನ್ನಡಿ ಇಟ್ಟು ನೋಡೋ ಮನಸ್ಥಿತಿಗೆ ಯಾವ ಮದ್ದು ಕೊಡೋದು?

ವಾಜಪೇಯಿಯವರ ಮಾತು ಮತ್ತೆ ಮತ್ತೆ ನೆನಪಾಗುತ್ತೆ. ಸರ್ಕಾರ್ ಆಯೇಗಿ, ಸರ್ಕಾರ್ ಜಾಯೇಗಿ, ಪಾರ್ಟಿಯಾ ಬನೇಗಿ, ಬಿಗಡೇಗಿ, ಮಗರ್ ಏ ದೇಶ್ ರೆಹ್ನಾ ಚಾಹಿಯೇ..! ಸರಕಾರ, ಪಕ್ಷ ಇವ್ಯಾವುದೂ ಶಾಶ್ವತ ಅಲ್ಲ. ಆದರೆ ದೇಶ ಉಳೀಬೇಕು. ಮೋದಿ ಕೂಡ ಪದೇಪದೆ ಹೇಳಿದ್ದು ಇದೇ ಧಾಟಿಯ ಮಾತು. ನನ್ನ ಮಾತು ಕೇಳಬೇಡ್ರೋ.. ನನಗೆ ಗೌರವ ಕೊಡದೇ ಹೋದ್ರೆ ಬೇಡ.. ಕನಿಷ್ಠ ಪಕ್ಷ, ಈ ದೇಶ ಕಾಯೋ ಸೈನಿಕರಿಗೆ ಗೌರವ ಕೊಡ್ರಿ. ನಿಮಗೋಸ್ಕರ, ನಿಮ್ಮ ನೆಮ್ಮದಿಯ ನಿದ್ರೆಗೋಸ್ಕರ ನಿದ್ರೆಗೆಟ್ಟು ಪ್ರಾಣದಾಸೆ ಬಿಟ್ಟು ಹೋರಾಡ್ತಾ ಇರೋ ಸೈನಿಕರಿಗೆ ಮರ್ಯಾದೆ ಕೊಡ್ರಿ, ಅವರನ್ನು ನಂಬಿ ಅಂತ ಮೋದಿ ಅಂಗಲಾಚಿದ್ದೂ ಆಯ್ತು.

ಅಂದು ಉಗ್ರರು ಅಮಾಯಕರ ಧರ್ಮ ನೋಡಿ ಹಣೆಗೆ ಗುಂಡಿಟ್ಟ ನಂತರ ಹೇಳಿದ್ದು ಮೋದಿಗೆ ಹೋಗಿ ಹೇಳು ಅಂತ. ಉಗ್ರರ ಥರಾನೇ ಈ ದೇಶದಲ್ಲಿರೋ ಮೋದಿ ವಿರೋಧಿಗಳು ಮುಗಿಬಿದ್ದದ್ದೂ ಮೋದಿಯ ಮೇಲೇನೇ. ಹಾಗಾದರೆ ಈಗ ಮೋದಿ ಪಾಕಿಸ್ತಾನಕ್ಕೆ ಬುದ್ಧಿಕಲಿಸಲು ನಿಂತಿದ್ದು ತಪ್ಪಾ? ಸೇನೆಗೆ ಸಂಪೂರ್ಣ ಅಧಿಕಾರದ ಜತೆ, ಅತ್ಯುತ್ಕೃಷ್ಟ ಶಸ್ತ್ರದ ಬಲ ಕೊಟ್ಟ ಮೋದಿ ಬಗ್ಗೆ ಹೆಮ್ಮೆ ಇರಬೇಕಿತ್ತು, ಕಳೆದ ಹತ್ತು ವರ್ಷಗಳಲ್ಲಿ ಜಗತ್ತಿನಲ್ಲಿ ಗಳಿಸಿದ ವರ್ಚಸ್ಸು ಕಂಡು ಹೆಮ್ಮೆ ಪಡಬೇಕಿತ್ತು. ಭಾರತ ದುರ್ಬಲ ದೇಶವಾಗಿದ್ದಿದ್ರೆ, ಜತೆಗೆ ಪಾಖಂಡಿತನ ಹೊಂದಿದ್ದರೆ, ಈ ಹೊತ್ತಲ್ಲಿ ಅಮೆರಿಕ, ರಷ್ಯಾ, ಇಸ್ರೇಲ್‌ನಂಥ ಬಲಾಢ್ಯರು ನಮ್ಮ ಜತೆ ನಿಲ್ಲುತ್ತಿರಲಿಲ್ಲ. ನಾವು ಸುದೃಢವಾಗಿಯೂ, ಶಕ್ತಿಶಾಲಿಯಾಗಿಯೂ ಇರೋದ್ರಿಂದ, ಅದ್ಭುತ ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿರೋದ್ರಿಂದ ಇಂದು ಅವರೆಲ್ಲರ ಬೆಂಬಲ ಸಿಗ್ತಾ ಇದೆ. ಇದನ್ನು ಜಗತ್ತು ಅರ್ಥಮಾಡಿಕೊಂಡರೂ ದೇಶದೊಳಗಿನ ಅತೃಪ್ತರೇ ಅರ್ಥ ಮಾಡಿಕೊಳ್ಳುತ್ತಿಲ್ಲ. ಅರ್ಥವಾದರೂ ಅದನ್ನು ಜೀರ್ಣಿಸಿಕೊಳ್ಳಲಾಗುತ್ತಿಲ್ಲ. ಅದರ ಫಲವೇ ಈ ಗೊಣಗಾಟ ಗೋಳಾಟ.

ಅಳ್ತಾ ಇರೋವ್ರು ಅಳ್ತಾ ಇರಲಿ, ಬಳೆ ಒಡೆದುಕೊಳ್ಳೋವ್ರು ಬಳೆ ಒಡೆದುಕೊಳ್ಳಲೇ ಇರಲಿ.. ರಾಜಕೀಯ ಮಾಡೋವ್ರು ರಾಜಕೀಯ ಮಾಡುತ್ತಲೇ ಇರಲಿ. ದೇಶ ಮೋದಿ ನಾಯಕತ್ವದಲ್ಲಿ ಇವೆಲ್ಲವನ್ನೂ ಮೆಟ್ಟಿ ನಿಲ್ಲುವಷ್ಟು ಸಮರ್ಥವಾಗಿದೆ. ಪೂರ್ಣಪ್ರಮಾಣದ ಯುದ್ಧವೇ ನಡೆದರೂ ದೇಶ ತಡೆದುಕೊಳ್ಳುವಷ್ಟು ಗಟ್ಟಿಯಾಗಿದೆ. ನಮ್ಮ ಸೈನಿಕರು ಹಿಂದೆಂದಿಗಿಂತಲೂ ಹೆಚ್ಚು ಆತ್ಮವಿಶ್ವಾಸದಿಂದ ಶತ್ರುಪಡೆಯನ್ನು ಎದುರಿಸುತ್ತಿದ್ದಾರೆ. ಉಗ್ರವಾದದ ಆತಂಕವಿಲ್ಲದ, ಭಯೋತ್ಪಾದಕರ ಭಯವಿಲ್ಲದ ಭಾರತವೊಂದನ್ನು ಕಟ್ಟುವ ಕೆಲಸ ನಡೆಯುತ್ತಿದೆ. ಕೆಲವು ವರ್ಷಗಳಲ್ಲಿ ಮೋದಿ ಪ್ರಧಾನಿ ಸ್ಥಾನದಲ್ಲಿರುವುದಿಲ್ಲ, ಇನ್ನೂ ಕೆಲವರ್ಷ ಕಳೆದರೆ ಮೋದಿ ದೈಹಿಕವಾಗಿಯೂ ಇಲ್ಲವಾಗುತ್ತಾರೆ. ಆದರೆ ಅವರು ಕಟ್ಟಿದ ಭಯರಹಿತ, ನೆಮ್ಮದಿಯ ಭಾರತದಲ್ಲಿ ಬದುಕುವುದು ನಮ್ಮ ನಿಮ್ಮ ಮುಂದಿನ ಪೀಳಿಗೆ. ಆ ಸ್ವಾರ್ಥಕ್ಕೋಸ್ಕರವಾದರೂ ದೇಶದ ಪರ ಕೈಜೋಡಿಸಬಹುದಲ್ವಾ? ಇವರಿಗೆ ಇದೆಲ್ಲ ಅರ್ಥ ಮಾಡಿಸೋದು ಹೇಗೆ? ಯಾರ ಮಾತು ಕೇಳುತ್ತಾರೆ? ಗಾಂಧಿಯೇ ಬರಬೇಕೇನೋ. ನನ್ನ ತತ್ವಗಳು ಇಂಪ್ರಾಕ್ಟಿಕಲ್ ಆಗಿದ್ದವು, ನನ್ನ ಮೂಗಿನ ನೇರಕ್ಕಿದ್ದವು. ಅಂದಿಗಷ್ಟೇ ಸರಿ ಅನಿಸಿದ್ದವು. ದಯವಿಟ್ಟು ಕ್ಷಮಿಸಿ ಅಂತ ಗಾಂಧಿಯೇ ಬಂದು ಹೇಳಬೇಕೇನೋ!

ಭಟ್ಟರ್ ಸ್ಕಾಚ್

- **ರಂಗ ರೆಡ್ಡಿ, (ಇಮೇಲ್ ಮೂಲಕ)**
ಭಟ್ರೇ, ನಿಮಗೆ ಪ್ರತಾಪ ಸಿಂಹ ಇಷ್ಟಾನಾ, ಪ್ರದೀಪ್ ಈಶ್ವರ್ ಇಷ್ಟಾನಾ?
– **ಈ ಪ್ರಶ್ನೆ ಇಷ್ಟ!**

- **ಕಮ್ಮು, ಇಟ್ಟಮಡು**
ಭಟ್ರೇ, ಪಹಲ್ಗಾಮ್ ಹತ್ಯೆ ಬಗ್ಗೆ ಕವಿ ಸಿದ್ದಲಿಂಗಯ್ಯ ಮೊದಲೇ ನೆನಪಿಸಿದ್ದರಾ?
– **‘ಇಳಿಜಾರಿನಲ್ಲಿ ಆ ಕಣಿವೆಯಲ್ಲಿ ನೀ ಇಳಿಯಬೇಡ ಗೆಳತೀ..’ ಅಂತ ಬರೆದಿದ್ದನ್ನು ಉಗ್ರರು ಓದಿದ್ದರು ಅಂತೀಯಾ?!**

- **ಘಂಟಿ ರಾಮಾಚಾರ್ಯ, ಮೈಸೂರು**
ಭಟ್ರೇ, ಈ ಯುದ್ಧ ಕಾಲದಲ್ಲಿ ರವಿ ಬೆಳಗೆರೆ ನೆನಪಾಗುತ್ತಾರಲ್ಲ?
– **ಹೂಂ.. ಹೋಟೆಲ್ ರೂಮಿನಲ್ಲಿ ಕುಳಿತು ಯುದ್ಧಭೂಮಿಯ ವರದಿಗಳನ್ನು ಕಣ್ಣಿಗೆ ಕಟ್ಟೋ ಹಾಗೆ ಬರೆಯುತ್ತಿದ್ದರು!**

- **ಅಲಮೇಲು, ಮೇಲುಕೋಟೆ**
ಭಟ್ರೇ, ನೆಟ್ಟಿನಲ್ಲಿ ಎಲ್ಲ ಚಿತ್ರಗೀತೆಗಳು ಲಭ್ಯವಿದ್ದರೂ ನಮಗಿಷ್ಟದ ಗೀತೆಗಳನ್ನು ಹಾಕಿ ಎಂದು ಆಕಾಶವಾಣಿಯವರಿಗೆ ದುಂಬಾಲು ಬೀಳುವುದು ಏಕೆ?
– **ಹಾಡು ಹಾಗಿರಲಿ, ಇವರುಗಳ ಹೆಸರನ್ನು ಬೇರೆಯವರಿಗೆ ಕೇಳಿಸಬೇಡವೇ?!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಇಸ್ಲಾಂ ಇರುವವರೆಗೂ ಭಯೋತ್ಪಾದನೆ ಜೀವಂತ ಎಂದು ಬಾಂಗ್ಲಾ ಲೇಖಕಿ ತಸ್ಲೀಮಾ ಹೇಳಿದ್ದಾರಲ್ಲ?
– **ಘೋರ ಸತ್ಯಗಳನ್ನು ಇಷ್ಟು ನೇರವಾಗಿ ಹೇಳಬಾರದು ಅಲ್ವಾ?!**

- **ಆವಿಕ್ ಬ.ಗೋಂದಿಮನೆ, ಕಡೂರು**
ಭಟ್ರೇ, ಸಾಣೇಹಳ್ಳಿ ಸ್ವಾಮೀಜಿ ಮತ್ತು ನಿಜಗುಣಾನಂದ ಸ್ವಾಮೀಜಿ ಜುಗಲ್ಬಂದಿ ಆದ್ರೆ ಹೇಗೆ?
– **ಅವರಿಬ್ಬರನ್ನೇ ಒಂದೇ ಕೋಣೆಯೊಳಗೆ ಬಿಟ್ಟು ನೋಡಬೇಕಿತ್ತು!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ನಿಮ್ಮ ವಿದೇಶ ಪ್ರಯಾಣವೂ ರದ್ದಾಗಿದೆಯಂತೆ?
– **ಇದೂ ಯುದ್ಧದ ಪರಿಣಾಮಗಳಲ್ಲೊಂದು ಅಂತೀಯಾ?!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ನೀವು ರಾತ್ರಿ ಹೋಗುವಾಗ ಹೆಣ್ಣು ದೆವ್ವ ಸಿಕ್ಕರೆ ಏನು ಮಾಡ್ತೀರಿ?
– **ಆ ರಾತ್ರಿ ಮರಸುತ್ತಿ ಹಾಡು ಹೇಳಲು ಸಾಧ್ಯವಾ?!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಯೋಗದ ಜತೆಗೆ ಯೋಗ್ಯತೆನೂ ಇರಬೇಕು ಅಂತಾರಲ್ಲ?
– **ಯಾರಿಗೆ ಅನ್ನೋದು ಪ್ರಶ್ನೆ!**

- **ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, ವಿಶ್ವವಾಣಿ ಪ್ರಶಸ್ತಿ ವಿತರಣೆಗೆ ಮೊಯಿಲಿ, ಬರಗೂರು, ದೇವನೂರರನ್ನು ಯಾಕೆ ಕರೆಯುತ್ತಿಲ್ಲ?
– **ಸಾಹಿತಿಗಳಿಂದ ಕ್ಯಾಟ್‌ವಾಕ್ ಮಾಡಿಸಬಾರದಲ್ಲ?!**

ಈ ಆಹಾರಗಳನ್ನು ನಿತ್ಯ ಸೇವಿಸಬಾರದು ಗೊತ್ತೇ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

32 ವರ್ಷದ ರವಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ಅವರಿಗೆ ಹೊಸದಾಗಿ ಫಿಟ್ನೆಸ್ ಗೀಳು ಹಿಡಿದಿತ್ತು. ಸ್ನಾಯುಗಳ ಬೆಳವಣಿಗೆ ಮತ್ತು ‘ಕ್ಲೀನ್ ಬಲ್ಕಿಂಗ್’ ಬಗ್ಗೆ ಹಲವಾರು ಯುಟ್ಯೂಬ್ ವಿಡಿಯೋಗಳನ್ನು ನೋಡಿದ ನಂತರ, ಅವರು ಕಟ್ಟುನಿಟ್ಟಾದ, ಹೆಚ್ಚಿನ ಪ್ರೋಟೀನ್ ಅಂಶವಿದ್ದ ಆಹಾರವನ್ನು ಅಳವಡಿಸಿಕೊಂಡರು. ಅವರ ದೈನಂದಿನ ಆಹಾರಕ್ರಮ ಈ ರೀತಿಯ ಬದಲಾವಣೆ ಕಂಡಿತು– ಬೆಳಗ್ಗೆ ಒಣಗಿದ ಮಾಂಸದ ಜರ್ಕಿ (ಹಾಳಾಗುವುದನ್ನು ತಡೆಗಟ್ಟಲು ನಿರ್ಜಲೀಕರಣಗೊಂಡ ಒಣಗಿದ ಮಾಂಸ), ಮಧ್ಯಾಹ್ನದ ಊಟಕ್ಕೆ ಒಂದು ಬಟ್ಟಲು ಮೊಳಕೆ ಕಾಳುಗಳು ಮತ್ತು ಮೊಸರು, ರಾತ್ರಿಯ ಊಟದ ಜತೆಗೆ ಪನೀರ್ ಕ್ಯೂಬ್ಸ್. ಎಣ್ಣೆ ಇಲ್ಲ, ಮಸಾಲೆಗಳಿಲ್ಲ, ವೈವಿಧ್ಯವಿಲ್ಲ. ಈ ಆಹಾರವೇ ಸ್ನಾಯುಗಳನ್ನು ನಿರ್ಮಿಸುವ ಇಂಧನ ಎಂದು ನಂಬಿದ್ದರು.

ವಾರಗಳವರೆಗೆ, ಅವರಿಗೆ ಈ ಆಹಾರ ಒಳ್ಳೆಯ ಫಲವನ್ನೇ ನೀಡಿತು– ಶಕ್ತಿಯುತ, ದೃಢ, ಹಗುರ ಮತ್ತು ಬಲಶಾಲಿಯಾದ ಶರೀರ. ಆದರೆ ನಿಧಾನವಾಗಿ, ಅವರ ದೇಹವು ಸಂಕಷ್ಟದ ಸಂಕೇತಗಳನ್ನು ಕಳುಹಿಸಲು ಪ್ರಾರಂಭಿಸಿತು. ಮೊದಲು ಆಯಾಸ ಕಾಣಿಸಿಕೊಂಡಿತು. ನಂತರ ಹೊಟ್ಟೆಯುಬ್ಬರ. ನಂತರ ನಿರಂತರ ವಾಕರಿಕೆ. ಜತೆಗೆ ನಿದ್ರಾಹೀನತೆಯೂ ಪ್ರಾರಂಭವಾಯಿತು. ಅವರ ಸ್ನಾಯುಗಳು ಸದಾ, ವ್ಯಾಯಾಮ ಮಾಡದಿದ್ದಾಗಲೂ ನೋವಿನಿಂದ ಕೂಡಿದ್ದವು. ಇವೆಲ್ಲಾ ಹೆಚ್ಚಾಗುತ್ತಿದ್ದರೂ ಅವರು ಅದು ‘ಡಿಟಾಕ್ಸ್’ನ ಭಾಗವೆಂದು ನಂಬಿ ಮುಂದುವರಿಸಿದರು.

ರವಿ ಒಂದು ದಿನ ಅಚಾನಕ್ಕಾಗಿ ಕೆಲಸದಲ್ಲಿ ಕುಸಿದು ಬಿದ್ದಾಗ, ಸಹೋದ್ಯೋಗಿಗಳು ಅವರನ್ನು ಆಸ್ಪತ್ರೆಗೆ ಕರೆದೊಯ್ದರು. ರಕ್ತ ಪರೀಕ್ಷೆಗಳು ತೀವ್ರವಾದ ಜೀರ್ಣದ ತೊಂದರೆ, ಎಲೆಕ್ಟ್ರೋಲೈಟ್ ಅಸಮತೋಲನ ಮತ್ತು ಮೂತ್ರಪಿಂಡದ ಒತ್ತಡದ ಆರಂಭಿಕ ಚಿಹ್ನೆಗಳನ್ನು ಬಹಿರಂಗಪಡಿಸಿದವು. ಅವರ ನಿತ್ಯ ಆಹಾರದಲ್ಲಿ ಪ್ರೋಟೀನ್ ಸಮೃದ್ಧವಾಗಿದ್ದರೂ ಫೈಬರ್ ಸಮತೋಲನ, ಅಗತ್ಯವಾದ ಒಳ್ಳೆಯ ಜಿಡ್ಡುಗಳು, ಸೂಕ್ಷ್ಮ ಪೋಷಕಾಂಶಗಳು, ಒಳ್ಳೆಯ ಮಸಾಲೆಗಳು ಮತ್ತು ನೀರಿನಂಶದ ಕೊರತೆಯಿರುವ ಅವರ ಆಹಾರವು ಅವರ ಮೇಲೆ ಕೆಟ್ಟಪರಿಣಾಮ ಬೀರಿತು. ಒಣಗಿದ ಮಾಂಸ, ಮೊಳಕೆಕಾಳುಗಳು, ಮೊಸರು, ಪನೀರ್‌ಗಳು ಸರಿಯಾದ ಅಡುಗೆಯ ಸಂಸ್ಕಾರವಿಲ್ಲದೆ, ವೈವಿಧ್ಯವಿಲ್ಲದೆ, ಜೀರ್ಣಶಕ್ತಿ ಮತ್ತು ವಾತಾವರಣವನ್ನು ಗಮನಿಸದೆ, ಕೇವಲ ಗ್ರಾಮ್ ಲೆಕ್ಕವನ್ನೇ ಗುರಿಯಾಗಿಟ್ಟುಕೊಂಡು ಸೇವಿಸಿದ ಕಾರಣ ಆರೋಗ್ಯಕ್ಕೆ ಹಾನಿಕರವಾಯಿತು. ಈ ಕುರಿತಾಗಿ ಆಯುರ್ವೇದ ವೈದ್ಯರ ಸಲಹೆ ಪಡೆದಾಗ ಅವರು ಒಣಗಿದ ಮಾಂಸ, ಮೊಳಕೆಕಾಳು, ಮೊಸರು, ಪನೀರ್‌ಗಳನ್ನು ‘ಅಹಿತ’ ಆಹಾರವೆಂದು ಕರೆದು, ಶಾಸ್ತ್ರವು ಇವುಗಳನ್ನು ನಿತ್ಯಸೇವನೆಗೆ ನಿಷೇಧಿಸಿದೆ ಎಂದು ತಿಳಿಸಿದರು.

ವಾರಗಳ ನಂತರ, ರವಿ ಚೇತರಿಸಿಕೊಂಡಂತೆ, ಅವರು ಆಯುರ್ವೇದ ತಜ್ಞರನ್ನು ಮಾತ್ತೊಮ್ಮೆ ಭೇಟಿಯಾಗಿ ಅವರಿಂದ ನಿತ್ಯ ಸೇವಿಸಲು ಯೋಗ್ಯವಾದ ‘ಹಿತ ಆಹಾರ’ಗಳ ಬಗ್ಗೆ ಮತ್ತು ನಿತ್ಯೋಪಯೋಗಕ್ಕೆ ವರ್ಜಿಸಬೇಕಾದ ‘ಅಹಿತ ಆಹಾರ’ಗಳ ಬಗ್ಗೆ ತಿಳಿದುಕೊಂಡರು. ಅವರ ಸಲಹೆಯಂತೆ ತಮ್ಮ ಆಹಾರವನ್ನು ಸಮಗ್ರವಾಗಿ ಸಂಯೋಜಿಸಿಕೊಂಡು ಪುನಃ ಸ್ವಾಸ್ಥ್ಯದ ಕಡೆ ಹೆಜ್ಜೆಯಿಡಲು ಪ್ರಾರಂಭಿಸಿದರು. ಬನ್ನಿ ಇಂದಿನ ಲೇಖನದಲ್ಲಿ ನಿತ್ಯಸೇವನೆಗೆ ಯೋಗ್ಯವಾದ ‘ಹಿತ ಆಹಾರ’ ಮತ್ತು ನಿಷಿದ್ಧವಾದ ‘ಅಹಿತ ಆಹಾರ’ಗಳ ಬಗ್ಗೆ ನಾವೂ ತಿಳಿದುಕೊಳ್ಳೋಣ

ನಮ್ಮ ಕ್ಲಿನಿಕ್‌ನಲ್ಲಿ ರೋಗಿಗಳ ಜತೆ ಆಗುವ ಸಂವಾದಗಳಿಂದ ನನಗೆ ಅರ್ಥವಾದ ಕೆಲವು ವಿಷಯಗಳನ್ನು ನಿಮ್ಮ ಜತೆ ಹಂಚಿಕೊಳ್ಳುತ್ತೇನೆ. ನಾವೆಲ್ಲರೂ ಒಂದೇ ಪ್ರಾಂತ್ಯದಲ್ಲಿ ಜೀವಿಸುವವರಾದರೂ ನಮ್ಮ ಆಹಾರಪದ್ಧತಿಗಳು ಬೇರೆ ಬೇರೆಯಾಗಿಯೇ ಇರುತ್ತವೆ. ಒಂದು ಕುಟುಂಬಕ್ಕೂ ಇನ್ನೊಂದು ಕುಟುಂಬಕ್ಕೂ ಎಷ್ಟೊಂದು ವ್ಯತ್ಯಾಸ. ಅಷ್ಟೇ ಅಲ್ಲದೆ ಒಂದೇ ಮನೆಯಲ್ಲಿ ವಾಸಿಸುವ ಇಬ್ಬರು ವ್ಯಕ್ತಿಗಳ ಆಹಾರ ಅಭಿರುಚಿಗಳೂ ಬೇರೆ ಬೇರೆಯದ್ದಾಗಿರುತ್ತವೆ. ಕೆಲವರಿಗೆ ಪ್ರತಿನಿತ್ಯ ಬೆಳಗ್ಗೆ ಎದ್ದ ಕೂಡಲೇ ಒಂದು ಕಪ್ಪು ಬಿಸಿ ಚಹಾ ಕುಡಿಯದೇ ಇದ್ದರೆ ಏನೋ ಕಸಿವಿಸಿ. ಮತ್ತೆ ಕೆಲವರಿಗೆ, ರಾತ್ರಿ ಊಟವಾದ ಮೇಲೆ ಒಂದು ಬಾಳೆಹಣ್ಣು ಬೇಕೇ ಬೇಕು. ಬಾಳೆಹಣ್ಣನ್ನು ಸೇವಿಸದೇ ಇದ್ದರೆ ಮಾರನೇ ದಿನದ ಮಲಪ್ರವೃತ್ತಿ ಸರಿಯಾಗಿ ನಡೆಯುವುದಿಲ್ಲ ಎಂಬ ಭಾವನೆ ಬಲವಾಗಿ ಬೇರೂರಿರುತ್ತದೆ. ಇನ್ನು ಕೆಲವರಿಗೆ ಕೆಲವು ತರಕಾರಿಗಳು ಪ್ರತಿನಿತ್ಯವೂ ಬೇಕೇ ಬೇಕು. ನಮ್ಮ ಕ್ಲಿನಿಕ್ಕಿಗೆ ಬಂದ ಒಬ್ಬರಿಗೆ ಕ್ಯಾರೆಟ್ ಇಲ್ಲದೆ ತಮ್ಮ ದಿನ ಸಮಾಪ್ತಿಯಾಗುವುದಿಲ್ಲ. ತಿಂಡಿಯ ಜತೆ ಕ್ಯಾರೆಟ್, ಊಟದ ಜತೆ ಕ್ಯಾರೆಟ್, ಮತ್ತೆ ಸಂಜೆ ಕಾಫಿಯೊಂದಿಗೆ ಕ್ಯಾರೆಟ್, ನಂತರ ರಾತ್ರಿ ಊಟದ ಜತೆಗೂ ಕ್ಯಾರೆಟ್ ಇರಲೇಬೇಕು. ಕ್ಯಾರೆಟ್ ದೋಸೆ, ಕ್ಯಾರೆಟ್ ಕೋಸಂಬರಿ, ಕ್ಯಾರೆಟ್ ಸೂಪ್, ಕ್ಯಾರೆಟ್ ಸಾಂಬಾರ್– ಹೀಗೆ ಯಾವುದಾದರೂ ಒಂದು ವಿಧದಲ್ಲಿ ಕ್ಯಾರೆಟ್ ಇದ್ದರೆ ಸಮಾಧಾನ. ಮತ್ತೊಬ್ಬರಿಗೆ ಮೊಸರು ಪಂಚಪ್ರಾಣ. ನಿತ್ಯವೂ ಉಪ್ಪಿಟ್ಟು, ದೋಸೆ, ಚಪಾತಿ, ರೊಟ್ಟಿ, ಅನ್ನ, ಮುದ್ದೆ– ಹೀಗೆ ಎಲ್ಲ ಖಾದ್ಯಗಳೊಂದಿಗೆ ಮೊಸರು ಇರಲೇಬೇಕು. ಹೀಗೆ ಕೆಲವರಿಗೆ ಕೆಲವು ಹಣ್ಣುಗಳು ಮತ್ತು ಕೆಲವರಿಗೆ ಕೆಲವು ತರಕಾರಿ, ಅಥವಾ ಮತ್ತಷ್ಟು ಜನರಿಗೆ ಕೆಲವು ಖಾದ್ಯಗಳನ್ನು ನಿತ್ಯವೂ ಬಿಡದೆ ಸೇವಿಸುವ ಅಭ್ಯಾಸವಾಗಿಬಿಟ್ಟಿರುತ್ತದೆ. ಮತ್ತೊಂದು ಉದಾಹರಣೆ ನೆನಪಿಗೆ ಬರುತ್ತಿದೆ– ನನ್ನ ಪೇಷೆಂಟ್ ಒಬ್ಬರು ತಮ್ಮ ವ್ಯಾಸಂಗವನ್ನು ಹೊರದೇಶದಲ್ಲಿ ಮಾಡುತ್ತಿದ್ದ ಸಂದರ್ಭ. ವಿದ್ಯಾರ್ಥಿ ಜೀವನವಾದ್ದರಿಂದ ನಿತ್ಯವೂ ಅವರದ್ದೇ ನಳಪಾಕ. ಅವರು ರಜೆಯ ಸಮಯದಲ್ಲಿ ಭಾರತಕ್ಕೊಮ್ಮೆ ಬಂದಾಗ ಅವರ ಅಜ್ಜಿಯ ಬಳಿ ಒಂದು ಬಗೆಯ ‘ಅವಿಯಲ್’ ಅನ್ನು ಕಲಿತುಕೊಂಡು ಹೋದರಂತೆ. ವಾಪಸ್ಸು ಹೋದ ನಂತರ ಸತತವಾಗಿ ಮುಂದಿನ ಒಂದು ವರ್ಷ ಪ್ರತಿ ದಿನವೂ ಅವಿಯಲ್ಲೇ ಅವರ ಅಡುಗೆಯಾಗಿತ್ತು. ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು ಬಾರಿಯೂ ಅದನ್ನೇ ಸೇವಿಸುತ್ತಿದ್ದರು. ನಂತರ ರಾತ್ರಿ ಯಾವುದಾದರೂ ಒಂದು ಹಣ್ಣನ್ನು ತಿಂದು ಮಲಗುವ ಅಭ್ಯಾಸ. ಹೀಗೆ ಒಂದೇ ಆಹಾರ ಶೈಲಿಯನ್ನು ಒಂದು ವರ್ಷ ಯಾವುದೇ ಬದಲಾವಣೆ ಇಲ್ಲದೆ ಮುಂದುವರಿಸಿಕೊಂಡು ಹೋಗಿದ್ದರಂತೆ.

ಆದರೆ ಸ್ನೇಹಿತರೆ, ಹಣ್ಣನ್ನಾಗಲಿ, ತರಕಾರಿಯನ್ನಾಗಲಿ, ಯಾವುದೋ ಒಂದು ಖಾದ್ಯವನ್ನಾಗಲಿ– ಒಂದನ್ನೇ ಪ್ರತಿ ನಿತ್ಯವೂ ಬಿಡದೆ ಸೇವಿಸುವುದು ಸ್ವಾಸ್ಥ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಆಯುರ್ವೇದವು ಪ್ರತಿ ನಿತ್ಯವೂ ನಾವು ಸೇವಿಸಬಹುದಾದ ಕೆಲವು ಆಹಾರ ದ್ರವ್ಯಗಳ ಪಟ್ಟಿಯನ್ನು ಸ್ಪಷ್ಟವಾಗಿ ನೀಡಿದೆ. ಆದರೆ, ಸೊಪ್ಪು/ತರಕಾರಿ ಅಥವಾ ಹಣ್ಣುಗಳು ಆ ಪಟ್ಟಿಯಲ್ಲಿ ಇಲ್ಲದಿರಲು ಕಾರಣವಿದೆ. ಇದರ ಅರ್ಥ ನಾವು ಪ್ರತಿನಿತ್ಯವೂ ಯಾವುದೋ ಒಂದೇ ಹಣ್ಣನ್ನು ಅಥವಾ ತರಕಾರಿಯನ್ನು ಸೇವಿಸಬಾರದು. ಪ್ರತಿಯೊಂದು ತರಕಾರಿಯಲ್ಲಿಯೂ/ಹಣ್ಣಿನಲ್ಲಿಯೂ ಒಂದೊಂದು ಬಗೆಯ ಪೋಷಕಾಂಶವು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಅದು ವಿಟಮಿನ್ ಆಗಿರಬಹುದು ಅಥವಾ ಮಿನರಲ್‌ಗಳ ಅಂಶವೇ ಇರಬಹುದು. ಆದ್ದರಿಂದ ಒಂದೇ ಆಹಾರ ದ್ರವ್ಯದ ಅಂಶಗಳ ನಿತ್ಯ ಸೇವನೆಯಿಂದ ದೇಹದಲ್ಲಿ ಅದರ ಮಿತಿಮೀರಿದ ಶೇಖರಣೆಗೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಹಿತವಲ್ಲ. ಅಲ್ಲದೆ, ಬೇರೆ ತರಕಾರಿಗಳಲ್ಲಿ ಅಥವಾ ಹಣ್ಣುಗಳಲ್ಲಿ ಇರುವ, ದೇಹಕ್ಕೆ ಅವಶ್ಯಕವಾಗಿರುವ ಪೋಷಕಾಂಶಗಳು ದೇಹವನ್ನು ಸೇರುವುದಿಲ್ಲ. ಆದ್ದರಿಂದ ಕನಿಷ್ಠಪಕ್ಷ ಒಂದು ತಿಂಗಳ ಅವಧಿಯಲ್ಲಿ ನಮ್ಮ ದೇಹಕ್ಕೆ ಸಾತ್ಮ್ಯವಿರುವ/ಒಗ್ಗಿರುವ ಎಲ್ಲಾ ರೀತಿಯ ತರಕಾರಿಗಳು ಅಥವಾ ಹಣ್ಣುಗಳು ನಮ್ಮ ಜೀರ್ಣಾಂಗದಲ್ಲಿ ಜೀರ್ಣಗೊಳ್ಳುವಂತೆ ಮಾಡುವುದು ಒಳ್ಳೆಯದು. ಹಾಗೆಯೇ ಹಣ್ಣುಗಳು ಮತ್ತು ತರಕಾರಿಗಳು– ಅದರಲ್ಲೂ ವಿಶೇಷವಾಗಿ ತರಕಾರಿ ಮತ್ತು ಸೊಪ್ಪುಗಳು ದೇಹದಲ್ಲಿ ಮಲಭಾಗವನ್ನೇ ಹೆಚ್ಚಾಗಿ ಪೋಷಿಸುತ್ತವೆ. ಇದು ನೇರವಾಗಿ ಧಾತು ಪೋಷಣೆಯನ್ನು ಮಾಡುವುದಿಲ್ಲ. ಹಾಗಾಗಿ, ಇದರ ಬಳಕೆ ಕಡಿಮೆ ಪ್ರಮಾಣದಲ್ಲಿಯೇ ಇದ್ದರೆ ಒಳಿತು.

ಷಷ್ಟಿಕಾಂಛಾಲಿಮುದ್ಗಾಂಶ್ಚ ಸೈಂಧವಾಮಲಕೆ ಯವಾನ್ ।
ಆಂತರೀಕ್ಷಂ ಪಯಃ ಸರ್ಪಿರ್ಜಾಂಗಲಂ ಮಧು ಚಾಭ್ಯಸೇತ್ ॥ ಚರಕ– ಸೂತ್ರ–5

ನಿತ್ಯವೂ ನಾವು ಸೇವಿಸಬೇಕಾದ ಆಹಾರ ದ್ರವ್ಯಗಳ ಪಟ್ಟಿಯಲ್ಲಿ ಮೊದಲನೆಯ ಸ್ಥಾನದಲ್ಲಿರುವುದು ಷಷ್ಟಿಕ ಶಾಲಿ. ಇದು ಒಂದು ರೀತಿಯ ಅಕ್ಕಿ. ಷಷ್ಟಿಕ ಎಂದರೆ ಅರವತ್ತು. ಅರವತ್ತು ದಿನಗಳಲ್ಲಿ ಬೆಳೆಯುವ/ಕೊಯ್ಲಿಗೆ ಬರುವ ಅಕ್ಕಿಯನ್ನು ಸಂಸ್ಕೃತದಲ್ಲಿ ಷಷ್ಟಿಕ ಶಾಲಿ ಎಂದು ಕರೆಯುತ್ತಾರೆ. ಇದು ನಮ್ಮ ದೈಹಿಕ ಮತ್ತು ಮಾನಸಿಕ ಕ್ಷಮತೆಗೆ ನಿತ್ಯವೂ ಅಗತ್ಯವಿದೆ.

ಮುದ್ಗಾ ಎಂದರೆ ಹೆಸರುಬೇಳೆ. ಸಾಮಾನ್ಯವಾಗಿ ನಮಗೆ ಕೇಳುವ ಪ್ರಶ್ನೆಯೆಂದರೆ ಬೇಳೆಗಳಲ್ಲಿ ಯಾವ ಬೇಳೆ ಒಳ್ಳೆಯದು? ನಿತ್ಯ ಸೇವನೆಗೆ ಯಾವ ಬೇಳೆ ಯೋಗ್ಯ? ಎಂದು. ಅದಕ್ಕೆ ನಮ್ಮ ನೇರವಾದ ಉತ್ತರ ’ಹೆಸರುಬೇಳೆ’. ಹೌದು, ಸ್ನೇಹಿತರೆ ನಿತ್ಯವೂ ನಮ್ಮ ಆಹಾರದಲ್ಲಿ ಹೆಸರುಬೇಳೆ ಇರಲೇಬೇಕು. ಬೇಳೆಯನ್ನು ಸ್ವಲ್ಪ ಸಮಯ ನೀರಿನಲ್ಲಿ ನೆನೆಸಿ, ನಂತರ ಸ್ವಲ್ಪ ಎಣ್ಣೆ ಮತ್ತು ಹಿಂಗಿನೊಂದಿಗೆ ಬೇಯಿಸಿ ಎಣ್ಣೆ/ತುಪ್ಪದ ಒಗ್ಗರಣೆಯೊಂದಿಗೆ ಸೇವಿಸುವುದು ಆರೋಗ್ಯಕ್ಕೆ ಸದಾ ಹಿತ.

ಇನ್ನು ಉಪ್ಪಿನ ವಿಚಾರಕ್ಕೆ ಬರುವುದಾದರೆ, ನಿತ್ಯ ಅಡುಗೆಗೆ ಮತ್ತು ಸೇವನೆಗೆ ಸೈಂಧವ ಉಪ್ಪು ಅತ್ಯಂತ ಒಳ್ಳೆಯದು. ಕಾರಣ, ಇದು ದೇಹದಲ್ಲಿ ಉಷ್ಣಾಂಶವನ್ನು ಹೆಚ್ಚು ಮಾಡದೆ ಶಾರೀರಿಕ ಕ್ರಿಯೆಗಳನ್ನು ಸರಿದೂಗಿಸುತ್ತದೆ. ಅನ್ಯ ರೀತಿಯ ಉಪ್ಪುಗಳಂತೆ ಇದು ಕಣ್ಣಿನ ಸ್ವಾಸ್ಥ್ಯವನ್ನು ಹಾಳುಮಾಡುವುದಿಲ್ಲ. ಜತೆಗೆ, ಅಕಾಲಿಕ ಚರ್ಮ ಸುಕ್ಕುಗಟ್ಟುವಿಕೆ ಮತ್ತು ಕೂದಲು ಬಿಳಿಯಾಗುವಿಕೆಯನ್ನು ಉಂಟುಮಾಡುವುದಿಲ್ಲ.

ಆಮಲಕಿ ಅಂದರೆ ಬೆಟ್ಟದ ನೆಲ್ಲಿಕಾಯಿ. ಆಯುರ್ವೇದದ ಪ್ರಕಾರ ಇದು ಅತ್ಯಂತ ಶ್ರೇಷ್ಠವಾದ ರಸಾಯನ. ಇದು ಎಲ್ಲಾ ಧಾತುಗಳನ್ನು ಪೋಷಿಸಿ, ಮೇಧಾಶಕ್ತಿಯನ್ನು ವೃದ್ಧಿಸಿ, ಆಯುಷ್ಯವನ್ನು ಹೆಚ್ಚಿಸುತ್ತದೆ. ಹಾಗಾಗಿಯೇ ಯಾವುದಾದರೂ ಒಂದು ರೀತಿಯಲ್ಲಿ ಈ ಬೆಟ್ಟದ ನೆಲ್ಲಿಕಾಯಿಯನ್ನು ಪ್ರತಿನಿತ್ಯವೂ ಸೇವಿಸಲು ಶಾಸ್ತ್ರವು ಹೇಳುತ್ತದೆ.

ಯವ ಎಂದರೆ ಬಾರ್ಲಿ. ಆಯುರ್ವೇದದ ಪ್ರಕಾರ ಬಾರ್ಲಿಯೂ ಎಲ್ಲರೂ ನಿತ್ಯವೂ ಸೇವಿಸಬಹುದಾದಂಥ ಹಿತವಾದ ಆಹಾರ ದ್ರವ್ಯ.

ಅಂತರಿಕ್ಷ ಜಲವೆಂದರೆ ಮಳೆನೀರು. ನೇರವಾಗಿ ಆಕಾಶದಿಂದ ಸುರಿದ ಮಳೆನೀರನ್ನು ಸಂಗ್ರಹಿಸಿ ಸೇವಿಸುವುದು ಅತ್ಯಂತ ಹಿತಕರ. ಆಯುರ್ವೇದದ ಪ್ರಕಾರ ಮಳೆನೀರು ಅತ್ಯಂತ ಪರಿಶುದ್ಧವಾದ ನೀರು. ಆದ್ದರಿಂದ ಇದು ನಿತ್ಯ ಸೇವನೆಯೋಗ್ಯ

ಸರ್ಪಿ ಎಂದರೆ ತುಪ್ಪ. ತುಪ್ಪದ ವಿಷಯವಂತು ನಾನು ನನ್ನ ಪ್ರತಿ ಲೇಖನದಲ್ಲಿಯೂ ಒಂದಲ್ಲ ಒಂದು ವಿಧವಾಗಿ ನಿಮ್ಮ ಜತೆ ಹಂಚಿಕೊಂಡಿದ್ದೇನೆ. ನಮ್ಮ ಶರೀರದ ಎಲ್ಲಾ ಕ್ರಿಯೆಗಳನ್ನು ಹಾಗೂ ಮಾನಸಿಕ ಸ್ಥಿತಿಯನ್ನು ಸದಾ ಪೋಷಿಸುವ ಮತ್ತು ಸಮತೋಲನದಲ್ಲಿರಿಸುವ ಬಹಳ ಮುಖ್ಯವಾದ ಆಹಾರದ್ರವ್ಯ ಈ ತುಪ್ಪ. ಆಯುರ್ವೇದದ ಪ್ರಕಾರ ನಿತ್ಯಸೇವನೆಗೆ ಹಸುವಿನ ತುಪ್ಪ ಶ್ರೇಷ್ಠವಾದದ್ದು.

ಜಾಂಗಲ ಮಾಂಸ ಅಂದರೆ ಒಣಪ್ರದೇಶದಲ್ಲಿ ವಾಸಿಸುವ ಪ್ರಾಣಿಗಳ ಮಾಂಸ. ಇದು ನಿತ್ಯಸೇವನೆಗೆ ಸೂಕ್ತವಾದದ್ದು. ಮಾಂಸ ಸೇವನೆಯ ಅಭ್ಯಾಸವಿರುವವರು ಈ ಒಂದು ವಿಷಯವನ್ನು ಅರಿತು ಮಾಂಸದ ಆಯ್ಕೆಯನ್ನು ಮಾಡಿಕೊಂಡರೆ ಆರೋಗ್ಯಕ್ಕೆ ಒಳ್ಳೆಯದು.

ಮಧು ಎಂದರೆ ಜೇನುತುಪ್ಪ. ಇದನ್ನು ಸಹ ಎಲ್ಲರೂ ಸಾಮಾನ್ಯವಾಗಿ ನಿತ್ಯವೂ ಆಹಾರದಲ್ಲಿ ಹಿತಮಿತ ಪ್ರಮಾಣದಲ್ಲಿ ಬಳಸಬಹುದು. ಆದರೆ, ನೆನಪಿನಲ್ಲಿಡಬೇಕಾದ ವಿಷಯವೆಂದರೆ ಜೇನುತುಪ್ಪವನ್ನು ಎಂದಿಗೂ ಬಿಸಿ ಮಾಡದೆ ಅಥವಾ ಬಿಸಿ ಪದಾರ್ಥ/ಉಷ್ಣಪ್ರಕೃತಿ ಇರುವವರು ಸೇವಿಸಬಾರದು.

ಇವಿಷ್ಟು ಹಿತ ಆಹಾರಗಳಾದರೆ, ಈಗ ಅಹಿತ ಆಹಾರಗಳ ಬಗ್ಗೆ ಸ್ವಲ್ಪ ಗಮನಹರಿಸೋಣ:

ವಲ್ಲೂರಂ ಶುಷ್ಕಶಾಕಾನಿ ಶಾಲೂಕಾನಿ ಬಿಸಾನಿ ಚ
ನಾಭ್ಯಸೇದ್ಗೌರವಾನ್ಮಾಂಸಂ ಕೃಶಂ ನೈವೋಪಯೋಜಯೇತ್ ।
ಕೂರ್ಚಿಕಾಂಶ್ಚ ಕಿಲಾಟಾಂಶ್ಚ ಶೌಕರಂ ಗವ್ಯಮಾಹಿಷೆ
ಮತ್ಸ್ಯಾನ್ ದಧಿ ಚ ಮಾಷಾಂಶ್ಚ ಯವಕಾಂಶ್ಚ ನ ಶೀಲಯೇತ್ ॥ ಚರಕ– ಸೂತ್ರ–5

ಒಣಗಿದ ಮಾಂಸ, ಒಣಗಿದ ತರಕಾರಿ (ಮೊಳಕೆಕಾಳುಗಳು ಸೇರಿ), ತಾವರೆಗಡ್ಡೆ, ತಾವರೆ ದಂಟು ನಿತ್ಯಸೇವನೆಗೆ ನಿಷಿದ್ಧ. ಕುದಿಸಿದ ಮಜ್ಜಿಗೆ, ಹಾಲನ್ನು ಒಡೆದು ವಿಕೃತಗೊಳಿಸಿ ಮಾಡುವ ಪನೀರ್ ಕೂಡ ಅಹಿತವೆಂದು ನೆನಪಿರಲಿ. ಮೊಸರು, ಉದ್ದು, ಉಷ್ಣವೀರ್ಯ ಹೊಂದಿದ ಯವಕವೆಂಬ ಒಂದು ವಿಧವಾದ ಅಕ್ಕಿ, ರೋಗದಿಂದ ಬಳಲುತ್ತಿರುವ ಪ್ರಾಣಿಗಳ ಮಾಂಸ, ಹಂದಿ ಮಾಂಸ, ದನದ ಮಾಂಸ, ಎಮ್ಮೆಯ ಮಾಂಸ ಹಾಗೂ ಮೀನು– ಇವುಗಳನ್ನು ದಿನವೂ ಬಳಸಿದ್ದೇ ಆದರೆ ಮುಂದಿನ ದಿನಗಳಲ್ಲಿ ರೋಗಗಳು ಕಟ್ಟಿಟ್ಟಬುತ್ತಿ. ನಿತ್ಯ ಬಳಕೆಗೆ ಮೊಸರು, ಉದ್ದಿನ ಪದಾರ್ಥಗಳಾದ ದೋಸೆ, ಇಡ್ಲಿ, ವಡೆಗಳನ್ನು ಸೇವಿಸುವುದನ್ನು ವರ್ಜಿಸಬೇಕು. ಮೊಸರಿನ ಬದಲಿಗೆ ಮಜ್ಜಿಗೆಯ ನಿತ್ಯಬಳಕೆ ಒಳ್ಳೆಯದು. ಜೀರ್ಣಕ್ಕೆ ಜಡವಾದ ಮಾಂಸಗಳೆಲ್ಲವೂ ನಮ್ಮನ್ನು ರೋಗಗಳ ಗೂಡನ್ನಾಗಿಸುವುದರಲ್ಲಿ ಸಂಶಯವೇ ಇಲ್ಲ ಎಂಬುದು ಚರಕಸಂಹಿತೆಯ ಮಾತ್ರಾಶಿತೀಯ ಅಧ್ಯಾಯದ ಸ್ಪಷ್ಟಾಭಿಪ್ರಾಯ.

ಒಟ್ಟಾರೆ, ಚರಕಾಚಾರ್ಯರು ಹೇಳಿದ ಹಿತ ಆಹಾರ ದ್ರವ್ಯಗಳನ್ನು ನಿತ್ಯ ಸೇವಿಸುವುದರಿಂದ ಸ್ವಾಸ್ಥ್ಯ ಸಂರಕ್ಷಣೆಯಾಗುವುದರ ಜತೆಗೆ ಇನ್ನೂ ಉತ್ಪತ್ತಿಯೇ ಆಗದಿರುವ ರೋಗಗಳನ್ನೂ ಇದು ತಡೆಗಟ್ಟುತ್ತದೆ. ಸ್ವಾಸ್ಥ್ಯವೆಂಬ ಸ್ವಾತಂತ್ರ್ಯವನ್ನು ಅನುಭವಿಸಲು ಇನ್ನೇನು ಬೇಕು ಹೇಳಿ?!

ಪ್ರತಿಸ್ಪಂದನ

ಶಂಕರನಾರಾಯಣ ಭಟ್, ಮಾಡಗೇರಿ

ವ್ಯಾಖ್ಯಾನ ಬದಲಾಗಬೇಕಿದೆ

ಸ್ವತಃ ಒಬ್ಬ ಶಿಕ್ಷಕರಾಗಿರುವ ಬಸವನಗೌಡ ಹೆಬ್ಬಳಗೆರೆ ಅವರು ‘ಮಕ್ಕಳನ್ನು ಸುಶಿಕ್ಷಿತರನ್ನಾಗಿ ರೂಪಿಸಬೇಕಾದ ಕಾಲಘಟ್ಟವಿದು’ ಶೀರ್ಷಿಕೆಯ ತಮ್ಮ ಲೇಖನದಲ್ಲಿ (ಮೇ 7) ನಿಜವಾದ ಶಿಕ್ಷಣ ಅಂದರೇನು ಎಂಬುದನ್ನು ಸರಳ–ಸುಂದರವಾಗಿ ನಿರೂಪಿಸಿ ದ್ದಾರೆ ಹಾಗೂ ವಾಸ್ತವವನ್ನೂ ತಿಳಿಹೇಳಿದ್ದಾರೆ. ಅವರು ಕೊಟ್ಟ ಸಾಮಾನ್ಯ ಉದಾಹರಣೆಯೇ ಶಿಕ್ಷಣದ ಮಹತ್ವವನ್ನು ಸಾರು–ವಂತಿದೆ. ಬೇರೆ ಬೇರೆ ಹಣ್ಣುಗಳ ಸಸಿಗಳನ್ನು ಒಂದೆಡೆ ಇಟ್ಟು, ‘ಇವನ್ನು ಮನೆಗೆ ಕೊಂಡೊಯ್ದು ಬೆಳೆಸಿರಿ’ ಅಂದಾಗ ತಮ್ಮನ್ನು ತಾವು ಜಾಣರೆಂದೇ ಭಾವಿಸಿದ್ದ ವಿದ್ಯಾರ್ಥಿಗಳು ಆ ಸಸಿಗಳ ಕಡೆಗೆ ಲಕ್ಷ್ಯವನ್ನೇ ಕೊಡದಿದ್ದುದು, ಅದೇ ‘ಓದಿನಲ್ಲಿ

ಸಾಧಾರಣ’ ಎನಿಸಿಕೊಂಡಿದ್ದ ವಿದ್ಯಾರ್ಥಿಗಳು ಗಿಡಗಳನ್ನು ಮನೆಗೆ ಒಯ್ದಿದ್ದು, ‘ಪರಿಸರದ ಬಗ್ಗೆ ನಿಬಂಧ ಬರೆಯಿರಿ’ ಎಂದಾಗ ಸಸಿಗಳ ತಂಟೆಗೇ ಹೋಗದಿದ್ದ ತಥಾಕಥಿತ ‘ಜಾಣ’ ವಿದ್ಯಾರ್ಥಿಗಳು ಚೆನ್ನಾಗಿ ಬರೆದಿದ್ದು– ಈ ಉದಾಹರಣೆಯನ್ನು ಲೇಖಕರು ಮನಮುಟ್ಟುವಂತೆ ವಿವರಿಸಿದ್ದಾರೆ.

ಇದು ನಮ್ಮ ಇಂದಿನ ಶಿಕ್ಷಣ ಪದ್ಧತಿಯ ಸ್ಥಿತಿಗತಿಗೆ ಒಂದು ಜೀವಂತ ಉದಾಹರಣೆಯೂ ಹೌದು. ಶಿಕ್ಷಣ ಅಂದರೆ ಅಂಕಗಳಿಸುವುದು, ಉನ್ನತ ಉದ್ಯೋಗ ಪಡೆದು ಕೈತುಂಬಾ ಹಣ ಸಂಪಾದಿಸುವುದು ಅಂದುಕೊಳ್ಳುವವರ ಸಂಖ್ಯೆಯೇ ಈಗ ಹೆಚ್ಚು. ತಾವು ಕಲಿತಿದ್ದು ಬದುಕಿಗೆ ಯಾವ ರೀತಿಯಲ್ಲಿ ಸಹಾಯವಾದೀತು, ಸಮಾಜದ ಹಿತದೃಷ್ಟಿಯಿಂದ ಎಷ್ಟು ಉಪಯೋಗಕ್ಕೆ ಬಂದೀತು ಎಂಬುದರ ಗಂಧ–ಗಾಳಿಯೇ ಇಲ್ಲದವರು ಹೆಚ್ಚುತ್ತಿದ್ದಾರೆ. ಪರಿಸರಕ್ಕೆ ಮುಖ್ಯವಾದದ್ದು ಗಿಡ–ಮರಗಳ ರಕ್ಷಣೆ ಎಂಬ ಸಾಮಾನ್ಯ ಅರಿವನ್ನು ಬದುಕಿಗೆ ಅನ್ವಯಿಸದ ‘ಪುಸ್ತಕದ ಬದನೆಕಾಯಿ’ಗಳಿಗೆ ನಿಬಂಧ ಬರೆಯುವಲ್ಲಿ ಯಾವ ತೊಡಕೂ ಆಗಲಿಲ್ಲ! ಎಂಥ ವಿಪರ್ಯಾಸ ನೋಡಿ?!

ಹೆಚ್ಚು ಓದಿದವರೆಲ್ಲ ‘ಸುಶಿಕ್ಷಿತರು’ ಎನ್ನಲೂ ಆಗದು. ಓದಿ, ಪರೀಕ್ಷೆ ಬರೆದು, ಹೆಚ್ಚು ಅಂಕ ಗಿಟ್ಟಿಸಿಕೊಂಡು, ಉದ್ದುದ್ದ ಸರ್ಟಿಫಿಕೇಟ್ ಹೊಂದಿಯೂ ಉದ್ಯೋಗಕ್ಕಾಗಿ ಅಲೆದಾಡುತ್ತಿರುವ ಇಂದಿನ ನಿರುದ್ಯೋಗಿಗಳ ಸಂಖ್ಯೆಯೇ ಇದನ್ನು ಹೇಳುತ್ತದೆ. ಒಂದು ಸಾಮಾನ್ಯ ಸಮೀಕ್ಷೆ ನಡೆಸಿದರೂ ವಾಸ್ತವವೇನು ಎಂಬುದು ಅರಿವಾಗುತ್ತದೆ. ಸರ್ಟಿಫಿಕೇಟ್ ಹೊಂದಿದ ಹೆಚ್ಚಿನವರಿಗೆ ಕೆಲಸದ ಮಾಹಿತಿಯೂ ಇರುವುದಿಲ್ಲ, ಕೆಲಸ ಮಾಡುವ ಮನಸ್ಸೂ ಇರುವುದಿಲ್ಲ. ಇಂಥವರನ್ನು ‘ನಿರುದ್ಯೋಗಿಗಳು’ ಅಂತಲೂ ಕರೆಯಬಾರದು; ಯಾರಿಗೆ ಕೆಲಸ ಮಾಡುವ ಇಚ್ಛೆಯಿದ್ದೂ ಅವಕಾಶ ಸಿಗುವುದಿಲ್ಲವೋ ಅಂಥವರಷ್ಟೇ ನಿರುದ್ಯೋಗಿಗಳು. ಹಾಗೆ ನೋಡಿದರೆ, ಶಾಲಾ–ಕಾಲೇಜಿನ ಪರೀಕ್ಷೆಗಳಲ್ಲಿ ಉತ್ತಮ ಅಂಕವನ್ನೇನೂ ಪಡೆಯದವರೇ ಬದುಕಿನ ಪರೀಕ್ಷೆಯಲ್ಲಿ ಯಶಸ್ವಿಯಾಗಿರುವ ಸಾಕಷ್ಟು ಉದಾಹರಣೆಗಳಿವೆ. ಲೇಖಕರು ಹೇಳಿದಂತೆ, ‘ಹೆಚ್ಚು ಓದಿದವರು’ ಎನಿಸಿಕೊಂಡ ಕೆಲವರು ಸಮಾಜಕ್ಕೆ ಮುಳುವಾಗುತ್ತಿದ್ದಾರೆ.

ಇಂದು ಶಿಕ್ಷಣವೂ ವ್ಯಾಪಾರಿ ಸರಕಾಗಿಬಿಟ್ಟಿದೆ. ‘ನೂರಕ್ಕೆ ನೂರು ಫಲಿತಾಂಶ ತರುವ ಶಿಕ್ಷಣ ಸಂಸ್ಥೆ’, ‘ಹೆಚ್ಚು ರ‍್ಯಾಂಕ್‌ಗಳನ್ನು ಪಡೆದ ಶಿಕ್ಷಣ ಸಂಸ್ಥೆ’ ಎಂಬ ಜಾಹೀರಾತುಗಳು ಯಾವುದರ ಸಂಕೇತ? ಶಿಕ್ಷಣವು ಒಂದು ಮಾರಾಟದ ವಸ್ತುವಾಗಿರುವುದರ ಪರಿಣಾಮ ವಿದು. ಇಲ್ಲಿ ‘ಬ್ರ್ಯಾಂಡ್’ ಇಮೇಜಿಗೇ ಆದ್ಯತೆ. ಹೀಗಾಗಿ ಅನವಶ್ಯಕ ಪೈಪೋಟಿ, ಬ್ರ್ಯಾಂಡ್–ವಾರ್! ಶಿಕ್ಷಣದ ನಿಜವಾದ ವ್ಯಾಖ್ಯಾನವೇ ಬದಲಾಗಬೇಕಾದರ ಜರೂರಿದೆ. ಅದು ಆಗುವುದೆಂದು? ಕಾದು ನೋಡೋಣ…

(ಲೇಖಕರು ಹವ್ಯಾಸಿ ಬರಹಗಾರರು)

ಏಕ್ ಚುಟ್ಕೀ ‘ಸಿಂದೂರ್’ ಕೀ ಕೀಮತ್ ತುಮ್ ಕ್ಯಾ ಜಾನೋ ‘ಮುನೀರ್’ ಬಾಬು?!

ಸಿಂದೂರ–ಸಮರ

ಯಗಟಿ ರಘು ನಾಡಿಗ್
naadigru@gmail.com

ಏಕ್ ಚುಟ್ಕೀ ಸಿಂದೂರ್ ಕಿ ಕೀಮತ್ ತುಮ್ ಕ್ಯಾ ಜಾನೋ ರಮೇಶ್ ಬಾಬು? ಈಶ್ವರ್ ಕಾ ಆಶೀರ್ವಾದ್ ಹೋತಾ ಹೈ ಏಕ್ ಚುಟ್ಕೀ ಸಿಂದೂರ್ । ಸುಹಾಗನ್ ಕೆ ಸರ್ ಕಾ ತಾಜ್ ಹೋತಾ ಹೈ ಏಕ್ ಚುಟ್ಕೀ ಸಿಂದೂರ್। ಹರ್ ಔರತ್ ಕಾ ಖ್ವಾಬ್ ಹೋತಾ ಹೈ ಏಕ್ ಚುಟ್ಕೀ ಸಿಂದೂರ್॥ (ಒಂದು ಚಿಟಿಕೆ ಸಿಂದೂರದ ಮೌಲ್ಯ ನಿಮಗೆ ತಿಳಿದಿದೆಯೇ ರಮೇಶ್ ಬಾಬು? ಒಂದು ಚಿಟಿಕೆ ಸಿಂದೂರವು ಈಶ್ವರನ ಆಶೀರ್ವಾದವಾಗಿರುತ್ತದೆ, ಒಂದು ಚಿಟಿಕೆ ಸಿಂದೂರವು ವಿವಾಹಿತೆಯೊಬ್ಬಳ ತಲೆಯ ಮೇಲಿನ ಕಿರೀಟವಾಗಿರುತ್ತದೆ, ಒಂದು ಚಿಟಿಕೆ ಸಿಂದೂರವು ಪ್ರತಿಯೊಬ್ಬ ಮಹಿಳೆಯ ಕನಸಾಗಿರುತ್ತದೆ).

ಪಾಕಿಸ್ತಾನದ ಸೇನಾ ಮುಖ್ಯಸ್ಥರಾದ ಅಸಿಮ್ ಮುನೀರ್ ಅವರೇ, ನಿಮಗೆ ಹೀಗೊಂದು ಬಹಿರಂಗ ಪತ್ರ ಬರೆಯಲು ಸಮಯ ಹಾಳುಮಾಡಬೇಕಾಗುವಂಥ ಸಂದರ್ಭ ನಮಗೆ ಒದಗುತ್ತದೆ ಅಥವಾ ಅಂಥದೊಂದು ದುಸ್ಥಿತಿ ನಿಮ್ಮದಾಗುತ್ತದೆ ಎಂದು ನಾನಾಗಲೀ, ನನ್ನಂಥ ಕೋಟ್ಯಂತರ ದೇಶಪ್ರೇಮಿ ಭಾರತೀಯರಾಗಲೀ ಅಂದಾಜು ಮಾಡಿರಲಿಲ್ಲ. ಆದರೆ ಅಂಥ ಸಂದರ್ಭ ಬಂದೇಬಿಟ್ಟಿತು ನೋಡಿ! ಮೇಲೆ ಉಲ್ಲೇಖಿಸಿರುವುದು ಶಾರುಖ್ ಖಾನ್ ನಟಿಸಿರುವ ‘ಓಂ ಶಾಂತಿ ಓಂ’ ಎಂಬ ಹಿಂದಿ ಚಲನಚಿತ್ರದ ಸಂಭಾಷಣೆ. ‘‘ಭಾರತೀಯ ಮಹಿಳೆಯೊಬ್ಬಳು ತನ್ನ ಹಣೆಯಲ್ಲಿ ಅಥವಾ ಶಿರದಲ್ಲಿ ಧರಿಸುವ ಸಿಂದೂರದ ಮೌಲ್ಯ ಮತ್ತು ಮಹತ್ವ ತುಂಬಾ ಉನ್ನತವಾದುದು; ನಿಮ್ಮಂಥ ಸಾಮಾನ್ಯರು ಇದನ್ನು ಅರ್ಥಮಾಡಿಕೊಳ್ಳಲಾರರು’’ ಎಂಬುದಾಗಿ ಕಥಾನಾಯಕಿಯು ತನ್ನೆದುರು ನಿಂತಿರುವ ಖಳನಾಯಕನಿಗೆ ಹೇಳುವ ಮಾತಿದು. ಬಾಲಿವುಡ್ ಸಿನಿಮಾಗಳು ಪಾಕಿಸ್ತಾನದಲ್ಲೂ ಜನಪ್ರಿಯವೇ, ಈ ಸಿನಿಮಾವನ್ನು ನೀವೂ ನೋಡಿರುತ್ತೀರಿ ಎಂದು ಭಾವಿಸುವೆ…

ಎಂಥಾ ವಿಚಿತ್ರ! ಮೇಲಿನ ದೃಶ್ಯವನ್ನೇ ಮರುರೂಪಿಸುವುದಾದರೆ, ‘ಓಂ ಶಾಂತಿ ಓಂ’ ಮಂತ್ರವನ್ನೇ ಅನುಗಾಲವೂ ಅನುಕ್ಷಣವೂ ಪಠಿಸುತ್ತಾ ಬಂದಿರುವ ಭರತಭೂಮಿಯೆಂಬ ಭವ್ಯನಾಡಿಗೆ, ಅದರ ಒಡಲನ್ನು ತರಿದುಕೊಂಡು ಹುಟ್ಟಿದ್ದ ಪಾಕಿಸ್ತಾನ ಎಂಬ ನಿಮ್ಮ ಪರಮಪಾತಕ ದೇಶವೇ ಮಗ್ಗುಲಮುಳ್ಳು ಆದಂತೆಯೇ, ಪಹಲ್ಗಾಮ್‌ನಲ್ಲಿ ಪತಿಯೊಂದಿಗೆ ವಿಹರಿಸಲು ಬಂದಿದ್ದ ಅಮಾಯಕ ಭಾರತೀಯ ನಾರಿಯರ ಪಾಲಿಗೆ ನೀವು ಖಳನಾಯಕರಾಗಿಬಿಟ್ಟಿರಿ. ನೀವು ಪೋಷಿಸಿದ ಉಗ್ರರು, ಆ ಮಹಿಳೆಯರ ಕಣ್ಣೆದುರೇ ಅವರ ಪತಿದೇವರನ್ನು ಹತ್ಯೆಗೈದು ಅವರ ‘ಸಿಂದೂರ’ಭಾಗ್ಯವನ್ನು ಕಸಿದುಕೊಳ್ಳುವುದಕ್ಕೆ ನೀವು ಕಾರಣರಾಗಿಬಿಟ್ಟಿರಿ. ಹೀಗಾಗಿ, ಅಂದಿನ ಹತ್ಯಾಕಾಂಡದ ಸಂತ್ರಸ್ತ ಮಹಿಳೆಯರು ಮಾತ್ರವಲ್ಲದೆ, ಒಂದಿಡೀ ಭಾರತದ ಮಹಿಳೆಯರು ನಿಮ್ಮನ್ನು ಈಗ ಕೇಳುತ್ತಿದ್ದಾರೆ– ‘‘ಏಕ್ ಚುಟ್ಕೀ ‘ಸಿಂದೂರ್’ ಕೀ ಕೀಮತ್ ತುಮ್ ಕ್ಯಾ ಜಾನೋ ‘ಅಸಿಮ್ ಮುನೀರ್’ ಬಾಬು?’’ ಅಂತ. ಈ ಪ್ರಶ್ನೆಗೆ ಉತ್ತರಿಸುವ ಜ್ಞಾನವಾಗಲೀ, ತಾಕತ್ತಾಗಲೀ ನಿಮಗಿದೆಯಾ? ಹುಲಿಯಂತೆ ಬೊಬ್ಬಿಟ್ಟು ಇಲಿಯಂತೆ ಬಂಕರ್‌ನಲ್ಲಿ ಅಡಗಿ ಕುಳಿತುಕೊಳ್ಳುವ ನಿಮಗೆಲ್ಲಿಂದ ಬರಬೇಕು ಅಂಥ ಶಕ್ತಿ…!!

ಮುನೀರ್, ನಿಮಗೆ ನೆನಪಿದೆಯಾ? ನಿಮ್ಮವರ ಚಿತಾವಣೆಯಿಂದಾಗಿ ಕಾಲಾನುಕಾಲಕ್ಕೆ ಭಾರತದ ಗಡಿಭಾಗದಲ್ಲಿ ಒಂದಿಷ್ಟು ಘರ್ಷಣೆಗಳು, ಉಗ್ರರ ಒಳನುಸುಳಿಕೆಗಳು, ವಿಧ್ವಂಸಕ ಕೃತ್ಯಗಳು ನಡೆಯುತ್ತಿದ್ದುದುಂಟು ಮತ್ತು ಅದಕ್ಕೆ ಯಥೋಚಿತ ರೀತಿಯಲ್ಲಿ ಭಾರತವೂ ತಿರುಗೇಟು–ತಪರಾಕಿ ನೀಡಿದ್ದುಂಟು. ಆದರೆ, ಇತ್ತೀಚೆಗೆ ಪಹಲ್ಗಾಮ್‌ನಲ್ಲಿ ನಿಮ್ಮ ಉಗ್ರರು ಬರೋಬ್ಬರಿ 26 ಮಂದಿಯ ಮಾರಣಹೋಮ ನಡೆಸಿ, ಹೆಂಗೆಳೆಯರ ‘ಸಿಂದೂರ’ ಅಳಿಸಿದರಲ್ಲಾ? ಅದಕ್ಕೆ ಕುಮ್ಮಕ್ಕು ನೀಡಿದ್ದು ಯಾವುದು ಗೊತ್ತೇ? ನೀವಾಡಿದ ತುಟಿಮೀರಿದ ಮಾತುಗಳು…

ಹೌದು, ಒಮ್ಮೆ ನೆನಪಿಸಿಕೊಳ್ಳಿ… ನೆನಪಾಗುತ್ತಿಲ್ಲವೇ? ಅದೂ ನಿಜವೇ! ನಿಮಗೆ ಜೀರ್ಣಶಕ್ತಿ ಜಾಸ್ತಿ, ಜ್ಞಾಪಕಶಕ್ತಿ ಕಮ್ಮಿ… ನಾನೇ

ನೆನಪಿಸಿಬಿಡುತ್ತೇನೆ! ಪಹಲ್ಗಾಮ್ ದಾಳಿಗೂ ಸ್ವಲ್ಪ ಮೊದಲು ನಿಮ್ಮ ನೆಲದಲ್ಲಿ ನಿಂತು ನೀವು ಮಾಡಿದ ಪ್ರಚೋದನಕಾರಿ ಭಾಷಣದಲ್ಲಿ, ‘‘ಕಾಶ್ಮೀರವು ಪಾಕಿಸ್ತಾನದ ಕತ್ತಿನ ರಕ್ತನಾಳ’’ ಎಂದು ಬಡಬಡಿಸಿಬಿಟ್ಟಿರಿ. ಮುಸ್ಲಿಮರು ಮತ್ತು ಹಿಂದೂಗಳ ನಡುವಿನ ಧಾರ್ಮಿಕ–ಸಾಂಸ್ಕೃತಿಕ ವ್ಯತ್ಯಾಸಗಳನ್ನು ಒತ್ತಿಹೇಳಿ ‘ದ್ವಿರಾಷ್ಟ್ರ ಸಿದ್ಧಾಂತ’ವನ್ನು ಪುನರುಚ್ಚರಿಸಿದಿರಿ. ಉಗ್ರಗಾಮಿ ಗುಂಪುಗಳು ತಮ್ಮ ಹೇಯಕೃತ್ಯವನ್ನು ನಡೆಸಲು ನಿಮ್ಮೀ ಹೇಳಿಕೆಯೇ ‘ನಾಯಿಶಿಳ್ಳೆ’ಯಂತೆ ಸಂಜ್ಞೆ ಮಾಡಿಬಿಟ್ಟಿತು. ನಿಮ್ಮ ಈ ಪ್ರಚೋದನಕಾರಿ ಮಾತು, ನಿಮಗಿಂತಲೂ ಸಾಕಷ್ಟು ವರ್ಷ ಮೊದಲೇ ಪಾಕಿಸ್ತಾನದಲ್ಲಿ ಅಬ್ಬರಿಸಿ ಅಸ್ತಿತ್ವವನ್ನೇ ಕಳೆದುಕೊಂಡ, ನಿಮ್ಮ ರೀತಿಯಲ್ಲೇ ‘ಭಾರತ–ವಿರೋಧಿ’ ಚಿತ್ತಸ್ಥಿತಿಯನ್ನು ಹೊಂದಿದ್ದ ‘ಜಿಯಾ–ಉಲ್–ಹಕ್’ ಎಂಬ ಸೇನಾಧಿಕಾರಿಯ ಮಾತುಗಳನ್ನೇ ನೆನಪಿಸುವಂತಿತ್ತು. ಕಾಶ್ಮೀರ ಕಣಿವೆಯಲ್ಲಿ ಮೈಚೆಲ್ಲಿಕೊಂಡಿರುವ ನಿಮ್ಮ ಉಗ್ರರಿಗೆ ಆ ಮಾತುಗಳು ಪರೋಕ್ಷ ಸೂಚನೆಯಂತೆ ರವಾನೆಯಾಗಿ, ಹಿಂಸಾಚಾರ ಎಸಗಲು ವೇಗವರ್ಧಕವಾಗಿ ಪರಿಣಮಿಸಿಬಿಟ್ಟವು. ಕಾಶ್ಮೀರದ ಕೇಸರ ಪುಷ್ಪಗಳ ‘ಸುಗಂಧ’ಭರಿತ ಗಾಳಿಯ ಬದಲಿಗೆ ಮದ್ದು–ಗುಂಡುಗಳ ‘ಗಂಧಕ’ದ ಗಾಳಿಯನ್ನೇ ಉಸಿರಾಡುವ ಆ ಉಗ್ರರು ಪೈಶಾಚಿಕ ಕೃತ್ಯವನ್ನು ಮೆರೆದೇಬಿಟ್ಟರು… ಈ ಹತ್ಯಾಕಾಂಡದ ನಂತರವಾದರೂ ನಿಮ್ಮ ನರವಿಲ್ಲದ ನಾಲಿಗೆ ಸುಮ್ಮನಿರಲಿಲ್ಲ. ‘‘ಪಹಲ್ಗಾಮ್ ಹತ್ಯಾಕಾಂಡದ ನಂತರ ಭಾರತ ನಡೆಸುವ ಯಾವುದೇ ಸೇನಾ ಕಾರ್ಯಾಚರಣೆಗೆ ಅಷ್ಟೇ ಕ್ಷಿಪ್ರವಾಗಿ ಮತ್ತು ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡುತ್ತೇವೆ’’ ಎನ್ನುವ ಮೂಲಕ ಭಾರತೀಯ ಸೇನಾ ವ್ಯವಸ್ಥೆಯ ಸ್ವಾಭಿಮಾನವನ್ನೇ ನೀವು ಕೆಣಕಿಬಿಟ್ಟಿರಿ. ಇನ್ನು, ನಿಮ್ಮ ದೇಶದ ಮತ್ತೊಬ್ಬ ತಥಾಕಥಿತ ಸೇನಾವೀರನಂತೂ, ‘‘ನಾವು ಪರಮಾಣು ಬಾಂಬ್ ಅನ್ನು ಇಟ್ಟುಕೊಂಡಿರುವುದು ಪ್ರದರ್ಶನಕ್ಕಲ್ಲ, ಭಾರತದ ಮೇಲೆ ಪ್ರಯೋಗಿಸಲಿಕ್ಕೆ..’’ ಎಂದು ಉತ್ತರಕುಮಾರನ ಪೌರುಷವನ್ನು ತೋರಿಬಿಟ್ಟರು. ಈ ಮಾತನ್ನು ಕೇಳಿಸಿಕೊಂಡ ಭಾರತೀಯರಿಗೆ ‘‘ನವಿಲನ್ನು ನೋಡಿ ಕೆಂಭೂತ ತನ್ನ ಪುಕ್ಕವನ್ನು ತರಿದುಕೊಂಡಿತಂತೆ!’’ ಎಂಬ ಜಾಣನುಡಿ ನೆನಪಾಗಿದ್ದು ಸುಳ್ಳಲ್ಲ…

ಅಂದು ಪಹಲ್ಗಾಮ್‌ನಲ್ಲಿ ತನ್ನ ಕಣ್ಣೆದುರೇ ಪತಿಯನ್ನು ಕೊಂದ ಉಗ್ರನೊಬ್ಬನಿಗೆ ಪತ್ನಿಯು, ‘‘ನಮ್ಮನ್ನೇಕೆ ಉಳಿಸಿದೆ? ನನ್ನನ್ನೂ ನನ್ನ ಮಗನನ್ನೂ ಕೊಂದುಬಿಡು’’ ಎಂದಿದ್ದಕ್ಕೆ ಆ ಪರಮಪಾತಕಿ ಉಗ್ರ, ‘‘ನೀನು ಹೋಗಿ ಇದನ್ನು ನಿಮ್ಮ ಪ್ರಧಾನಿ ಮೋದಿಯವರಿಗೆ ಹೇಳಲಿ ಎಂದೇ ನಿನ್ನನ್ನು ಉಳಿಸಿದ್ದೇನೆ’’ ಎಂಬ ದುರಹಂಕಾರದ ಮಾತಾಡಿದ. ‘ಸಿಂದೂರ’ ಕಳೆದುಕೊಂಡ ಆ ಸಂತ್ರಸ್ತೆಯ ಅಳಲು ಅರಣ್ಯರೋದನವಾಗದೆ, ಮೋದಿಯವರನ್ನೂ ತಲುಪಿತು. ಭಾರತೀಯ ಮಹಿಳೆಯರ ‘ಸಿಂದೂರ’ವನ್ನು ಅಳಿಸಿದವರನ್ನೇ ಅಳಿಸಿಹಾಕುವ ಕಾರ್ಯಾಚರಣೆಗೆ ಮೋದಿಯವರು ಕಂಕಣತೊಟ್ಟು ಸ್ವತಃ ಅದಕ್ಕೆ ‘ಆಪರೇಷನ್ ಸಿಂದೂರ’ ಎಂದೇ ಹೆಸರಿಟ್ಟರು. ಸೇನೆಯವರು ವ್ಯೂಹಾತ್ಮಕ ಕಾರ್ಯತಂತ್ರವನ್ನು ಹೆಣೆದೇಬಿಟ್ಟರು. ಮುಂದಿನದ್ದು ನಿಮಗೆ ಗೊತ್ತೇ ಇದೆ ಅಸಿಮ್ ಮುನೀರ್‌ಜೀ….

ಭಾರತವನ್ನು ಕೆಣಕಿದ್ದಕ್ಕೆ ಆದ ಗಾಯಗಳನ್ನು ನೆಕ್ಕಿಕೊಳ್ಳುತ್ತಾ ಬಂಕರ್‌ನಲ್ಲಿ ಅಡಗಿ ಕುಳಿತಿರುವ ನೀವು ಒಂದೊಮ್ಮೆ ಅಲ್ಲಿ ಟಿವಿ ವ್ಯವಸ್ಥೆ ಇದ್ದರೆ, ನಿಮ್ಮ ಒಂದು ಕೊಬ್ಬಿನ ಮಾತಿನಿಂದ ಪಾಕಿಸ್ತಾನಕ್ಕೆ ಎಂಥ ದುರವಸ್ಥೆಯನ್ನು ತಂದಿಟ್ಟದ್ದೀರಿ ಎಂಬುದರ ದೃಶ್ಯಾವಳಿಯನ್ನು ಈಗಾಗಲೇ ನೋಡಿರುತ್ತೀರಿ… ಆದರೂ ಮತ್ತೊಮ್ಮೆ ಹೇಳುತ್ತೇನೆ ಕೇಳಿ. ನಿಮ್ಮ ಪಾಕಿಸ್ತಾನದ ಹೆಮ್ಮೆಯೆನಿಸಿದ್ದ ರಾವಲ್ಪಿಂಡಿ, ಲಾಹೋರ್ ಸೇರಿದಂತೆ ಸಾಕಷ್ಟು ನಗರಗಳಿಗೆ ಭಾರತೀಯ ಸೇನಾಯೋಧರು ನುಗ್ಗಿ ನುಗ್ಗಿ ಹೊಡೆದಿದ್ದಾರೆ, ನಿಮ್ಮ ಯುದ್ಧ ವಿಮಾನಗಳನ್ನು, ಡ್ರೋನ್ ಎಂಬ ಆಟಿಕೆಗಳನ್ನು ಪುಡಿಗಟ್ಟಿದ್ದಾರೆ, ಕಟ್ಟಡಗಳನ್ನು ಧ್ವಂಸಮಾಡಿದ್ದಾರೆ. ತನ್ನ ಜನರಿಗೆ ಪಡಿತರ ಗೋಧಿಹಿಟ್ಟನ್ನೂ ಹಂಚಲಾಗದೆ ಜಗತ್ತಿನೆದುರು ಭಿಕ್ಷಾಪಾತ್ರೆ ಹಿಡಿದು ನಿಂತಿರುವ, ಆರ್ಥಿಕ ಕುಸಿತವನ್ನು ಭರಿಸಲಾಗದೆ ಕತ್ತೆಗಳನ್ನು ವಿದೇಶಗಳಿಗೆ ರಫ್ತುಮಾಡಿ ಚಿಲ್ಲರೆಕಾಸು ಒಟ್ಟುಮಾಡಬೇಕಾಗಿ ಬಂದಿರುವ ಪಾಕಿಸ್ತಾನ ಎಂಬ ನಿಮ್ಮ ನೆಲ ಈಗ, ನಿಮ್ಮ ಒಡಕು ಬಾಯಿಯಿಂದಾಗಿ ಧರಾಶಾಯಿಯಾಗಿದೆ. ಅದು ಧೂಳಿನಿಂದ ಮತ್ತೆ ಮೇಲಕ್ಕೇಳಲು ತಪಸ್ಸನ್ನೇ ಮಾಡಬೇಕಾಗಿ ಬಂದಿದೆ… ಭಾರತದ ವಿರುದ್ಧ ಕತ್ತಿ ಮಸೆಯುತ್ತಲೇ ಬಂದಿರುವ ಉಗ್ರವಾದಿ ಅಜರ್ ಮಸೂದ್‌ನ ಕುಟುಂಬದ 10 ಜನ ಸದಸ್ಯರು, 4 ಮಂದಿ ಆಪ್ತರು ನಾಶವಾಗಿದ್ದಾರೆ… ಸೇನಾಮುಖ್ಯಸ್ಥರ ಸ್ಥಾನದಿಂದ ನಿಮ್ಮನ್ನು ಕಿತ್ತೊಗೆಯಬೇಕು ಅಂತ ಪಾಕಿಸ್ತಾನದಲ್ಲೇ ಜನದನಿ ತಾರಕಕ್ಕೇರಿದೆ. ನಿಮ್ಮ ಪರಮೋಚ್ಚ ಜನನಾಯಕ ಶೆಹಬಾಜ್ ಷರೀಫ್‌ಗೂ ಇದೇ ಗತಿಯಾದರೆ ಅಚ್ಚರಿಯಿಲ್ಲ..! ‘ಒಂದು ಚಿಟಿಕೆ ಸಿಂದೂರ’ದ ಕಿಮ್ಮತ್ತೇನು ಎಂಬುದು ನಿಮಗೀಗ ಅರ್ಥವಾಗಿರಬೇಕಲ್ಲವೇ ಮುನೀರ್ ಜನಾಬ್…?!!

ನಿಮ್ಮ ದ್ವೇಷ ಭಾಷಣದಲ್ಲಿ ಒಂದು ಕಡೆ ಹಿಂದೂಗಳ ಜೀವನ ಕ್ರಮ, ಧಾರ್ಮಿಕ–ಸಾಂಸ್ಕೃತಿಕ ಮಗ್ಗುಲುಗಳ ಬಗ್ಗೆ ಏನೇನೋ ವಟಗುಟ್ಟಿದಿರಿ ಅಲ್ಲವೇ? ನಿಮಗೆ ಗೊತ್ತಿರದ (ಅಥವಾ ಗೊತ್ತಿದ್ದೂ ಗೊತ್ತಿಲ್ಲದಂತೆ ನಟಿಸುತ್ತಿರುವ!) ಒಂದಷ್ಟು ಅಂಶಗಳನ್ನು ಹೇಳುತ್ತೇನೆ, ಗಮನವಿಟ್ಟು ಕೇಳಿಸಿಕೊಳ್ಳಿ. ನಮ್ಮದು ಹಿಂದೂ ಬಾಹುಳ್ಯದ ರಾಷ್ಟ್ರವಾದರೂ, ಪರಧರ್ಮಗಳ ಜತೆಗಿನ ಸೋದರತ್ವ ಮತ್ತು ಸೌಹಾರ್ದ ಭಾವನೆಗಳಿಗೆ ನಮ್ಮಲ್ಲೇನೂ ಕುಂದು ಉಂಟಾಗಿಲ್ಲ. ನಿಮ್ಮಂಥ ಮತಾಂಧರು ಯಾರನ್ನು/ಯಾವ ರಾಜಕೀಯ ಪಕ್ಷವನ್ನು ಬಾಯಿಗೆ ಬಂದಂತೆ ಟೀಕಿಸುತ್ತೀರೋ ಅವರ ಕಾಲಘಟ್ಟದಲ್ಲಿಯೇ ಎ.ಪಿ.ಜೆ. ಅಬ್ದುಲ್ ಕಲಾಂರಂಥ ಮಹಾನ್ ಸಾಧಕರನ್ನು ಅವರ ‘ಜಾತಿ–ಧರ್ಮ–ಭಾಷೆ–ಬಣ್ಣ’ ಯಾವುದೆಂಬುದನ್ನೂ ಲೆಕ್ಕಿಸದೆ ದೇಶದ ರಾಷ್ಟ್ರಪತಿಯಂಥ ಪರಮೋಚ್ಚ ಸ್ಥಾನದಲ್ಲಿ ಕೂರಿಸಿದ ಉದಾತ್ತ ನಡೆ ಹಿಂದೂಗಳದ್ದು. ದೇಶದ ಜನಸಂಖ್ಯೆಯಲ್ಲಿ ಅಬ್ಬಬ್ಬಾ ಎಂದರೆ ಶೇ.1.75ರಷ್ಟು ಇರಬಹುದಾದ ಸಿಖ್ ಸಮುದಾಯಕ್ಕೆ ಸೇರಿದ ಡಾ. ಮನಮೋಹನ್ ಸಿಂಗ್‌ರನ್ನು ಸಾಕಷ್ಟು ಹಿಂದೆಯೇ ಪ್ರಧಾನಿ ಗದ್ದುಗೆಯಲ್ಲಿ ಪ್ರತಿಷ್ಠಾಪಿಸಿದ ಮಹಾನ್ ದೇಶ ಭಾರತ ಎಂಬುದನ್ನು ಮರೆಯದಿರಿ…

ಮುನೀರ್ ಅವರೇ, ಹಿಂದೂಸ್ತಾನದ ಮಹತ್ತೇನು, ಹಿಂದೂಗಳ ತಾಕತ್ತೇನು ಎಂಬುದನ್ನು ನಿಮಗೆ ವಿವರಿಸಲು ಹೊರಟರೆ ಸಮಯ ಸಾಕಾಗದು, ಬರೆದು ತಿಳಿಸಲು ಹೊರಟರೆ ಪುಟಗಳು ಸಾಲವು. ಭಾರತೀಯ ಮಹಿಳೆಯರು ಧರಿಸುವ ‘ಸಿಂದೂರ’ಕ್ಕೆ ಇರುವ ತಾಕತ್ತನ್ನು ನಿಮಗೆ ಮನವರಿಕೆ ಮಾಡಿಕೊಡಲು ಈ ಪತ್ರದ ಆರಂಭದಲ್ಲಿ ಶಾರುಖ್ ಖಾನ್ ಅಭಿನಯದ ‘ಓಂ ಶಾಂತಿ ಓಂ’ ಚಲನಚಿತ್ರದ ‘ಏಕ್ ಚುಟ್ಕೀ ಸಿಂದೂರ್…’ ಸಂಭಾಷಣೆಯನ್ನು ಉಲ್ಲೇಖಿಸಿರುವೆ. ಈಗ, ಹಿಂದೂಸ್ತಾನದ ಮತ್ತು ಹಿಂದೂಗಳ ಒಂದಿಡೀ ಅಸ್ತಿತ್ವದಲ್ಲಿ ಸ್ಥಾಯಿಯಾಗಿರುವ ಸೌಹಾರ್ದ ಭಾವವನ್ನು ನಿಮಗೆ ಅರ್ಥಮಾಡಿಸಲು ಮತ್ತದೇ ಶಾರುಖ್ ಖಾನ್ ಅಭಿನಯದ (ಮತ್ತು ಭಾರತದ ಓರ್ವ ಹಿಂದೂ ಸೇನಾಧಿಕಾರಿ ಮತ್ತು ಪಾಕಿಸ್ತಾನದ ಹುಡುಗಿಯೊಬ್ಬಳ ನಡುವೆ ಪ್ರೇಮಾಂಕುರವಾಗುವ ಕಥಾನಕವನ್ನು ಒಳಗೊಂಡಿರುವ) ‘ವೀರ್ ಝೂರಾ’ ಚಲನಚಿತ್ರದ ಈ ಹಾಡಿನ ಸಾಲುಗಳನ್ನು ನಿಮ್ಮ ಮುಂದೆ ಮತ್ತೊಮ್ಮೆ ಹರವಿಡುತ್ತಿರುವೆ. ಕೊಂಚ ಸಮಯ ಮಾಡಿಕೊಂಡು ಅದನ್ನು ನೀವು ಓದಿಕೊಂಡಿದ್ದೇ ಆದಲ್ಲಿ, ಭಾರತೀಯ ಮಹಿಳೆಯರ ‘ಸಿಂದೂರ’ದ ತಂಟೆಗೆ ಹೋಗುವ, ಭಾರತದ ಶಾಂತಿ–ನೆಮ್ಮದಿಗಳಿಗೆ ಸಂಚಕಾರ ತರುವ ದುಸ್ಸಾಹಸವನ್ನು ನೀವು ಮುಂದೆಂದೂ ಮಾಡಲಾರಿರಿ.

ಮುನೀರ್‌ಜೀ, ಓದಿ ಅರ್ಥಮಾಡಿಕೊಳ್ಳಿ ಈ ಸಾಲುಗಳನ್ನು:

‘‘ಧರತೀ ಸುನಹರೀ ಅಂಬರ್ ನೀಲಾ ಹರ್ ಮೌಸಮ್ ರಂಗೀಲಾ, ಐಸಾ ದೇಸ್ ಹೈ ಮೇರಾ…। ಬೋಲೆ ಪಪೀಹಾ ಕೋಯಲ್ ಗಾಯೆ, ಸಾವನ್ ಘಿರ್–ಘಿರ್ ಆಯೆ, ಐಸಾ ದೇಸ್ ಹೈ ಮೇರಾ । ಮೇರೆ ದೇಸ್ ಮೆ ಮೆಹಮಾನೋಂ ಕೋ ಭಗವಾನ್ ಕಹಾ ಜಾತಾ ಹೈ, ವೋ ಯಹೀ ಕಾ ಹೋ ಜಾತಾ ಹೈ, ಜೋ ಕಹೀ ಸೇ ಭೀ ಆತಾ ಹೈ…॥’’

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:116

ಸಮಾಚಾರ ಸಣ್ಣದಲ್ಲ

ಗೋಕುಲ ವಿದ್ಯಾಸಂಸ್ಥೆ ಮಾನ್ಯತೆ ರದ್ದು



ಮಂಡ್ಯ: ಕಲುಷಿತ ಆಹಾರ ಸೇವಿಸಿ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ, ತಾಲ್ಲೂಕಿನ ಟಿ.ಕಾಗೇಪುರದ ಗೋಕುಲ ವಿದ್ಯಾಸಂಸ್ಥೆಯ ಮೂರು ಶಾಲೆಗಳ ಮಾನ್ಯತೆಯನ್ನು ಡಿಡಿಪಿಐ ಎಚ್. ಶಿವರಾಮೇಗೌಡ ರದ್ದುಪಡಿಸಿದ್ದಾರೆ. ಮಾರ್ಚ್ 16ರಂದು ಉದ್ಯಮಿಯೊಬ್ಬರು ನೀಡಿದ್ದ ಕಲುಷಿತ ಆಹಾರ ಸೇವಿಸಿ ಮೇಘಾಲಯ ಮೂಲದ ಕೇರ್ಲಾಂಗ್ (13) ಮತ್ತು ನಮೀಬ್ ಮಾಂತೆ (14) ಎಂಬ ವಿದ್ಯಾರ್ಥಿಗಳು ಮೃತಪಟ್ಟಿದ್ದರು. 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದರು. ಶಿಕ್ಷಣ ಇಲಾಖೆಯ ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ಟಿ.ಕಾಗೇಪುರ ಹಾಗೂ ಕಿರುಗಾವಲು ಗೋಕುಲ ವಿದ್ಯಾಸಂಸ್ಥೆಯ ಮಾನ್ಯತೆ ಹಿಂಪಡೆದು ಆ ಮೂರು ಶಾಲೆಗಳ ವಿದ್ಯಾರ್ಥಿಗಳಿಗೆ ಪರ್ಯಾಯ ದಾಖಲಾತಿ ವ್ಯವಸ್ಥೆ ಕಲ್ಪಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಇ. ಉಮಾ ಅವರಿಗೆ ಡಿಡಿಪಿಐ ಎಚ್.ಶಿವರಾಮೇಗೌಡ ಆದೇಶಿಸಿದ್ದಾರೆ. ಮೇಘಾಲಯ ಮೂಲದ 24ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಟಿ.ಕಾಗೇಪುರದ ಗೋಕುಲ ವಿದ್ಯಾಸಂಸ್ಥೆಯಲ್ಲಿ ಅಕ್ರಮವಾಗಿ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಅಲ್ಲದೇ ಬೇರೆ ಶಾಲೆಯ ಹೆಸರಿನಲ್ಲಿ ಅನಧಿಕೃತವಾಗಿ ಎಸ್‌ಎಸ್‌ಎಲ್‌ಸಿವರೆಗೆ ತರಗತಿ ನಡೆಸುತ್ತಿದ್ದರು ಎಂಬ ಆರೋಪ ಕೇಳಿಬಂದಿದೆ.

ಆಪರೇಷನ್ ಸಿಂದೂರ ಯಶಸ್ಸಿಗೆ ಹಾರೈಕೆ | ರಾಜ್ಯಾದ್ಯಂತ ನಾನಾ ಕಡೆಗಳಲ್ಲಿ ಹೋಮ,ಮಸೀದಿಗಳಲ್ಲಿ ವಿಶೇಷ ನಮಾಜ್

ಯೋಧರ ಒಳಿತಿಗಾಗಿ ದೇಗುಲ, ಮಸೀದಿಗಳಲ್ಲಿ ಪ್ರಾರ್ಥನೆ

ಬೆಂಗಳೂರು: ಆಪರೇಷನ್ ಸಿಂದೂರ ಯಶಸ್ವಿ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ದೇವಸ್ಥಾನಗಳಲ್ಲಿ ಸೈನಿಕರ ಒಳಿತಿಗಾಗಿ ವಿಶೇಷ ಪೂಜೆ ನೆರ ವೇರಿಸಲಾಗಿದೆ. ಕಲಬುರಗಿ,ಬೀದರ್, ಕೋಲಾರ,ಮಡಿಕೇರಿ, ಬಾಗಲ ಕೋಟೆ ಜಿಲ್ಲೆಯ ದೇವಾಲಯಗಳಲ್ಲಿ ಹೋಮ, ವಿಶೇಷ ಪೂಜೆ ನಡೆಸಲಾಯಿತು.

ಸೈನಿಕರಿಗಾಗಿ ಆಳಂದನಲ್ಲಿ ವಿಶೇಷ ಪೂಜೆ: ಕಲಬುರಗಿ ಜಿಲ್ಲೆಯ ಆಳಂದ ಪಟ್ಟಣದ ಶ್ರೀ ನಗರೇಶ್ವರ ರಾಮ ಮಂದಿರದಲ್ಲಿ ಆಪರೇಷನ್ ಸಿಂದೂರ ಹೆಸರಿನ ಸೇನಾ ಕಾರ್ಯಾಚರಣೆ ಹಿನ್ನೆಲೆಯಲ್ಲಿ ಭಾರತೀಯ ಸೇನೆಗೆ ಮತ್ತಷ್ಟು ಶಕ್ತಿಯನ್ನು ಭಗವಂತನು ಅನುಗ್ರಹಿಸಿ ಕರಣಿಸಿಲಿ ಎಂದು ಮಾಜಿ ಶಾಸಕ ಸುಭಾಷ್ ಗುತ್ತೇದಾರ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಸೈನಿಕರ ಜತೆ ನಾವು ಇದ್ದೇವೆ : ಬೀದರ್‌ನಲ್ಲಿ ಭಾರತದ ತಂಟೆಗೆ ಬಂದರೆ ಏನಾಗಲಿದೆ ಎಂಬುದನ್ನು ನಮ್ಮ ಸೈನಿಕರು ತೋರಿಸಿದ್ದಾರೆ. ನಮ್ಮ ವೀರ ಸೈನಿಕರಿಗೆ ಆತ್ಮಸ್ಥೈರ್ಯ ತುಂಬಲು ಮತ್ತು ಅವರ ಜೀವಗಳ ರಕ್ಷಣೆಗೆ ಶುಕ್ರವಾರ ವಿಶೇಷ ಪೂಜೆ ಸಲ್ಲಿಸಲಾಗಿದೆ. ಸೈನಿಕರ ಜತೆ ನಾವು ಇದ್ದೇವೆ, ಅಮಾಯಕ ನಾಗರಿಕರನ್ನು ಬಲಿ ಪಡೆವ ಉಗ್ರರನ್ನು ನಾಶ ಮಾಡಲಾಗುತ್ತಿದೆ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷರಾದ ಸೋಮನಾಥ ಪಾಟೀಲ್ ಹೇಳಿದರು. ಬೀದರ್ ದಕ್ಷಿಣ ಕ್ಷೇತ್ರದ ಸುಪ್ರಸಿದ್ಧ ಚಾಂಗಲೇರಾ ವೀರಭದ್ರೇಶ್ವರ ದೇವಸ್ಥಾನದಲ್ಲಿ ಬಿಜೆಪಿ ಮಂಡಲ ವತಿಯಿಂದ ವೀರ ಸೈನಿಕರಿಗೆ ಆತ್ಮಸ್ಥೈರ್ಯ ತುಂಬಲು ವಿಶೇಷ ಪೂಜೆ ಮಾಡಿದರು.

ಮಸೀದಿಯಲ್ಲಿ ಸೈನಿಕರ ಕ್ಷೇಮಕ್ಕೆ ಪ್ರಾರ್ಥನೆ: ಮಡಿಕೇರಿಯಲ್ಲಿ ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂದೂರ ಕಾರ್ಯಾಚರಣೆ ಯಶಸ್ವಿಯಾಗಿದ್ದಕ್ಕೆ ಸೈನಿಕರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಬೇಕು ಎಂದು ನಗರದ ಬದ್ರಿಯಂ ಮಸೀದಿಯಲ್ಲಿ ಮುಸಲ್ಮಾನರು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಧರ್ಮ ಗುರುಗಳಾದ ಹಾಫಿಲ್ ನೌಫಾಲ್ ಸಕಾಫಿ ಅವರ ನೇತೃತ್ವದಲ್ಲಿ ದೇಶದ ಶಾಂತಿ ಸೌಹಾರ್ದತೆಗಾಗಿ ಮತ್ತು ಭಾರತೀಯ ಸೇನೆಯ ಸೈನಿಕರ ಒಳಿತಿಗಾಗಿ ಮುಸಲ್ಮಾನರು ಪ್ರಾರ್ಥಿಸಿದರು.

ಸೈನಿಕರು, ಮೋದಿ ಪರ ಜೈಕಾರ ಕೂಗಿ ಸಂಭ್ರಮ: ಚಾಮರಾಜನಗರದಲ್ಲಿ ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂದೂರ ಯಶ್ವಸಿಗೆ ಬಿಜೆಪಿ ನಗರ ಮಂಡಲ ವತಿಯಿಂದ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವೀರಯೋಧರು, ಪ್ರಧಾನಿ ನರೇಂದ್ರ ಮೋದಿಯವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು ಭಾರತಾಂಬೆ, ಭಾರತೀಯ ಸೈನಿಕರು, ಮೋದಿ ಪರ ಜೈಕಾರ ಕೂಗಿ ಸಂಭ್ರಮಿಸಿದರು. ನೇತೃತ್ವ ವಹಿಸಿದ್ದ ನಗರ ಮಂಡಲ ಅಧ್ಯಕ್ಷ ಶಿವರಾಜ್ ಮಾತನಾಡಿದರು.

ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆ ಸರ್ವ ರೀತಿಯಲ್ಲೂ ಯಶಸ್ಸು ಕಾಣಲಿ ಎಂದು ಧರ್ಮಸ್ಥಳ ಧರ್ಮಾಧಿಕಾರಿ, ಸಂಸದ ಡಾ.ವೀರೇಂದ್ರ ಹೆಗ್ಗಡೆ ಮಂಜುನಾಥನಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ.

ಸೈನಿಕರಿಗೆ ಅಭಿನಂದನೆ: ಮಾರುತೇಶ್ವರನಿಗೆ ಪೂಜೆ

ಬಾಗಲಕೋಟೆಯ ಇಳಕಲ್ ತಾಲೂಕಿನಲ್ಲಿ ಪಾಕಿಸ್ತಾನದ ವಿರುದ್ಧ ನಡೆಯುತ್ತಿರುವ ಯುದ್ಧದ ಈ ಸಂದರ್ಭದಲ್ಲಿ ನಮಗಾಗಿ ತಮ್ಮ ಜೀವವನ್ನು ಲೆಕ್ಕಿಸದೆ ಯುದ್ಧದ ರಣಭೂಮಿಯಲ್ಲಿ ಸನ್ನದ್ಧರಾಗಿ ರುವ ನಮ್ಮ ಹೆಮ್ಮೆಯ ವೀರ ಭಾರತೀಯ ಸೈನಿಕರಿಗೆ ಶಕ್ತಿಯನ್ನು ಬಲವನ್ನು ಕರುಣಿಸಲೆಂದು ಮತ್ತು ದೇಶಕ್ಕೆ ದೇಶದ ಜನರಿಗೆ ಒಳ್ಳೆಯದಾಗ ಲೆಂದು ಶುಕ್ರವಾರ ಇಳಕಲ್ಲ ನಗರದ ಮಾರು ತೇಶ್ವರ ದೇವಸ್ಥಾನದಲ್ಲಿ ಬಿಜೆಪಿ ವತಿಯಿಂದ ವಿಶೇಷ ಪೂಜಾ ಕಾರ್ಯಕ್ರಮ ನಡೆಯಿತು. ಪ್ರಾರ್ಥ ನೆಯನ್ನು ಹುನಗುಂದ ಮತಕ್ಷೇತ್ರದ ಮಾಜಿ ಶಾಸಕ ದೊಡ್ಡನಗೌಡ ಜಿ ಪಾಟೀಲ್ ಸಲ್ಲಿಸಿದರು.



ಇಳಕಲ್ ತಾಲೂಕಿನಲ್ಲಿ ಹುನಗುಂದ ಮತಕ್ಷೇತ್ರದ ಮಾಜಿ ಶಾಸಕ ದೊಡ್ಡನಗೌಡ ಜಿ ಪಾಟೀಲ್ ಭಾರತೀಯ ಸೈನಿಕರಿಗೆ ಶಕ್ತಿ ಕರುಣಿಸಲೆಂದು ಮಾರುತೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಮಾಜ್ ವೇಳೆ ಪ್ರಾರ್ಥನೆ

ದೇಶದ ಸೈನ್ಯ ಮತ್ತು ಸೈನಿಕರ ಆರೋಗ್ಯಕ್ಕೆ ಕೋಲಾರದ ಹಲವು ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಮುಸ್ಲಿಂ ಸಮುದಾಯದವರು ಶುಭ ಹಾರೈಸಿದರು. ಶುಕ್ರ ವಾರದ ಸಾಮೂಹಿಕ ನಮಾಜ್‌ನಲ್ಲಿ ಸೈನಿಕರಿಗಾಗಿ ವಿಶೇಷ ಪ್ರಾರ್ಥನೆ ಮಾಡಿ ಪಾಕಿ ಸ್ತಾನದ ವಿರುದ್ಧ ಸೈನಿಕರಿಗೆ ಶಕ್ತಿ ನೀಡಲು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡರು.

ಭಾರತೀಯ ಸೇನೆಗೆ ಮತ್ತಷ್ಟು ಶಕ್ತಿಯನ್ನು ಭಗವಂತನು ಅನುಗ್ರಹಿಸಿ ಕರಣಿಸಿಲಿ ಎಂದು ಮಾಜಿ ಶಾಸಕ ಸುಭಾಷ್ ಗುತ್ತೇದಾರ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ದಾವಣಗೆರೆ ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿಯ ದೇವಸ್ಥಾನಕ್ಕೆ ಭೇಟಿ ನೀಡಿದ ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ದೇವಿಯ ದರ್ಶನ ಪಡೆದು ನಾಡಿನ ಸುಖ–ಶಾಂತಿ ಹಾಗೂ ಜನರ ಒಳಿತಿಗಾಗಿ ಪ್ರಾರ್ಥಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–11/2024–25/545/2025–26 ದಿನಾಂಕ: 09.05.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ರ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ನಾಗರಾಜ ರೆಡ್ಡಿ ಮತ್ತು ಶ್ರೀ ನಾರಾಯಣ ಸ್ವಾಮಿ	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಾಡ ಅಗ್ರಹಾರ	66	4–23	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು. ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಯಾಗುವುದು ಹಾಗೂ ಸರ್ಕಾರಕ್ಕೆ ಹೆಚ್ಚಿನ ತೆರಿಗೆಗಳು ಸಂಗ್ರಹವಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನೋಟೀಸು / ಪ್ರಕಟಣೆ

ರಾಮಚಂದ್ರೇಗೌಡ ಕೆ.ಸಿ. ಬಿನ್ ಚಿಕ್ಕೇಗೌಡ ವಯಸ್ಸು 54 ವರ್ಷ, ಕಾರ್ಮಿಕ ಸಂಖ್ಯೆ 1163, ವಿಳಾಸ: 356, ಹೊಸಹಳ್ಳಿ ಗ್ರಾಮ, ತುಳಸಿನಗರ, ವಿಶ್ವನೀಡಂ ಪೋಸ್ಟ್, ಬೆಂಗಳೂರು ಉತ್ತರ ಮತ್ತು ಕುಡಿಬಳು ಹಳ್ಳಿ, ಕುಡಿಬಳು ಪೋಸ್ಟ್, ದೇವಲಾಪುರ ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಆದ ನೀವು ಬಗಾಡಿಯಾ ಚೈತ್ರ ಇಂಡಸ್ಟ್ರೀಸ್ ಪೈ.ಲಿ. ಸಂಸ್ಥೆಯಲ್ಲಿ ಆಪರೇಟರ್ ಆಗಿ ಉತ್ಪಾದನೆ ವಿಭಾಗದಲ್ಲಿ ವೃತ್ತಿ ಮಾಡುತ್ತಿದ್ದು ದಿನಾಂಕ : 07–05–2019 ರಿಂದ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ ಎಂದು ನಿಮಗೆ ಷೋಕಾಸ್ ನೋಟೀಸ್ ನೀಡಿ ನಿಮ್ಮ ವಿರುದ್ಧ ಸದರಿ ಆಪಾದನೆ ಮೇಲೆ ವಿಚಾರಣೆ ನಡೆಸಲು **ದಿನಾಂಕ** : 19–05–2025 **ರಂದು ಬೆಳಗ್ಗೆ** 11–30 **ಗಂಟೆಗೆ** ಸಮಯ ನಿಗದಿ ಮಾಡಿದ್ದು ತಾವುಗಳು ಮತ್ತು ತಮ್ಮನ್ನು ಪ್ರತಿನಿಧಿಸುವ ಸಹ ಕಾರ್ಮಿಕನೊಂದಿಗೆ ಕಾರ್ಖಾನೆ ಆವರಣ, ಪಿತ್ತಿ ಇಂಡಸ್ಟ್ರೀಸ್ ಪ್ರೈ.ಲಿ. (ಈ ಹಿಂದೆ ಬಗಾಡಿಯಾ ಚೈತ್ರ ಇಂಡಸ್ಟ್ರೀಸ್ ಪೈ.ಲಿ.) ಎಂದು ಕರೆಯಲಾಗುವ ಪ್ಲಾಟ್ ನಂ. 7 & 8 ಕೆ.ಐ.ಎ.ಡಿ.ಬಿ. ವಸಂತನರಸಾಪುರ, 2ನೇ ಹಂತ ಕೋರಾ ಹೋಬಳಿ, ತುಮಕೂರು ತಾಲ್ಲೂಕು ತುಮಕೂರು ಜಿಲ್ಲೆ ಇಲ್ಲಿ ನಡೆಯುವ ವಿಚಾರಣೆಗೆ ಹಾಜರಾಗಲು ಈ ಮೂಲಕ ತಿಳಿಸಿದೆ. ನೀವು ಹಾಜರಾಗದೆ ಗೈರು ಹಾಜರಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ವರದಿ ನೀಡಲಾಗುವುದು.

ಸಹಿ/–
ಡಾ. ಎಸ್. ರಮೇಶ್
ವಿಚಾರಣಾಧಿಕಾರಿ
ಪಿತ್ತಿ ಇಂಡಸ್ಟ್ರೀಸ್ ಪ್ರೈ.ಲಿ
(ಈ ಹಿಂದೆ ಬಗಾಡಿಯಾ ಚೈತ್ರ, ಇಂಡಸ್ಟ್ರೀಸ್ ಪೈ.ಲಿ.)
ಪ್ಲಾಟ್ ನಂ. 7 & 8 ಕೆ.ಐ.ಎ.ಡಿ.ಬಿ. ವಸಂತನರಸಾಪುರ, 2ನೇ ಹಂತ ಕೋರಾ ಹೋಬಳಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ

ಸ್ಥಳ : ತುಮಕೂರು
ದಿನಾಂಕ : 09/05/2025

ಕ್ಯಾತಮಾರನಹಳ್ಳಿ ಮದರಸಾ ನಿರ್ಮಾಣಕ್ಕೆ ಹೈಕೋರ್ಟ್ ತಡೆ

ಮೈಸೂರು: ಮೈಸೂರಿನ ಕ್ಯಾತಮಾರನಹಳ್ಳಿ ವಿವಾದಿತ ಜಾಗದಲ್ಲಿ ಮದರಸಾ ಮಾಡಲು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಅನುಮತಿ ನೀಡಿ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಕ್ಯಾತಮಾರನಹಳ್ಳಿ ವಿವಾದಿತ ಜಾಗದಲ್ಲಿ ಮದರಸಾ ಮಾಡಲು ಅನುಮತಿ ನೀಡಿ ಹೊರಡಿಸಿದ್ದ ಆದೇಶಕ್ಕೆ ಹೈ ಕೋರ್ಟ್ ತಡೆ ನೀಡಿದ್ದು ಯಥಾಸ್ಥಿತಿ ಕಾಪಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದೆ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ವಕೀಲ ಅ.ಮ ಭಾಸ್ಕರ್, ಈಗಾಗಲೇ ವಿವಾದಿತ ಜಾಗದ ವಿಚಾರಕ್ಕೆ ಕೊಲೆ ಆಗಿದೆ. ಅಲ್ಲದೆ ಮದರಸಾ ಮಾಡಲು ಸ್ಥಳೀಯರ ವಿರೋಧವಿದೆ. ವಿವಾದಿತ ಜಾಗ ವಸತಿ ಪ್ರದೇಶವಾಗಿದ್ದು, ಅಲ್ಲಿ ನರ್ಸರಿ ಅರೇಬಿಕ್ ಶಾಲೆ ತೆರೆಯಲು ಡಿಸಿ ಲಕ್ಷ್ಮೀಕಾಂತ್ ರೆಡ್ಡಿ ಅನುಮತಿ ನೀಡಿದ್ದರು. ಸದ್ಯ ಹೈಕೋರ್ಟ್ ಡಿಸಿ ಅವರ ಆದೇಶಕ್ಕೆ ಮಧ್ಯಂತರ ತಡೆ ನೀಡಿದೆ ಎಂದು ತಿಳಿಸಿದರು.

ಸಂತಸ ಹಂಚಿಕೊಂಡ ಕ್ಯಾತಮಾರನಹಳ್ಳಿ ಗ್ರಾಮಸ್ಥರು: ಹಂಚಿಕೊಂಡ ಕ್ಯಾತಮಾರನಹಳ್ಳಿ ಗ್ರಾಮಸ್ಥರು, ವಿವಾದಿತ ಸ್ಥಳದಲ್ಲಿ ಮದರಸ ನಡೆಸದಂತೆ ಹೈಕೋರ್ಟ್ ತಡೆ ನೀಡಿ ಯಥಾಸ್ಥಿತಿ ಕಾಪಾಡಿಕೊಂಡು ಹೋಗಲು ಸೂಚನೆ ನೀಡಿದೆ. ಇದು ನಮಗೆ ಮೊದಲ ಹಂತದ ಜಯ. ಯಾವುದೇ ಕಾರಣಕ್ಕೂ ಅಲ್ಲಿ ಮದರಸ ತೆರೆಯಬಾರದು. ಈಗಾಗಲೇ ಅದು ಸೂಕ್ಷ್ಮ ಪ್ರದೇಶವಾಗಿದೆ. ಕೋರ್ಟ್ ಆದೇಶವನ್ನ ನಾವು ಗೌರವಿಸುತ್ತೇವೆ ಮತ್ತು ಪಾಲಿಸುತ್ತೇವೆ. ಮುಂದೆ ಏನಾಗುತ್ತದೋ ಅದಕ್ಕೆ ನಮ್ಮ ವಕೀಲರಿದ್ದಾರೆ. ಕಾನೂನು ಹೋರಾಟ ಮುಂದುವರಿಸುತ್ತೇವೆ ಎಂದು ತಿಳಿಸಿದರು.

ವಾಕಿಂಗ್‌ಗೆ ತೆರಳಿದ್ದ ವ್ಯಕ್ತಿಯ ಬರ್ಬರ ಹತ್ಯೆ

ಶಿವಮೊಗ್ಗ: ವಾಕಿಂಗ್‌ಗೆ ತೆರಳಿದ್ದ ವ್ಯಕ್ತಿಯೊರ್ವನನ್ನು ಕೊಲೆ ಮಾಡಿರುವ ಘಟನೆ ಭದ್ರಾವತಿ ತಾಲೂಕಿನ ಕನ್ನೆಕೊಪ್ಪ ಗ್ರಾಮದ ಸರಕಾರಿ ಪ್ರಥಮ ದರ್ಜೆ ಪದವಿ ಕಾಲೇಜು ರಸ್ತೆಯಲ್ಲಿ ನಡೆದಿದೆ. ಹೇಮಣ್ಣ (58) ಕೊಲೆಯಾದವರು.

ಹೇಮಣ್ಣ ಅವರ ಮೇಲೆ ಈ ಹಿಂದೆ ಎರಡು ಬಾರಿ ದಾಳಿ ನಡೆದಿತ್ತು. ಈ ವೇಳೆ, ಅವರು ಬಚಾವ್ ಆಗಿದ್ದರು. ಆದರೆ ಇಂದು ವಾಕಿಂಗ್‌ಗೆ ಒಬ್ಬರೇ ಹೋಗಿರುವುದನ್ನು ಗಮನಿಸಿ ದಾಳಿ ನಡೆಸಿ ಕೊಲೆ ಮಾಡಲಾಗಿದೆ. ಕೊಲೆ ಮಾಡಿದ್ದು ಯಾರು, ಎಷ್ಟು ಜನ ಎಂದು ತಿಳಿದು ಬಂದಿಲ್ಲ. ಘಟನಾ ಸ್ಥಳಕ್ಕೆ ಹೊಳೆಹೊನ್ನೂರು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇದೇ ವೇಳೆ, ಆರೋಪಿಗಳ ಪತ್ತೆಗಾಗಿ ಶೋಧ ಕಾರ್ಯ ಆರಂಭಿಸಿದ್ದಾರೆ. ಕೊಲೆಯಾದ ಹೇಮಣ್ಣ ವ್ಯಾಪಾರಿಯಾಗಿದ್ದು, ಇವರಿಗೆ ಎರಡು ಗಂಡು, ಒಂದು ಹೆಣ್ಣು ಮಗಳಿದ್ದಾಳೆ.

ಟೀಕೆ ಮಾಡುವವರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ

ಸುಹಾಸ್ ಹತ್ಯೆ: ಎನ್‌ಐಎಗೆ ಕೊಡಲು ನನ್ನ ಅಭ್ಯಂತರವಿಲ್ಲ: ಸ್ಪೀಕರ್ ಖಾದರ್

ಮಂಗಳೂರು: ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ ತನಿಖೆಯನ್ನು ಎನ್‌ಐಎ ಗೆ ನೀಡಲು ನಮ್ಮದೇನು ಅಭ್ಯಂತರವಿಲ್ಲ ಎಂದು ವಿಧಾನಸಭೆ ಸ್ಪೀಕರ್ ಯು.ಟಿ ಖಾದರ್ ಹೇಳಿದ್ದಾರೆ.

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆಯನ್ನು ಎನ್‌ಐಎ ಗೆ ನೀಡಬೇಕು ಎಂದು ಬಿಜೆಪಿ ಒತ್ತಾಯಿಸುತ್ತಿರುವ ಹಿನ್ನೆಲೆಯಲ್ಲಿ ಮಾತನಾಡಿ, ಇವರ ಬೇಡಿಕೆಗಳಿಗೆ ಸರಕಾರ ಸ್ಪಂದಿಸುವ ವಿಶ್ವಾಸವಿದೆ. ಈ ಕುರಿತು ಆಡಳಿತ ಪಕ್ಷ, ಪ್ರತಿಪಕ್ಷ ಇದೆ ಅವರವರು ಮಾತನಾಡಿಕೊಳ್ಳಲಿ ಎಂದು ಹೇಳಿದರು. ಪ್ರಕರಣದ ತನಿಖೆಯನ್ನುಎನ್‌ಐಎಗೆ ಕೊಡಲು ನಮ್ಮದೇನು ಅಭ್ಯಂತರವಿಲ್ಲ, ಯಾರು ತನಿಖೆ ಮಾಡಬೇಕೆಂದು ಸರಕಾರ ತೀರ್ಮಾನಿಸಲಿ. ಪ್ರಕರಣದ ಆರೋಪಿಗಳ ಬಂಧನವಾಗಿದೆ. ಕೃತ್ಯ ಎಸಗಿದವರು ತಪ್ಪಿಸಿಕೊಳ್ಳದ ರೀತಿ ಪೊಲೀಸರು ಮಾಡಿದ್ದಾರೆ, ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಪೊಲೀಸರು ಈ ಬಗ್ಗೆ ಕ್ರಮ ವಹಿಸುತ್ತಾರೆ ಅಲ್ಲದೆ ಯಾರನ್ನು ಕೊಲ್ಲುವ ಅಧಿಕಾರ ಯಾರಿಗೂ ಇಲ್ಲ ಹಾಗಾಗಿ ಎಲ್ಲಾ ರೀತಿಯ ತನಿಖೆ ಮಾಡಬೇಕು. ಮುಂದೆ ಯಾರು ಸಹ ಈ ರೀತಿ ಕೃತ್ಯ ಎಸಗಬಾರದು, ಪೊಲೀಸರು ಸಹ ಸರಿಯಾದ ವರದಿಯನ್ನು ಸಲ್ಲಿಸಬೇಕು ಎಂದು ಹೇಳಿದರು.

ತಪ್ಪು ಮಾಡಿದವರನ್ನು ಬೆಂಬಲಿಸುವ ವ್ಯಕ್ತಿ ನಾನಲ್ಲ. ಉದ್ವಿಗ್ನ ವಾತಾವರಣ ನಿಯಂತ್ರಿಸಲು ವಿಷಯ ಮುಚ್ಚಿಡದೆ ಸತ್ಯವನ್ನು ಹೇಳಿದ್ದೇನೆ. ನನಗೆ ಸಿಕ್ಕ ಮಾಹಿತಿಯನ್ನು ಹೇಳಿದ್ದೆ. ಕೊಟ್ಟ ಮಾಹಿತಿಯನ್ನು ಗೌಪ್ಯವಾಗಿ ಇಡದೆ ಜನರ ಮುಂದೆ ಇಟ್ಟಿದ್ದೆ. ಪೊಲೀಸರು ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಂಡಿದ್ದಾರೆ. ದೇವರು, ದೇವರಂತ ಕ್ಷೇತ್ರದ ಜನ, ಆಶೀರ್ವಾದ ಮಾಡುವ ಧಾರ್ಮಿಕ ಮುಖಂಡರು ನಮ್ಮ ಜತೆ ಇರುವಾಗ ಟೀಕೆ ಮಾಡುವವರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.
ಯು.ಟಿ ಖಾದರ್, ಸ್ಪೀಕರ್

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

Website:-www.raichurcity.gov.in E-mail:itstaff_ulb_raichura@yahoo.com
Phone No:08532-226768 Fax No:08532-226316

ಸಂಖ್ಯೆ.ರಾಮಪಾ/ತಾಂತ್ರಿಕ/ಕಾ/ಆ.ಶಾ/ಎಸ್.ಬಿ.ಎಂ–2.0/25/2024–25 ದಿನಾಂಕ: 08–05–2025.

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸ ತಕ್ಕದ್ದು, ಹಾಗೂ ಹೆಚ್ಚಿನ ವಿವಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc. gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಅನುದಾನದ ವಿವರ: ಎಸ್.ಬಿ.ಎಂ 2.0 ಅನುದಾನದಲ್ಲಿ. **ಕಾಮಗಾರಿಗಳ ವಿವರ:** Construction of 52 TPD Material recovery facility Centre (MRF) of PEB Structure at Raichur City Estimate Amount Rs. 5,27,35,558.76. **ಇಂಡೆಂಟ್ ನಂಬರ:** DMA/2024-25/BD/WORK_INDENT 28675/Call-2

ಸಹಿ/– ಆಯುಕ್ತರು
ಮಹಾನಗರ ಪಾಲಿಕೆ, ರಾಯಚೂರು

DIP/RCR/90/KSMCA/90/2025-26

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಂದಾಯ ಕಚೇರಿ ಹು.ಧಾ.ಮ.ಪಾಲಿಕೆ ಹುಬ್ಬಳ್ಳಿ

ನಂ.ಎಚ್‌ಡಿಎಂಸಿ/30/08/ಎಂಕೆಟಿ/2025–26 ದಿನಾಂಕ: 08–05–2025

ವಾಹನಗಳ ಪಾರ್ಕಿಂಗ್ ಬಹಿರಂಗ ಹರಾಜು ಟೆಂಡರ್ ಪ್ರಕಟಣೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಹುಬ್ಬಳ್ಳಿ ಹಾಗೂ ಧಾರವಾಡ ವಿಭಾಗದ ವಿವಿಧ ಪ್ರದೇಶಗಳಲ್ಲಿ ದ್ವಿ–ಚಕ್ರ ಹಾಗೂ ನಾಲ್ಕು–ಚಕ್ರ ವಾಹನಗಳ ಪಾರ್ಕಿಂಗ ಫೀ ವಸೂಲಾತಿ ಕುರಿತು ಹುಬ್ಬಳ್ಳಿಯ ಪಾಲಿಕೆಯ ಸಭಾಭವನದಲ್ಲಿ ದಿನಾಂಕ: **23–05–2025** ರಂದು ಸಮಯ: **11:00** ಗಂಟೆಗೆ ಬಹಿರಂಗ ಹರಾಜು ಮಾಡಲಾಗುತ್ತದೆ. ಹರಾಜಿನ ವಿವರ ಈ ಕೆಳಗಿನಂತಿರುತ್ತದೆ.

SL No	Indent No	HDMC Rate	EMD (In Rupees)
1	HDMC: revenue:parking:package:I	4951177	100000
2	HDMC: revenue:parking:package:III	5441289	100000
3	HDMC: revenue:parking:package:IV	798465	100000
4	HDMC: revenue:parking:package:V	8828078	100000
5	HDMC: revenue:parking:package:VI	899187	100000
6	HDMC: revenue:parking:package:VII	3631775	100000

ಇಚ್ಛೆಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಪಾಲಿಕೆಯ ವೆಬ್‌ಸೈಟ್ http://hdmc.mrc.gov.in/ ನಿಂದ ಪಡೆಯಬಹುದು.

ಸಹಿ/– ಆಯುಕ್ತರು,
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/150/ದೇಶಪಾಂಡೆಪಬ್ಲಿಸಿಟಿ/2025–26

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ

ಸಂಖ್ಯೆ:ತಾಸಾಆ/ಗುಂ/ಹೊಗುಟೆಂ/01/2025-26 ದಿನಾಂಕ :07-05-2025

ಟೆಂಡರ್ ಅಧಿಸೂಚನೆ
(ಇ-ಪ್ರಕ್ಯೂರ್‌ಮೆಂಟ್ ಮುಖಾಂತರ - kppp.karnataka.gov.in)

ವಿಷಯ:- 2025-26ನೇ ಸಾಲಿನ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಟೆಂಡರ್ ಕರೆಯುವ ಬಗ್ಗೆ.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಗುಂಡ್ಲುಪೇಟೆ ಇಲ್ಲಿಗೆ 27-ಗ್ರೂಪ್ ಡಿ, 01-ಕಿರಿಯ ಪ್ರಯೋಗಶಾಲಾ ತಂತ್ರಜ್ಞರು, 01-ಡಾಟಾ ಎಂಟ್ರಿ ಆಪರೇಟರ್ ಮತ್ತು 04-ಸ್ವೀಪರ್/ಗಾರ್ಡ್, ಒಟ್ಟು 33-ಹುದ್ದೆಗಳ ಸೇವೆಯನ್ನು 2025-26ನೇ ಸಾಲಿಗಾಗಿ ಟೆಂಡರು ಕಾರ್ಯಾದೇಶ ನೀಡಿದ ದಿನಾಂಕದಿಂದ 31-03-2026ರ ವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ನೊಂದಾಯಿತ ಸಂಸ್ಥೆಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ಈ ಕೆಳಕಂಡಂತಿರುತ್ತವೆ.

ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಸಂಖ್ಯೆ:ತಾಸಾಆ/ಗುಂ/ಹೊ.ಗು.ಟೆಂ/01/2025-26 ದಿನಾಂಕ: 07-05-2025
ಅ. ಟೆಂಡರ್ ಸೇವೆಯ ಅಂದಾಜು ಮೌಲ್ಯ ಆ. ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ 2%	ರೂ 63,61,244/- (ಅರವತ್ತಮೂರು ಲಕ್ಷದ ಅರವತ್ತೊಂದು ಸಾವಿರದ ಎರಡು ನೂರ ನಲವತ್ತ ನಾಲ್ಕು ರೂಪಾಯಿಗಳು ಮಾತ್ರ) ರೂ. 1,27,225/- (ಒಂದು ಲಕ್ಷದ ಇಪ್ಪತ್ತೇಳು ಸಾವಿರದ ಎರಡು ನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ)
ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ	08-05-2025
ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	09-06-2025 ಸಂಜೆ 5.00 ಗಂಟೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	10-06-2025 ಸಂಜೆ 5.30 ಗಂಟೆ
ಹಣಕಾಸು ಬಿಡ್ ತೆರೆಯುವ ದಿನಾಂಕ	13-06-2025 ಬೆಳಿಗ್ಗೆ 12.00 ಗಂಟೆ
ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ, ಚಾಮರಾಜನಗರ-571111 e-mail: tlhgundlupet@gmail.com Phone: 08229&222205

ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ರಜಾ ದಿನಗಳನ್ನು ಹೊರತು ಪಡಿಸಿ ಮಾಹಿತಿಗಳನ್ನು ಪಡೆಯ ಬಹುದಾಗಿರುತ್ತದೆ.

ಮುಖ್ಯ ವೈದ್ಯಾಧಿಕಾರಿಗಳು
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ,
ಚಾಮರಾಜನಗರ ಜಿಲ್ಲೆ.

ಸಂ: ವಾಸಾಸಂಇ/ಚಾನಗರ/62/2025-26

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾಡಳಿತ ಭವನ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ. ದೂರವಾಣಿ : 080–2978 7463,
ಇ–ಮೇಲ್ : eerdwsd.bngr1@gmail.com

ಸಂಖ್ಯೆ : ಕಾ.ಅ./ಗ್ರಾ.ಕು.ನೀ.ನೈ.ವಿ./ಬೆಂ.ಗ್ರಾ./ವಾಹನ/ಟೆಂಡರ್/2025–26/66
ದಿನಾಂಕ : 08–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ : 01, 02/2025-26 ದಿನಾಂಕ : 08-05-2025
(ಕೆ.ಪಿ.ಪಿ. ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು (ಗ್ರಾ.) ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ಉಪ–ವಿಭಾಗಕ್ಕೆ ಪ್ರತ್ಯೇಕವಾಗಿ (ಹವಾ ನಿಯಂತ್ರಣ ರಹಿತ NON-AC) ಅಧಿಕೃತ ಸರ್ಕಾರಿ ಕೆಲಸಕ್ಕಾಗಿ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ ವಾಹನಗಳನ್ನು ಒದಗಿಸಲು ಹಾಗೂ ಜಲಧಾರೆ ಯೋಜನೆಯಡಿ ಕೊಳವೆ ಬಾವಿ ಕೊರೆದು, ಪಂಪು ಮೋಟಾರ್ ಹಾಗೂ ಪೈಪ್‌ಲೈನ್ ಅಳವಡಿಸುವ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ವಾಹನ ಸರಬರಾಜುದಾರರು / ಟ್ರಾವೆಲ್ಸ್ ಏಜೆನ್ಸಿಗಳು ಹಾಗೂ ಗುತ್ತಿಗೆದಾರರು ಇಲಾಖಾ ವೆಬ್‌ಸೈಟ್ : https://www.kpp portal ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

1) ಟೆಂಡರ್ ದಾಖಲಾತಿಗಳನ್ನು ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 08–05–2025 ರ ಸಂಜೆ 4.00 ಘಂಟೆ ನಂತರ, 2) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ : 16–05–2025 ರ ಸಂಜೆ 4.00 ಘಂಟೆವರೆಗೆ, 3) ಟೆಂಡರ್‌ನ್ನು ತೆರೆಯುವ ದಿನಾಂಕ : 17–05–2025 ರ ಸಂಜೆ 4.30 ಘಂಟೆ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ.

ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/553/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-123/2024-25/549/2025-26 ದಿನಾಂಕ: 09.05.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಎಸ್.ವಿ. ಶೀಲಾವತಿ ಮತ್ತು ಇತರರು	ಬೆಂಗಳೂರು ಪೂರ್ವ	ವರ್ತೂರು	ಸೂಲಿಕುಂಟೆ	51/1	02–20	ವ್ಯವಸಾಯ	ವಸತಿ
2					51/2	00–10		
3					51/6B	00–18		
					ಒಟ್ಟು	03–08		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಸಮಾಚಾರ ಸಣ್ಣದಲ್ಲ

ಮನೆಗಳ್ಳನ ಬಂಧನ: ಚಿನ್ನಾಭರಣ ಜಪ್ತಿ

ಬೆಂಗಳೂರು: ಬೀಗ ಹಾಕಿದ ಮನೆಗಳನ್ನು ಗುರುತಿಸಿ ಕನ್ನ ಕಳವು ಮಾಡುತ್ತಿದ್ದ ಕುಖ್ಯಾತ ಕನ್ನಗಳ್ಳನನ್ನು ಬಂಧಿಸಿರುವ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸರು 10.80 ಲಕ್ಷ ಮೌಲ್ಯದ120 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ದೇವಸಂದ್ರದ ,ಜೆ.ಸಿ ಲೇಔಟ್ ನ ಹಳೆ ಕಳ್ಳ ರಫೀಕ್ ಅಲಿಯಾಸ್ ಸೇಟಿ(30) ಬಂಧಿತ ಆರೋಪಿ. ಈತನ ಜತೆ ಕೃತ್ಯದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಚೋರ್ ಇರ್ಮಾನ್ ಬಂಧನಕ್ಕೆ ತೀವ್ರ ಶೋಧ ನಡೆಸಲಾಗಿದೆ. ಕೆಂಗೇರಿ ಪೊಲೀಸ್ ಠಾಣೆಯ ಹಳೆ ಕಳ್ಳನಾಗಿದ್ದ ರಫೀಕ್ ಅಲಿಯಾಸ್ ಸೇಟಿ ಚನ್ನಮ್ಮನಕೆರೆ ಅಚ್ಚುಕಟ್ಟು ಇಟ್ಟುಮಡುವಿನ ಕೃಷ್ಣ ಅವರು ಹನುಮಂತನಗರದಲ್ಲಿ ಆಯೋಜಿಸಿದ್ದ, ಕರುನಾಡ ಸಂಭ್ರಮಾಚರಣೆಯ ಕಾರ್ಯಕ್ರಮಕ್ಕೆ ಮನೆಯ ಮುಂಭಾಗಿಲಿಗೆ ಬೀಗ ಹಾಕಿಕೊಂಡು ಹೋಗಿ ಮಾರನೇ ದಿನ ಮುಂಜಾನೆ ವಾಪಸ್ ಮನೆಗೆ ಬಂದು ನೋಡಿದಾಗ ಮುಂಭಾಗಿಲಿನ ಬೀಗ ಮುರಿದು ಒಳನುಗ್ಗಿ ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣಗಳನ್ನು ಕಳವು ಮಾಡಲಾಗಿತ್ತು. ಈ ಸಂಬಂಧ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಇನ್ಸ್ಪೆಕ್ಟರ್ ಸಿ.ಗಿರೀಶ್ ನಾಯ್ಕ್ ಮತ್ತವರ ಸಿಬ್ಬಂದಿ ಪ್ರಕರಣ ದಾಖಲಿಸಿ ವಿವಿಧ ಆಯಾಮಗಳಲ್ಲಿ ತನಿಖೆಯನ್ನು ಕೈಗೊಂಡು ಕತ್ರಿಗುಪ್ಪೆಯ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್‌ನ ಹಿಂಭಾಗದ ರಸ್ತೆಯಲ್ಲಿ ಕಬ್ಬಿಣದ ರಾಡ್ ಸಮೇತ ಆರೋಪಿ ರಫೀಕ್ ನನ್ನು ಬಂಧಿಸಿದ್ದಾರೆ. ಆರೋಪಿಯನ್ನು ಸುದೀರ್ಘ ವಿಚಾರಣೆ ನಡೆಸಿ ಕಳವು ಮಾಡಿದ ಚಿನ್ನಾಭರಣಗಳನ್ನು ಮುಂಬೈನಲ್ಲಿರುವ ಸಂಬಂಧಿಯೋರ್ವಳಿಗೆ ಮಾರಾಟ ಮಾಡಿದ್ದು,ಆಕೆಗೆ ನೋಟೀಸ್ ಜಾರಿ ಮಾಡಿ ಠಾಣೆಗೆ ತಂದು ಹಾಜರುಪಡಿಸಿದ 120 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಕನ್ನಗಳ್ಳರಿಬ್ಬರ ಸೆರೆ: ಲಕ್ಷಾಂತರ ಮಾಲು ವಶ

ಬೆಂಗಳೂರು: ಮನೆ ಕನ್ನ ಕಳವು, ವಾಹನ ಕಳವು ಮಾಡುತ್ತಿದ್ದ ಇಬ್ಬರು ಕುಖ್ಯಾತ ಕಳ್ಳರನ್ನು ಬಂಧಿಸಿರುವ ಸಂಪಂಗಿರಾಮನಗರ ಪೊಲೀಸರು 40 ಲಕ್ಷ ಮೌಲ್ಯದ ಚಿನ್ನ, ಬೆಳ್ಳಿ ಆಭರಣಗಳು, ಕಾರು, ಬೈಕ್‌ಗಳನ್ನು ಜಪ್ತಿ ಮಾಡಿದ್ದಾರೆ. ಗೊಲ್ಲರಹಟ್ಟಿಯ ಕೊಡಿಗೆಹಳ್ಳಿ ಲೇಔಟ್‌ನ ಅಶೋಕ ಅಲಿಯಾಸ್ ಆಪಲ್(34) ತುಮುಕೂರಿನ ಚಿಕ್ಕಪೇಟೆಯ ರೇಣುಕಾಪ್ರಸಾದ್ ಅಲಿಯಾಸ್ ವೇಣು(45)ಬಂಧಿತ ಆರೋಪಿಗಳು. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ವಿಜಯ್ ಅಲಿಯಾಸ್ ವಿಜಿ ಬಂಧನಕ್ಕೆ ತೀವ್ರ ಶೋಧ ನಡೆಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರು ಸುದ್ದಿಗೋಷ್ಠಿ ಯಲ್ಲಿ ತಿಳಿಸಿದರು. ಆಟೋ ಚಾಲಕನಾಗಿದ್ದ ಆಪಲ್ ಹಾಗೂ ಚಿನ್ನ ಬೆಳ್ಳಿ ಕೆಲಸ ಮಾಡುತ್ತಿದ್ದ ವೇಣು ಮತ್ತೊಬ್ಬ ಜತೆ ಸೇರಿ ನಗರ ಹಲವೆಡೆ ಸುತ್ತಾಡಿ ಬೀಗ ಹಾಕಿರುವ ಮನೆಗಳನ್ನು ಗುರುತಿಸಿ ಕಳವು ಮಾಡುತ್ತಿ ದ್ದರು. ಬಂಧಿತರಿಂದ 384 ಗ್ರಾಂ ಚಿನ್ನಾಭರಣಗಳು, 107.63 ಗ್ರಾಂ ಬೆಳ್ಳಿಯ ವಸ್ತುಗಳು, 1 ಕಾರು ಮತ್ತು 2 ದ್ವಿ- ಚಕ್ರ ವಾಹನಗಳು ಸೇರಿ 40 ಲಕ್ಷ ಮೌಲ್ಯದ ಮಾಲುಗಳನ್ನು ಜಪ್ತಿ ಮಾಡಿ ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು. ಸಂಪಂಗಿರಾಮನ ಗರದ ವಸಂತಪ್ಪ ಅವರ ಮನೆಗಳವು ಪ್ರಕರಣ ದಾಖಲಿಸಿದ ಸಂಪಂಗಿರಾಮನಗರ ಪೊಲೀಸ್ ಇನ್ಸ್‌ಪೆಕ್ಟರ್ ರವಿಕಿರಣ್ ಮತ್ತವರ ಸಿಬ್ಬಂದಿ ಕಳೆದ ಏ.21 ರಂದು ಸಂಜೆ ಸಂಪಂಗಿರಾಮನಗರ ಒಕ್ಕಲಿಗರ ಭವನದ ಬಳಿ ಇರುವ ಟೀ ಅಂಗಡಿ ಹತ್ತಿರ ಓರ್ವನನ್ನು ದ್ವಿಚಕ್ರ ವಾಹನದ ಜತೆ ಬಂಧಿಸಿ ವಿಚಾರಣೆ ನಡೆಸಲಾಗಿದೆ. ಆರೋಪಿಯು ದ್ವಿ ಚಕ್ರ ವಾಹನವನ್ನು ಸಿ.ಕೆ ಅಚ್ಚುಕಟ್ಟುವಿನಲ್ಲಿ ಕಳವು ಮಾಡಿಕೊಂಡು ಬಂದಿರುವುದನ್ನು ಬಾಯ್ಬಿಟ್ಟಿದ್ದು ಅದರ ಡಿಕ್ಕಿಯನ್ನು ಪರಿಶೀಲಿಸಲಾಗಿ ಕಬ್ಬಿಣದ ರಾಡ್, ಕಟರ್, ಸ್ಕ್ರೂ ಡ್ರೈವರ್ ಇರುವುದು ಕಂಡು ಬಂದಿರುತ್ತದೆ. ದ್ವಿ-ಚಕ್ರ ವಾಹನದ ಸಮೇತ ಆರೋಪಿಯನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಲಾಗಿದೆ ಎಂದರು. ಆರೋಪಿಯು ಖರೀದಿಸಿದ್ದ ಫೋರ್ಡ್ ಕಂಪನಿಯ ಸೆಕೆಂಡ್‌ಹ್ಯಾಂಡ್ ಕಾರನ್ನು ಜ್ಞಾನ ಭಾರತಿ ಸಂಚಾರ ಪೊಲೀಸ್ ಠಾಣೆಯ ಮುಂಭಾಗದ ರಸ್ತೆಯ ಪಕ್ಕದ ಖಾಲಿ ಜಾಗದಲ್ಲಿ ನಿಲ್ಲಿಸಿದ್ದನ್ನು ವಶಪಡಿಸಿಕೊಳ್ಳಲಾ ಗಿದೆ. ಆರೋಪಿಗಳ ಬಂಧನದಿಂದ ಬ್ಯಾಡರಹಳ್ಳಿ 2 ಕನ್ನಕಳವು ಚೆನ್ನಮ್ಮನಕರೆ ಅಚ್ಚು ಕಟ್ಟು, ಚಂದ್ರ ಲೇಔಟ್ ತಲಾ 1 ದ್ವಿ-ಚಕ್ರ ವಾಹನ ಕಳವು ಪ್ರಕರಣಗಳು ಸೇರಿ 4 ಪ್ರಕರಣಗಳು ಪತ್ತೆಯಾಗಿವೆ.

ದೇಶದ ಭದ್ರತೆಯ ದೃಷ್ಟಿಯಿಂದ ನಿಗಾ ವಹಿಸಲು ಗುಪ್ತಚರ ಇಲಾಖೆ ಸೂಚನೆ

ಗಡಿಯಲ್ಲಿ ಉದ್ವಿಗ್ನ: ರಾಜ್ಯಾದ್ಯಂತ ಕಟ್ಟೆಚ್ಚರ

ಬೆಂಗಳೂರು: ಪಹಲ್ಗಾಮ್ ಉಗ್ರರ ದಾಳಿಗೆ ಭಾರತೀಯ ಸೇನೆಯಿಂದ ಆಪರೇಷನ್ ಸಿಂದೂರ ಮೂಲಕ ಪ್ರತ್ಯುತ್ತರ ನೀಡಿದೆ. ಸದ್ಯ ಭಾರತ ಹಾಗೂ ಪಾಕಿಸ್ತಾನ ಮಧ್ಯೆ ಯುದ್ಧದ ಭೀತಿ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಕಟ್ಟೆಚ್ಚರ ವಹಿಸಲು ರಾಜ್ಯ ಗುಪ್ತಚರ ಇಲಾಖೆ ಸುತ್ತೋಲೆ ಹೊರಡಿಸಿದೆ.

ಉಗ್ರ ಕೃತ್ಯಗಳಂತಹ ಪ್ರಕರಣಗಳಲ್ಲಿ ಭಾಗಿಯಾದವರು, ಶಿಕ್ಷೆಗೊಳಗಾದವರು, ಭಯೋತ್ಪಾದನೆ ಮಾಡುವಂತಹ ಕೃತ್ಯಗಳಲ್ಲಿ ಭಾಗಿಯಾದವರು, ಡಿಟೋನೇಟರ್ ನಂತಹ ಉಪಕರಣಗಳ ತಯಾರು ಮಾಡುವ ಸ್ಥಳ, ಮೂಲಭೂತವಾದದ ಮೂಲಕ ಮಾಡುವಂತಹ ಕೃತ್ಯದಲ್ಲಿ ಭಾಗಿಯಾದವರು, ಭಾಷಣ, ಘೋಷಣೆಗಳ ಮೂಲಕ ಶಾಂತಿ ಭಂಗವನ್ನುಂಟು ಮಾಡುವವರು, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹಂಚಿಕೊಳ್ಳುವವರು, ನಿಮ್ಮ ವ್ಯಾಪ್ತಿಯ ನಗರ ಅಥವಾ ಜಿಲ್ಲೆಗಳಿಗೆ ಭೇಟಿ ನೀಡುವ ಅಪರಿಚಿತರು, ಅನುಮಾನಾಸ್ಪದ ವ್ಯಕ್ತಿಗಳ ಚಲನವಲನ ಮತ್ತು ಅವರು ತಂಗುವ ಸ್ಥಳ ಹಾಗೂ ಹೋಟೆಲ್‌ಗಳ ಮೇಲೆ ದೇಶದ ಭದ್ರತೆಯ ದೃಷ್ಟಿಯಿಂದ ನಿಗಾ ವಹಿಸಲು ಗುಪ್ತಚರ ಇಲಾಖೆ ಸೂಚನೆ ನೀಡಿದೆ.

ಏನೆಲ್ಲ ಕ್ರಮ ಕೈಗೊಳ್ಳಬೇಕು: ಸಾರ್ವಜನಿಕ ರಕ್ಷಣೆಯ ಬಗ್ಗೆ, ಅಭ್ಯಾಸ ಮತ್ತು ತಾಲೀಮುಗಳನ್ನು ಏರ್ಪಡಿಸುವುದು. ಗ್ರಾಮ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವ ಸಿವಿಲ್ ಡಿಫೆನ್ಸ್ ವಾರ್ಡನ್ಸ್ ವಾಲೆಂಟಿಯರ್ಸ್, ಹೋಂಗಾರ್ಡ್, ಎನ್.ಸಿ.ಸಿ, ಎನ್.ಎಸ್.ಎಸ್. ಎನ್.ವೈ.ಕೆ.ಎಸ್, ಮತ್ತಿತರೆ ವಿದ್ಯಾರ್ಥಿ ಸಂಘಟನೆಗಳು ಜನರನ್ನು ಜಾಗೃತಗೊಳಿಸುವುದು ಮತ್ತು ಅವರನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯಗೊಳಿಸಬೇಕು. ಸಾರ್ವಜನಿಕರಲ್ಲಿ ಶಾಂತವಾಗಿರುವಂತೆ, ಜಾಗೃತವಾಗಿರುವಂತೆ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ತಮ್ಮೊಂದಿಗೆ ಹಾಗೂ ಮನೆಗಳಲ್ಲಿ ನಿಗದಿತ ನಗದು, ಇಂಧನ ತುಂಬಿದ ವಾಹನಗಳು, ಸಾಕಷ್ಟು ಔಷಧಿಗಳು, ಕೆಡದೇ ಇರುವಂತ ಹೊದಿಕೆಗಳು ಮತ್ತು ತಮ್ಮ ಮೊಬೈಲ್‌ಗಳನ್ನು ಸದಾ ಚಾರ್ಜ್‌ನಲ್ಲಿ ಇಟ್ಟುಕೊಳ್ಳುವಂತೆ ಹಾಗೂ ಮುಖ್ಯವಾದ ದಾಖಲೆಗಳನ್ನು ಇಟ್ಟುಕೊಳ್ಳುವಂತೆ ಎಚ್ಚರಿಸುವುದು. ಘಟಕಾಧಿಕಾರಿಗಳು, ನಿಮ್ಮ ಅಧೀನದಲ್ಲಿರುವ ಅಧಿಕಾರಿಗಳಿಗೆ ಹಾಗೂ ಠಾಣಾಧಿಕಾರಿಗಳಿಗೆ ಈ ಮೇಲ್ಕಂಡ ಎಲ್ಲಾ ಅಂಶಗಳ ಪಾಲನೆ ಮಾಡಲು ನಿರ್ದೇಶನ ನೀಡುವುದು ಹಾಗೂ ಅರಿವು ಮೂಡಿಸಬೇಕು.

ಘಟಕಾಧಿಕಾರಿಗಳು ತಮ್ಮ ಘಟಕಗಳಲ್ಲಿನ ವೈರ್‌ಲೆಸ್ ಉಪಕರಣಗಳು, ಕಂಪ್ಯೂಟರ್‌ಗಳನ್ನು ಮತ್ತು ವಾಹನಗಳನ್ನು ಸುಸಜ್ಜಿತವಾಗಿ ಇಟ್ಟುಕೊಳ್ಳುವುದು. ಶಸ್ತ್ರಾಗಾರದಲ್ಲಿನ ಶಸ್ತ್ರಗಳನ್ನು ಮತ್ತು ಮದ್ದುಗುಂಡು ಗಳನ್ನು ಸುಸಜ್ಜಿತವಾಗಿ ಇಟ್ಟುಕೊಳ್ಳುವುದು.

ಎಲ್ಲೆಲ್ಲಿ ಕಟ್ಟೆಚ್ಚರ?

ಆಡಳಿತ ಕಟ್ಟಡಗಳು, ರಕ್ಷಣಾ ಸ್ಥಾವರಗಳು, ವಿಮಾನ ನಿಲ್ದಾಣಗಳು, ವಿಜ್ಞಾನ ಸಂಶೋಧನಾ ಕೇಂದ್ರಗಳು, ಅಣೆಕಟ್ಟುಗಳು, ಉಪಗ್ರಹ ಕೇಂದ್ರ, ಜಲವಿದ್ಯುತ್ ಸ್ಥಾವರಗಳು, ಥರ್ಮಲ್ ಸ್ಥಾವರಗಳು, ಸಾಫ್ಟ್‌ವೇರ್ ಕಂಪನಿಗಳು, ಪೈಪ್‌ಲೈನ್ ಕೇಂದ್ರಗಳು, ಕೈಗಾರಿಕೆಗಳು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕೇಂದ್ರಗಳು, ಜನಸಂದಣಿ ಸೇರುವ ಶಾಪಿಂಗ್ ಮಾಲ್‌ಗಳು ಮತ್ತು ಹೋಟೆಲ್‌ಗಳು, ವಿದೇಶಿ ರಾಜತಾಂತ್ರಿಕ ಕಚೇರಿಗಳು, ವಸತಿ ಮತ್ತಿತರ ಕಟ್ಟಡಗಳು, ಜನ ಸಂದಣಿ ಸೇರುವ ದೇವಾಲಯಗಳು, ಮಸೀದಿ, ಚರ್ಚ್‌ಗಳು ಮತ್ತು ಜನಸಂದಣಿ ಸೇರುವ ಸ್ಥಳಗಳಲ್ಲಿ ಕಟ್ಟೆಚ್ಚರ ವಹಿಸಲು ಆದೇಶ ಹೊರಡಿಸಿದೆ.

ಎಚ್‌ಎಎಲ್‌ಗೆ ಹೈ ಅಲರ್ಟ್

ಭಾರತ-ಪಾಕ್ ಉದ್ವಿಗ್ನ ಸ್ಥಿತಿ ಹಿನ್ನೆಲೆ ಬೆಂಗಳೂರಿನ ಎಚ್‌ಎಎಲ್‌ನಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಸಿಬ್ಬಂದಿ ರಜೆಗಳನ್ನು ರದ್ದು ಮಾಡಲಾಗಿದ್ದು, ಓವರ್‌ಟೈಂ ಕೆಲಸಕ್ಕೆ ಸಿದ್ಧವಾಗಿರುವಂತೆ ಸೂಚನೆ ನೀಡಲಾಗಿದೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಬೆಂಗಳೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದ್ದು, ಎಚ್‌ಎಎಲ್ ಭಾರತೀಯ ಸರಕಾರಿ ಸ್ವಾಮ್ಯದ ಏರೋಸ್ಪೇಸ್ ಮತ್ತು ರಕ್ಷಣಾ ಉತ್ಪನ್ನಗಳ ತಯಾರಿಕಾ ಸಂಸ್ಥೆಯಾಗಿದೆ. 1940ರ ಡಿ. 23ರಂದು ಸ್ಥಾಪನೆಯಾದ ಎಚ್‌ಎಎಲ್ ವಿಶ್ವದ ಅತ್ಯಂತ ಹಳೆಯ ಮತ್ತು ಅತಿದೊಡ್ಡ ಏರೋಸ್ಪೇಸ್ ಮತ್ತು ರಕ್ಷಣಾ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳಲ್ಲಿ ಒಂದಾಗಿದೆ. ಏ. 22 ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿದ್ದು, ಈ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು. ಇದಕ್ಕೆ ಪ್ರತೀಕಾರವಾಗಿ ಭಾರತ ಪಾಕ್ ಉಗ್ರರ 9 ಅಡಗುತಾಣಗಳ ಮೇಲೆ ಕ್ಷಿಪಣಿ ದಾಳಿ ನಡೆಸುವ ಮೂಲಕ ತಕ್ಕ ಉತ್ತರ ನೀಡಿತ್ತು. ಎರಡೂ ರಾಷ್ಟ್ರಗಳ ನಡುವೆ ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದು, ದೇಶದ ಪ್ರಮುಖ ಸ್ಥಳಗಳಲ್ಲಿ ಹೈ ಅಲರ್ಟ್ ಘೋಷಣೆ ಮಾಡಲಾಗಿದೆ.

ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮ: ದಯಾನಂದ್

ಬೆಂಗಳೂರು: ಭಾರತ-ಪಾಕಿಸ್ತಾನ ಗಡಿಯಲ್ಲಿ ಉದ್ವಿಗ್ನ ವಾತಾವರಣ ತೀವ್ರಗೊಂಡಿದ್ದು, ಪೆಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ ಭಾರತೀಯ ಸೇನೆಯಿಂದ ಆಪರೇಷನ್ ಸಿಂದೂರ ಮೂಲಕ ತಕ್ಕ ಉತ್ತರ ನೀಡಲಾಗಿದೆ. ಈ ಬೆಳವಣಿಗೆಯಿಂದ ಎರಡು ದೇಶಗಳ ನಡುವೆ ಯುದ್ಧದ ಭೀತಿ ಎದುರಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕದಲ್ಲೂ ರಾಜ್ಯ ಪೊಲೀಸ್ ಇಲಾಖೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ್ ಅವರು ಸುಳ್ಳು ಸುದ್ದಿಗಳನ್ನು ಹರಡುವವರ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ ನೀಡಿದ್ದಾರೆ.

ಕಟ್ಟುನಿಟ್ಟಿನ ಭದ್ರತಾ ಕ್ರಮಗಳು: ನಗರದ ಮಾಸಿಕ ಕವಾಯತು ಕಾರ್ಯಕ್ರಮದಲ್ಲಿ ಮಾತನಾಡಿದ ಆಯುಕ್ತ ದಯಾನಂದ್, ಗಡಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದರು. ಗಡಿಯಲ್ಲಿ ಅಗತ್ಯ ಸಾಮಗ್ರಿಗಳ ಶೇಖರಣೆ ನಡೆಯುತ್ತಿದೆ ಎಂಬ ವರದಿಗಳು ಬಂದಿವೆ. ಈ ಕಾರಣಕ್ಕೆ ಎಲ್ಲೆಡೆ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜನರಲ್ಲಿ ಆತಂಕ ಮೂಡದಂತೆ ಪೊಲೀಸರು ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡಬೇಕು ಮತ್ತು ಸುಳ್ಳು ಸುದ್ದಿ ಗಳನ್ನು ತಡೆಯಲು ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಪೊಲೀಸ್ ಸಿಬ್ಬಂದಿಗೆ ಜಾಗರೂಕತೆಯಿಂದ ಕರ್ತವ್ಯ ನಿರ್ವಹಿಸುವಂತೆ ಸೂಚಿಸ ಲಾಗಿದ್ದು, ಬೆಂಗಳೂರಿನಲ್ಲಿ ಡಿಸಿಪಿಗಳು ಮತ್ತು ಎಸಿಪಿಗಳು ನಿಗಾ ವಹಿಸಬೇಕು. ಕೇಂದ್ರ ಮತ್ತು ರಾಜ್ಯ ಸರಕಾರದ ಸೂಚನೆ ಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಜನರಿಗೆ ಮಾಕ್ ಡ್ರಿಲ್ ಬಗ್ಗೆ ಅರಿವು ಮೂಡಿಸುವ ಕೆಲಸವನ್ನೂ ಪೊಲೀಸರು ಮಾಡಬೇಕು ಎಂದು ದಯಾನಂದ್ ತಿಳಿಸಿದರು.

ರಾಜ್ಯದಲ್ಲಿ ಹೆಚ್ಚುವರಿ ಭದ್ರತೆ ಬಗ್ಗೆ ಚರ್ಚೆ

ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿ, ರಾಜ್ಯದಲ್ಲಿ ಹೆಚ್ಚುವರಿ ಭದ್ರತಾ ಕ್ರಮಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸುತ್ತೇನೆ. ಇಂದು ಸಂಪುಟ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಬಹುದು. ನಾವು ಎಲ್ಲ ರೀತಿಯ ಎಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದೇವೆ. ಸ್ಥಳೀಯ ಪೊಲೀಸರಿಗೆ ಜಾಗರೂಕರಾಗಿರುವಂತೆ ಸೂಚನೆ ನೀಡಲಾಗಿದೆ. ಜಲಾಶಯಗಳು, ಅಣೆಕಟ್ಟುಗಳು ಮತ್ತು ಪ್ರಮುಖ ಸ್ಥಳಗಳಿಗೆ ಭದ್ರತೆ ಒದಗಿಸಲಾಗಿದೆ ಎಂದು ತಿಳಿಸಿದರು.

ಉದ್ಯಮಿ, ಅಂಕಣಕಾರ, ನಾಡೋಜ ಎಸ್.ಷಡಕ್ಷರಿ ಅಭಿಪ್ರಾಯ

ಸಂಸ್ಥೆಗಳು ಸನ್ಮಾರ್ಗದತ್ತ ಕರೆದುಕೊಂಡು ಹೋಗಲಿ

ಬೆಂಗಳೂರು: ಸಂಘ -ಸಂಸ್ಥೆಗಳ ಉದ್ದೇಶ ಸನ್ಮಾರ್ಗದತ್ತ ಎಲ್ಲರನ್ನೂ ಕರೆದುಕೊಂಡು ಹೋಗುವುದು. ಈ ನಿಟ್ಟಿನಲ್ಲಿ ಎಲ್ಲ ಸಂಸ್ಥೆಗಳು ಕಾರ್ಯನಿರ್ವಹಿಸಬೇಕು ಎಂದು ಉದ್ಯಮಿ, ಅಂಕಣಕಾರ, ನಾಡೋಜ ಎಸ್. ಷಡಕ್ಷರಿ ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾಡೋಜ ಡಾ.ಮನು ಬಳಿಗಾರ ಅವರು ಸ್ಥಾಪಿಸಿರುವ ಗೌರವ ದತ್ತಿ ಪ್ರಶಸ್ತಿಗಳ ಪ್ರದಾನ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, ಕರ್ನಾ ಟಕ, ಕನ್ನಡದ ಸಾಕ್ಷಿ ಪ್ರಜ್ಞೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಹಿರಿಯ ಸಂಸ್ಥೆ. ಕನ್ನಡಿಗರನ್ನು ಒಗ್ಗೂಡಿಸಿ ನಾಡು-ನುಡಿಯ ಏಳಿಗೆಗೆ ಮಿಡಿ ಯುವ ಸಂಸ್ಥೆಯಾಗಿದೆ. ಆದ್ದರಿಂದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಸಾಂಸ್ಕೃತಿಕ ಸಮ್ಮೇಳನಗಳಾ ಗಿವೆ ಎಂದು ಅಭಿಪ್ರಾಯಪಟ್ಟರು.

ಸಂಪತ್ತು ಕ್ರೋಢೀಕರಣ ಸಂಸ್ಥೆಗಳ ಮೂಲ ನೆಲೆಯಾದರೂ ಅದರ ಮಾರ್ಗವೂ ಮುಖ್ಯ. ಡಾ.ಮನು ಬಳಿಗಾರರು ಅದನ್ನು ಸಾಧಿಸಿದ್ದರು. ಜಾನಪದ ತಜ್ಞರು ಮತ್ತು ಚಿಂತಕರು ಆದ ಪ್ರೊ.ಹಿ.ಶಿ.ರಾಮಚಂದ್ರ ಗೌಡ ಮತ್ತು ಹಿರಿಯ ಬರಹಗಾರರೂ ಮತ್ತು ವಿಮರ್ಶಕರಾದ ಡಾ.ಬಿ.ಎನ್.ಸುಮಿತ್ರಾ ಬಾಯಿಯವರು ಪುರಸ್ಕಾರವನ್ನು ಸ್ವೀಕರಿಸಿ ಪರಿಷತ್ತಿನಿಂದ ಪಡೆಯುತ್ತಿರುವ ಈ ಗೌರವ ಹಿರಿದಾದದ್ದು ಎಂದು ಹೇಳಿದರು. ದತ್ತಿದಾನಿಗಳಾದ ಡಾ.ಮನು ಬಳಿಗಾರರು ಪುರಸ್ಕೃತರಿಬ್ಬರೂ ತಮ ಗೇಕೆ ಪ್ರಶಸ್ತಿ ಎಂದು ಕೇಳುವ ಸಜ್ಜನರು ಅವರಿಗೆ ಸಲ್ಲುವ ಮೂಲಕ ಇದರ ಮಹತ್ವ ಹೆಚ್ಚಿದೆ ಎಂದರು.

ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾದ ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು, ನೇ.ಭ.ರಾಮ ಲಿಂಗ ಶೆಟ್ಟಿ, ಡಾ.ಪದ್ಮಿನಿ ನಾಗರಾಜು ಇದ್ದರು.



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಾನಪದ ತಜ್ಞ, ಪ್ರೊ.ಹಿ.ಶಿ.ರಾಮಚಂದ್ರ ಗೌಡ ಮತ್ತು ಹಿರಿಯ ಬರಹಗಾರ್ತಿ ಡಾ.ಬಿ.ಎನ್.ಸುಮಿತ್ರಾ ಬಾಯಿಯವರಿಗೆ ದತ್ತಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಉದ್ಯಮಿ, ಅಂಕಣಕಾರ ನಾಡೋಜ ಎಸ್. ಷಡಕ್ಷರಿ , ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾದ ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು, ನೇ.ಭ. ರಾಮಲಿಂಗ ಶೆಟ್ಟಿ, ಡಾ.ಪದ್ಮಿನಿ ನಾಗರಾಜು ಇದ್ದರು.

ಹಣ ವಸೂಲಿ: ಮೂವರು ಪೊಲೀಸರ ಬಂಧನ

ಬೆಂಗಳೂರು: ದಂಧೆಕೋರರನ್ನು ಬೆದರಿಸಿ ಆರು ಲಕ್ಷ ರು. ಹಣ ವಸೂಲಿ ಮಾಡಿದ್ದಾರೆಂಬ ಆರೋಪದ ಮೇರೆಗೆ ಚಿಕ್ಕಜಾಲ ಪೊಲೀಸ್ ಠಾಣೆಯ ಮೂವರು ಪೊಲೀಸರನ್ನು ಬಾಗಲೂರು ಠಾಣಾ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಜಾಲ ಠಾಣೆಯ ಇಬ್ಬರು ಹೆಡ್ ಕ್ಯಾನ್ಸ್‌ಟೇಬಲ್ ಹಾಗೂ ಒಬ್ಬರು ಕಾನ್‌ಸ್ಟೇಬಲ್ ಅನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಚಿಕ್ಕಜಾಲ ಠಾಣಾ ವ್ಯಾಪ್ತಿಯಲ್ಲಿ ಹಣ ದ್ವಿಗುಣಗೊಳಿಸುವ ದಂಧೆ ನಡೆಯುತ್ತಿದೆ. ಆ ದಂಧೆಕೋರರು ಪ್ರತಿಷ್ಠಿತ ಹೋಟೆಲ್‌ವೊಂದರ ಬಳಿ ಇದ್ದಾರೆಂದು ಪೊಲೀಸ್ ಮಾಹಿತಿದಾರರೊಬ್ಬರು ಈ ಪೊಲೀಸರಿಗೆ ತಿಳಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಚಿಕ್ಕಜಾಲ ಠಾಣೆಯ ಪೊಲೀಸರು ತಕ್ಷಣ ಸ್ಥಳಕ್ಕೆ ಹೋಗಿ ದಂಧೆಕೋರರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಬೆದರಿಸಿ ಆರು ಲಕ್ಷ ರು. ಪಡೆದುಕೊಂಡು ಯಾವುದೇ ಪ್ರಕರಣ ದಾಖಲಿಸಿಕೊಳ್ಳದೆ ಆರೋಪಿಗಳನ್ನು ಬಿಟ್ಟುಕಳುಹಿಸಿದ್ದರು. ಮರು ದಿನ ಈ ದಂಧೆಕೋರರು ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 44 ಲಕ್ಷ ರು.ಗಳೊಂದಿಗೆ ಹೋಗಿದ್ದಾಗ ಹಣದ ಬ್ಯಾಗ್ ದರೋಡೆಯಾಗಿದೆ. ಈ ಬಗ್ಗೆ ಅವರು ಬಾಗಲೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಈ ಪ್ರಕರಣದಲ್ಲಿ ಚಿಕ್ಕಜಾಲ ಪೊಲೀಸ್ ಠಾಣೆಯ ಪೊಲೀಸರು ಭಾಗಿಯಾಗಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಮಾಹಿತಿಗಳನ್ನು ಕಲೆ ಹಾಕಿ ಮೂವರು ಪೊಲೀಸ್ ಸಿಬ್ಬಂದಿಯನ್ನು ಬಂಧಿಸಿ, 44 ಲಕ್ಷ ದರೋಡೆ ಮಾಡಿರುವ ಆರೋಪಿಗಳಿಗಾಗಿ ಶೋಧ ಮುಂದುವರಿಸಿದ್ದಾರೆ. ಈ ಪ್ರಕರಣದಲ್ಲಿ ಇನ್ನೂ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ.

ಮೂರು ಕೋಟಿ ರು. ಮೌಲ್ಯದ ಗಾಂಜಾ ಪತ್ತೆ: ಒಬ್ಬ ಸೆರೆ

ಬೆಂಗಳೂರು: ಆನೇಕಲ್ ತಾಲೂಕಿನ ಕರ್ಪೂರು ಗ್ರಾಮದಲ್ಲಿನ ಅಪಾರ್ಟ್‌ಮೆಂಟ್‌ವೊಂದರಲ್ಲಿ 3 ಕೋಟಿ ರು. ಮೌಲ್ಯದ 100 ಕೆಜಿ ಗಾಂಜಾ ಪತ್ತೆಯಾಗಿದೆ. ಗಾಂಜಾ ಸಂಗ್ರಹಿಸಿದ್ದ ಕೇರಳ ಮೂಲದ ಆರೋಪಿ ಸಚಿನ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಉಳಿದ ಆರೋಪಿಗಳಾದ ರಾಶಿ, ಸಂಜು ಮತ್ತು ಉಮೇದ್ ಪರಾರಿಯಾಗಿದ್ದಾರೆ. ಆರೋಪಿ ಸಚಿನ್ ಕೂಡ ಮೊದಲ ಮಹಡಿಯಿಂದ ಹಾರಿ ಪರಾರಿಯಾಗಲು ಯತ್ನಿಸಿದನು. ಆದರೆ, ಕಾಲು ಮುರಿದು ಕುಸಿದು ಬಿದ್ದಿದ್ದಾನೆ. ಗಾಯಾಳು ಆರೋಪಿ ಸಚಿನ್‌ನನ್ನು ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಗೆ ದಾಖಲಿಸಲಾಯಿತು. ಆನೇಕಲ್ ಠಾಣೆ ಪೊಲೀಸರು ಅಪಾರ್ಟ್‌ಮೆಂಟ್‌ನಲ್ಲಿ ಶೋಧ ಮುಂದುವರಿಸಿದ್ದಾರೆ. ಘಟನಾ ಸ್ಥಳಕ್ಕೆ ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ ಕೆ ಬಾಬಾ, ಆನೇಕಲ್ ಉಪವಿಭಾಗದ ಡಿವೈಎಸ್ಪಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆರೋಪಿಗಳು ಹೊರರಾಜ್ಯಗಳಿಂದ ಗಾಂಜಾ ತರಿಸಿ, ಅಪಾರ್ಟ್‌ಮೆಂಟ್‌ನಲ್ಲಿ ಸಣ್ಣ ಸಣ್ಣ ಪ್ಯಾಕೆಟ್‌ಗಳಲ್ಲಿ ಪ್ಯಾಕ್ ಮಾಡುತ್ತಿದ್ದರು. ಬಳಿಕ ಆರೋಪಿಗಳು ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದರು. ಆರೋಪಿಗಳು ಇದ್ದ ಕೊಠಡಿಯಲ್ಲಿ ವೇಯಿಂಗ್ ಸ್ಕೇಲ್, ಪ್ಯಾಕಿಂಗ್ ಟೇಪ್, ರಾಶಿ ರಾಶಿ ಗಾಂಜಾ ಪೊಟ್ಟಣಗಳು ಪತ್ತೆಯಾಗಿವೆ.ಡ್ರಗ್ ಪ್ರಕರಣದಲ್ಲಿ 59 ಆರೋಪಿಗಳು ಬಂಧನ.

PUBLIC NOTICE

We are investigating the title and interest of M/s Century Northside, with registration no. 397/2007-08, and having its registered office at No.10/1, Lakshminarayana Complex, Palace Road, Bangalore 560001, ("Owners") with respect to certain lands (as detailed below) measuring in total 6 acres 08 guntas situated at Kadathanamale Village Hesaragatta Hobli, Yelahanka Taluk, Bangalore, which is more fully described in the schedule hereunder and hereinafter referred to as the "Schedule Property".

Any person having any objection or asserting any right, title, claim or interest in the Schedule Property and / or any part thereof, whether by way of sale, transfer, assignment, exchange, charge, encumbrance, membership possession, tenancy, sub-tenancy, lease, sub-lease, license, mortgage, pledge, inheritance, share, gift, devise, lien, maintenance, bequest, succession, easement, attachment, right of way, lis pendens, reservation, partnership, family arrangement, settlement, maintenance decree or order of any Court of Law, floor are ratio, consumption or any liability, trust, covenant, possession, maintenance, FSI consumption, development rights, commitment or demand or any encumbrance howsoever or otherwise by way of a memorandum of understanding, contract or an agreement or of any nature whatsoever in the Schedule Property or against the Owners must notify in writing the undersigned with his/her/their share or claim, if any, with documentary proof thereof within seven (7) days of this publication. In case no such notice is received by us within seven (7) days from the date of publication of this notice, it shall be presumed that the title of the Owners with respect to the Schedule Property is clear, marketable and free from encumbrance/s of any kind whatsoever and no person has any right, title, claim or interest of any nature whatsoever in respect of the Schedule Property or any part thereof and any future transaction / transfer with respect to any rights on the Schedule Property shall be done without reference to such claim and all claims, if any. Claims, demands or alleged interest, if any, which are not received within seven (7) days from the date of publication of this notice shall be deemed to have been abandoned, surrendered, relinquished, released, completely waived and disregarded for all intents and purposes and shall not be enforceable/binding on our client and/or an impediment to the title, interest, rights, entitlements of the Owner.

SCHEDULE PROPERTY

All that piece and parcel of converted lands measuring in total 06 acres 08 guntas (detailed in the table below) situated at Kadathanamale Village Hesaragatta2 Hobli, Yelahanka Taluk, Bangalore and bounded on:

Sl. Nos.	Sy. No.	Extent Acres	Extent Guntas	Boundaries
1.	73/1	01	20	East By: Land bearing Sy No. 79/1 belonging to Owners. West By: Wintersun Layout — Phase 1 North By: Portion of Sy No. 73/1 belonging to Basappachari South By: Land bearing Sy No. 73/2
2.	79/1	02	23	East By: Railway line & land bearing Sy No. 80 West By: Portion of Land bearing Sy No. 73/1, belonging to Owners North By: Land bearing Sy No. 72 South By: Land bearing Sy No. 79/2, belonging to Owners
3.	79/2	02	05	East By: Land bearing Sy No.80 West By: Land bearing Sy Nos. 74 & 78 North By: Land bearing Sy No. 79/1, belonging to Owners South By: Land bearing Sy No.80

Place: Bengaluru
Date : 10.05.2025

Malini Raju
AZB & Partners, Level 5, 37 Cunningham,
Cunningham Road, Bengaluru -560 052.

PUBLIC NOTICE

Purva Park Apartment Owners Association (Harischandra layout, Jeevanhalli, Cox Town, Bengaluru, Karnataka 560005), vide public notice dated 21.04.2025 to all residents notified six (6) vehicles abandoned for several years within its premises causing nuisance and significant safety issues, and invited claims of ownership within a period of fifteen (15) days. No response was received. Any owner/claimant/right-holder over the vehicles is required to send their claims (if any) to purvaparkapts@gmail.com within a period of fifteen (15) days from this notice with proof, failing which the Association will proceed to dispose the vehicles in accordance with law. Vehicle numbers - AP31Q5258, MH12BT5803, KA03L5088, MH038859, KA03S1230, MH12SA1278

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀ. ಗೌತಮ್ .ಆರ್. ಇವರು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ವತ್ತನ್ನು ಶ್ರೀ.ಪ್ರದೀಪ್ ಶ್ರೀನಿವಾಸನ್ ಬಿನ್ ಎನ್. ಶ್ರೀನಿವಾಸನ್ ಇವರಿಂದ ಖರೀದಿಸಲು ಉದ್ದೇಶಿಸಿದ್ದು,

ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಭಾಗದ ಮೇಲೆ ಯಾವುದೇ ರೀತಿಯ ಹಕ್ಕು, ಕ್ಲೇಮ್, ಹೊಂದಿರುವ ಯಾವುದೇ ವ್ಯಕ್ತಿ ಅಥವಾ ಪ್ರಾಧಿಕಾರವು 10 ದಿನಗಳೊಳಗೆ ತನ್ನ/ಅವಳ/ಅವರ ಹಕ್ಕು/ಆಕ್ಷೇಪಣೆಯನ್ನು ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ಸಲ್ಲಿಸಬಹುದು ಮತ್ತು ಅದರ ಮೇಲೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಪ್ರತಿಗಳನ್ನು ಸಲ್ಲಿಸಬಹುದು, ಇಲ್ಲದಿದ್ದರೆ ನನ್ನ ಕಕ್ಷಿದಾರರು ಯಾವುದೇ ವ್ಯಕ್ತಿಯಿಂದ/ವ್ಯಕ್ತಿಗಳಿಂದ ಯಾವುದೇ ಹಕ್ಕು/ಆಕ್ಷೇಪಣೆಗಳಿಲ್ಲ ಎಂದು ತಿಳಿದು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದುವರಿಯುತ್ತಾರೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹಲಗೆವಡೇರಹಳ್ಳಿ ಗ್ರಾಮದಲ್ಲಿರುವ ಖಾಲಿ ವಸತಿ ಸ್ವತ್ತಿನ ಸೈಟ್ ನಂ.1, ಖಾತಾ ನಂ. 232/2 ರ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ ಒಟ್ಟು 1200 ಚದರ ಅಡಿಗಳ ಈ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ: ಕೃಷ್ಣ ಭಟ್ ಲೇಔಟ್, ಪಶ್ಚಿಮಕ್ಕೆ: 20 ಅಡಿ ರಸ್ತೆ, ಉತ್ತರಕ್ಕೆ: ಐತಾಳ್ ಅವರ ಆಸ್ತಿ, ದಕ್ಷಿಣಕ್ಕೆ: ಸೈಟ್ ಸಂಖ್ಯೆ .2.

ಎನ್ ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019.

PUBLIC NOTICE

We are investigating the title and interest of (i) M.Narayanaswamy, M. Babu, M.Nagaraj and M Srinivas, all sons of Mariswamappa and Sharadamma, (Owners as detailed below in the Item No. 5(a)) residing at No. 124, 1st A Cross, Nanja Reddy Colony, Jeevanbhimanagar , Bangalore-560075 and (ii) Suruchi Properties Private Limited (Owner as detailed below in the Item No. 1(a) to 4 and Item No. 5(b) to 13), CIN U45201KA2003PTC064723 having its registered office at No. 10/1, Ground floor, Laxminarayana Complex, Palace Road, Vasanth Nagar, Bengaluru-560052 ("SPPL"), with respect to the converted land as detailed in the table below with, morefully described hereunder and hereinafter referred to as the "Schedule Property".

Any person or entities having any objection or asserting any right, title, claim or interest of any kind whatsoever including mortgage/ charge/ claim/ encumbrance/ demand over the Schedule Property and / or any part thereof, whether by way of sale, transfer, assignment, exchange, charge, encumbrance, membership possession, tenancy, sub-tenancy, lease, sub-lease, license, mortgage, pledge, inheritance, share, gift, devise, lien, maintenance, bequest, succession, easement, attachment, right of way, lis pendens, reservation, partnership, family arrangement, settlement, maintenance decree or order of any Court of Law, floor are ratio, consumption or any liability, trust, covenant, possession, maintenance, FSI consumption, development rights, commitment or demand or any encumbrance howsoever or otherwise by way of a memorandum of understanding, contract or an agreement or of any nature whatsoever in the Schedule Property must notify in writing the undersigned with his/her/their share or claim, if any, with documentary proof thereof within seven (7) days of this publication. In case no such notice is received by us within seven (7) days from the date of publication of this notice, it shall be presumed that the title of the Owners with respect to the Schedule Property is clear, marketable and free from encumbrance/s of any kind whatsoever and no person has any right, title or interest of any nature whatsoever in respect of the Schedule Property or any part thereof and any future transaction / transfer with respect to any rights on the Schedule Property shall be done without reference to such claim and all claims, if any. Claims, demands or alleged interest, if any, which are not received within seven (7) days from the date of publication of this notice shall be deemed to have been abandoned, surrendered, relinquished, released, completely waived and disregarded for all intents and purposes and shall not be enforceable/binding on our client and/or an impediment to the title, interest, rights, entitlements of the Owners

SCHEDULE

All that piece and parcel of immovable properties in (i) Item No.1 to Item No.6 of the Schedule hereto, situated at Muniyellappa Garden, Kodihalli, Ward No.73, Airport Road, Bengaluru (Kodihalli Village, Marathahalli Hobli (earlier Varthur Hobli), Bangalore East Taluk, Bangalore District) and (ii) Item No.7 to Item No13, situated at Narayanappa Garden, Kodihalli, Ward No.73, Airport Road, Bengaluru (Kodihalli Village, Marathahalli Hobli (earlier Varthur Hobli), Bangalore East Taluk, Bangalore District), admeasuring about 8 acres 8.35 guntas and 18 guntas of kharab land and bounded as follows : -

Item No	Present BBMP Municipal No.[PID No.]	HASB Khata No.	Carved out of Survey No.	Extent Square Feet	Extent Guntas	East by	West by	North by	South by
1(a)	49 [PID No.73-50-49]	770/2	155/1A	24840	22.81	Sy No.155/1B	Sy Nos.155/3E and 155/2B	Remaining portion of Sy No.155/1A	Sy Nos. 156/1
1(b)	50 [PID No.73-50-50]	770/1							
1(c)	51/1 (Old No.51) [PID No.73-50-51/1]	770/3							
2(a)	58 [PID No.73-50-58]	146/1E to 146/1H	146/1	43560	40.00	Sy No.146/2	Sy No.156/1	Sy Nos. 155/1B, 147/1 and 147/2	Raja Kaluve
2(b)	54 [PID No.73-50-54]	146/1A to 146/1D							
3	55 [PID No.73-50-55] (Part)	982/2, 983/3, 984/4 & 985/5	146/3A (Part)	23414	21.50	Sy No. 143/3	Sy No.146/2	Sy No. 146/3B	Remaining portion of Sy. No.146/3A
4	56 [PID No.73-50-56]	959/4	156/2	18894	3.00	Sy No.156/1	Sy No.156/3	Sy No.155/3E	Raja Kaluve
		958/3	156/3		3.00	Sy No.156/2	Sy No.156/4	Sy No.155/3F	Raja Kaluve
		957/2	156/4		3.00	Sy No.156/3	Sy No.156/5	Sy No.155/3F	Raja Kaluve
		956/2	156/5		3.00	Sy No.156/4	Sy No.156/6	Sy No.155/3C	Raja Kaluve
		955/1	156/6		5.35	Sy No.156/5	Raja Kaluve	Sy NO.155/3G	Raja Kaluve
5(a)	57 [PID No.73-50-57]	694	156/1 (eastern portion)	10890	10	Sy No. 146/1	Remaining portion of Sy No.156/1	Sy Nos. 155/1B and 155/1A	Raja Kaluve
5(b)	62 [PID No.73-50-62]	966/2 & 967/3	156/1 (western portion)	11050	10	Remaining portion of Sy No.156/1	Sy No.156/2	Sy Nos. 155/3E and 155/1A	Raja Kaluve
6	59 [PID No.73-50-59] (Part)	762/A2, 980/2 & 981/3	146/3B	20691	19	Sy No.143/3	Sy No.146/2	Sy No. 148	Sy No. 146/3A
7	60 (Part) [PID No.73-63-60]	706/1C, 314/1C, 970/2, 971/3, 972/4 & 973/5	143/3 (Part)	20919.7	19.21	Remaining portion of Sy No.143/3	Sy No.146/3A	Sy No.143/2	Remaining portion of Sy No.143/3
8(a)	61 [PID No.73-63-61] (Part)	636/1 & 636/2	147/2 (Part)	25286.58	23.22	Sy No.147/1	Sy No.155/1B	Remaining portion of Sy No.147/2	Sy No.146/1
8(b)	67 [PID No.73-63-67] (Part)	736/2, 736/2A, 736/3B & 736/4C							
8(c)	68 (Part) [PID No.73-63-68]	736/1 & 737/3							
9(a)	62 (Part) [PID No.73-63-62]	740/1	155/3E	19329.75	7.25	Sy No.155/1A	Sy No.153/3F	Remaining portion of Sy No.155/3E	Sy No.156/1 and 156/2
9(b)		740/2	155/3F		4.50	Sy No.155/3E	Sy No.155/3C	Remaining portion of Sy No. 155/3F	Sy Nos.156/4 and 156/3
9(c)		740/3	155/3G		6	Sy No.155/3C	Road	Sy Nos,155/3B and 155/3C	Sy No.156/6
10	64 [PID No.73-63-64]	990/2, 991/3, 992/4, 993/5, 994/2, 995/3, 996/4 & 997/5	146/2	66429	61	Sy Nos.146/3A & 146/3B	Sy Nos. 146/1 & 147/1	Sy No. 148	Raja Kaluve
11	65 [PID No.73-63-65] (Part)	706/1D-314/1D, 706/1E-314/1E & 706/1F-314/1F	148	27442.8	25.20	Sy No.143/3	Sy No. 147/1	Sy No. 149	Sy Nos.146/2 & 146/3B
12	66 [PID No.73-63-66], 70 & 71	735/1, 734/1 & 733/3	147/1 (Part)	25319.25	23.25	Sy No.146/2	Sy No. 147/2	Remaining portion of Sy No. 147/1	Sy No.146/1
13	69 (Part) [PID No.73-63-69]	737/1, 738/1 739/1 & 636/2	155/1B (Part)	19667.34	18.06	Sy No.147/2	Sy No. 155/1A	Remaining portion of Sy No. 155/1B	Sy Nos.156/1 & 146/1

Place: Bengaluru
Date : 10.05.2025

Malini Raju
AZB & Partners, Level 5, 37 Cunningham,
Cunningham Road, Bengaluru -560 052.

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್

ನೋಂದಾಯಿತ ಮತ್ತು ಕಾರ್ಪೊರೇಟ್ ಕಛೇರಿ: ಅಗರ ಗ್ರಾಮದ ಸರ್ವೆ ಸಂಖ್ಯೆ 28/P16 ಮತ್ತು ಬಿ.ಎಮ್ ಕಾವಲ್ ಗ್ರಾಮದ ಸರ್ವೆ ಸಂಖ್ಯೆ 85/P6,ಕೆಂಗೇರಿ ಹೋಬಳಿ, ಬೆಂಗಳೂರು 560 082, ಕರ್ನಾಟಕ, ಭಾರತ
ವೆಬ್‌ಸೈಟ್: www.sjsindia.com | **ಇ-ಮೇಲ್:** compliance@sjsindia.com | **ದೂರವಾಣಿ:** +91 80 6194 0777
CIN: L51909KA2005PLC036601

31ನೇ ಮಾರ್ಚ್ 2025ರಂದು ಕೊನೆಗೊಳ್ಳುವ ತ್ರೈಮಾಸಿ ಮತ್ತು ವಿತ್ತ ವರ್ಷದ ಸಲುವಾಗಿ ಕನ್‌ಸಾಲಿಡೇಟೆಡ್ ಆಡಿಟೆಡ್ ಫೈನಾನ್ಶಿಯಲ್ ಫಲಿತಾಂಶದ ಸ್ಟೇಟ್‌ಮೆಂಟ್‌ನ ಸಾರಾಂಶ

(ಪ್ರತಿ ಷೇರಿನ ಡೇಟಾವನ್ನು ಹೊರತುಪಡಿಸಿ ಮಿಲಿಯನ್‌ಗಳಲ್ಲಿ ರೂಪಾಯಿಗಳು)

ಕ್ರಮ ಸಂಖ್ಯೆ.	ವಿವರಗಳು	ತ್ರೈಮಾಸಿಕ ಕೊನೆಗೊಂಡಾಗ 31 ಮಾರ್ಚ್ 2025 ಲೆಕ್ಕಪರಿಶೋಧನೆ ಮಾಡದ	ತ್ರೈಮಾಸಿಕ ಕೊನೆಗೊಂಡಾಗ 31 ಡಿಸೆಂಬರ್ 2024 ಲೆಕ್ಕಪರಿಶೋಧನೆ ಮಾಡದ	ತ್ರೈಮಾಸಿಕ ಕೊನೆಗೊಂಡಾಗ 31 ಮಾರ್ಚ್ 2024 ಪರಿಶೋಧಿಸಲಾಗಿದೆ	ವರ್ಷ ಮುಗಿದಾಗ 31 ಮಾರ್ಚ್ 2025 ಪರಿಶೋಧಿಸಲಾಗಿದೆ	ವರ್ಷ ಮುಗಿದಾಗ 31 ಮಾರ್ಚ್ 2024 ಪರಿಶೋಧಿಸಲಾಗಿದೆ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	2,005.12	1,785.62	1,867.89	7,604.86	6,278.00
2	ನಿವ್ವಳ ಲಾಭ ಅವಧಿಗೆ (ತೆರಿಗೆ ಅಸಾಧಾರಣ ವಸ್ತುಗಳು)	405.99	358.58	363.77	1,528.64	1,126.49
3	ನಿವ್ವಳ ಲಾಭ ತೆರಿಗೆಗೆ ಮುಂಚಿನ ಅವಧಿಗೆ (ಅಸಾಧಾರಣ ವಸ್ತುಗಳ ನಂತರ)	405.99	358.58	363.77	1,528.64	1,126.49
4	ತೆರಿಗೆಯ ನಂತರ ಹಾಗೂ ಅಪವಾದಾತ್ಮಕ(ಅಸಾಧಾರಣ) ಐಟಮ್‌ಗಳ ನಂತರದ ಅವಧಿಗಾಗಿ ನಿವ್ವಳ ಲಾಭ	337.34	277.11	271.77	1,188.32	853.71
5	ಅವಧಿಗೆ ಒಟ್ಟು ಸಮಗ್ರ ಆದಾಯ ಅವಧಿಯ ಲಾಭ [(ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	339.67	276.25	295.98	1,178.83	868.75
6	ಇಕ್ವಿಟಿ ಶೇರ್ ಕ್ಯಾಪಿಟಲ್	313.26	313.20	310.38	313.26	310.38
7	ಇತರ ಇಕ್ವಿಟಿ	-	-	-	6,458.54	5,194.99
8	ಪ್ರತಿ ಶೇರ್‌ಗೆ ಗಳಿಕೆ (ತಲಾ -ರೂ.10/ ರ)	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿದೆ	ವಾರ್ಷಿಕಗೊಳಿಸಲಾಗಿದೆ
	1. ಬೇಸಿಕ್ (ವಾರ್ಷಿಕಗೊಳಿಸಲಾಗಿಲ್ಲ)	10.67	8.83	8.64	37.82	27.45
	2. ಡೈಲ್ಯೂಟೆಡ್ (ವಾರ್ಷಿಕಗೊಳಿಸಲಾಗಿಲ್ಲ)	10.40	8.58	8.46	36.88	26.87

ಟಿಪ್ಪಣಿಗಳು

1. ಕಂಪನಿಯ ಪ್ರಮುಖ ಸ್ವತಂತ್ರ ಹಣಕಾಸು ಮಾಹಿತಿಯನ್ನು ಕೆಳಗೆ ನೀಡಲಾಗಿದೆ:

(ಮಿಲಿಯನ್‌ಗಳಲ್ಲಿ ರೂಪಾಯಿಗಳು)

ಕ್ರಮ ಸಂಖ್ಯೆ.	ವಿವರಗಳು	ತ್ರೈಮಾಸಿಕ ಕೊನೆಗೊಂಡಾಗ 31 ಮಾರ್ಚ್ 2025 ಲೆಕ್ಕಪರಿಶೋಧನೆ ಮಾಡದ	ತ್ರೈಮಾಸಿಕ ಕೊನೆಗೊಂಡಾಗ 31 ಡಿಸೆಂಬರ್ 2024 ಲೆಕ್ಕಪರಿಶೋಧನೆ ಮಾಡದ	ತ್ರೈಮಾಸಿಕ ಕೊನೆಗೊಂಡಾಗ 31 ಮಾರ್ಚ್ 2024 ಪರಿಶೋಧಿಸಲಾಗಿದೆ	ವರ್ಷ ಮುಗಿದಾಗ 31 ಮಾರ್ಚ್ 2025 ಪರಿಶೋಧಿಸಲಾಗಿದೆ	ವರ್ಷ ಮುಗಿದಾಗ 31 ಮಾರ್ಚ್ 2024 ಪರಿಶೋಧಿಸಲಾಗಿದೆ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	1,028.26	928.64	1,022.59	3,980.05	3,633.61
2	ತೆರಿಗೆಗೆ ಮುಂಚಿನ ಲಾಭ	261.30	265.62	239.68	1128.59	885.56
3	ತೆರಿಗೆಯ ನಂತರದ ಲಾಭ	245.56	209.88	183.76	919.93	675.59
4	ಒಟ್ಟು ಸಮಗ್ರ ಆದಾಯ	249.06	207.96	206.84	914.53	691.60

2. 31ನೇ ಮಾರ್ಚ್ 2025ರಂದು ಕೊನೆಗೊಳ್ಳುವ ತ್ರೈಮಾಸಿಕ ಮತ್ತು ವರ್ಷದ ಸಲುವಾಗಿ ಈ ಮೇಲಿನ ಕನ್‌ಸಾಲಿಡೇಟೆಡ್ ಮತ್ತು ಸ್ಟ್ಯಾಂಡ್‌ಅಲೋನ್ ಆಡಿಟೆಡ್ ವಿತ್ತ ಫಲಿತಾಂಶಗಳನ್ನು ಆಡಿಟ್ ಸಮಿತಿಯು ಪುನರಾವಲೋಕನೆ ಮಾಡಿದೆ ಮತ್ತು ಬಳಿಕ 08 ಮೇ 2025ರಂದು ಜರಗಿದ ಆಯಾಯ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲ್ಪಟ್ಟಿದೆ.
3. ಈ ಮೇಲಿನದ್ದು ಸೆಬಿ ನಿಯಂತ್ರಣ 33ರಡಿಯಲ್ಲಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಮತ್ತು ಡಿಸ್‌ಕ್ಲೋಶರ್ಸ್ ಅವಶ್ಯಕತೆಗಳು) ತಿದ್ದುಪಡಿ ಮಾಡಲಾದಂತೆ ನಿಯಂತ್ರಣಗಳು, 2015, ಸ್ಟಾಕ್ ಎಕ್ಸ್‌ಚೇಂಜ್‌ಗಳಗೆ ಸಲ್ಲಿಸಲಾದ ಆಡಿಟೆಡ್ ತ್ರೈಮಾಸಿಕ ಮತ್ತು ವಾರ್ಷಿಕವಾಗಿ ಕೊನೆಗೊಂಡ ವಿತ್ತ ಫಲಿತಾಂಶಗಳ ಸಾರಾಂಶವಾಗಿದೆ. ವಿವರವಾದ ಲೆಕ್ಕಪರಿಶೋಧನೆಯಿಲ್ಲದ ತ್ರೈಮಾಸಿಕ ಹಣಕಾಸು ಫಲಿತಾಂಶಗಳು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ವೆಬ್‌ಸೈಟ್ www.nseindia.com ನಲ್ಲಿ ಮತ್ತು ಕಂಪೆನಿಯ ವೆಬ್‌ಸೈಟ್ www.sjsindia.com ನಲ್ಲಿಯೂ ಲಭ್ಯವಿದೆ.

ಸ್ಥಳ: ಬೆಂಗಳೂರು
ದಿನಾಂಕ: 08 ಮೇ 2025

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಕೆ ಎ ಜೋಸೆಫ್
ಮ್ಯಾನೇಜಿಂಗ್ ಡೈರೆಕ್ಟರ್
ಡಿನ್: 00784084

CONCEPT

ಸಮಾಚಾರ ಸಣ್ಣದಲ್ಲ

ಪ್ರಶಸ್ತಿ ಪ್ರದಾನ ಸಮಾರಂಭ ನಾಳೆ

ಬೆಂಗಳೂರು: ವಾಡಿಯಾ ಸಭಾಂಗಣದಲ್ಲಿ ಭಾನುವಾರ ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಭಾನುವಾರ ಬೆ.11ಗೆ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಲೋಕಾರ್ಪಣೆ ಸಮಾರಂಭ ಆಯೋಜಿಸಲಾಗಿದ್ದು, ಸಮಾರಂಭದಲ್ಲಿ ನಟಿ ಡಾ.ಸುಷ್ಮಾ.ಎಸ್.ವಿ ಅವರಿಗೆ ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ ಪ್ರದಾನ, ಹಾಗೂ ಮಂ.ಆ. ವೆಂಕಟೇಶ್ ಅವರ 'ಕರ್ನಾಟಕ ರಾಜ್ಯ ರಮಾರಮಣರು' ಪುಸ್ತಕ ಲೋಕಾರ್ಪಣೆ ಮಾಡಲಾಗುವುದು. ವಿಜಯನಗರ ಬಿಂಬ ಮತ್ತು ಪಿಇಎಸ್ ವಿವಿ ಕಲಾವಿದರಿಂದ ರಂಗ ಕವನ ಪ್ರಾಯೋಗಿಕ ರಂಗ ಪ್ರಸ್ತುತಿ ನಡೆಯಲಿದೆ. ಗೌರಿ ಸುಂದರ್ ಪ್ರಶಸ್ತಿ ಸಮಿತಿ ಅಧ್ಯಕ್ಷ ಬಿ.ಆರ್.ಲಕ್ಷ್ಮಣ ರಾವ್, ರಂಗಕರ್ಮಿ ಗುಂಡಣ್ಣ, ಸಾಹಿತಿ ಎಸ್.ಗೋಪಾಲ ಕೃಷ್ಣ ಭಾಗವಹಿಸಲಿದ್ದಾರೆ.

ಉಪನ್ಯಾಸ ಕಾರ್ಯಕ್ರಮ ಇಂದು

ಬೆಂಗಳೂರು: ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದಲ್ಲಿ ಶನಿವಾರ ಬೆ.10 ಗಂಟೆಗೆ ಉಪನ್ಯಾಸ, ಭರತ ನಾಟ್ಯ ಮತ್ತು ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಬದುಕು ಮತ್ತು ಕಲೆ ವಿಷಯದ ಕುರಿತು ವಿಜ್ಞಾನ, ಗಣಿತ, ಯೋಗ, ತತ್ವ ಶಾಸ್ತ್ರ, ಆಧ್ಯಾತ್ಮಿಕ ಇತ್ಯಾದಿ ವಿಷಯ ಗಳ 65 ಕ್ಕೂ ಹೆಚ್ಚು ಅನುವಾದಿತ ಕೃತಿ ರಚಿಸಿರುವ ಲಕ್ಷ್ಮಿಕಾಂತ ಹೆಗಡೆ ಅವರಿಂದ ಉಪನ್ಯಾಸ, ಡಾ.ಪೂಜಾ ಲೋಕೇಶ್ ಹುಬ್ಬಳ್ಳಿ ಅವರಿಂದ ಭರತ ನಾಟ್ಯ ಹಾಗೂ ಮನು ಹೆಗಡೆಯ ವರಿಂದ ಹಿಂದು ಸ್ತಾನಿ ಶಾಸ್ತ್ರೀಯ ಗಾಯನ ಕಾರ್ಯಕ್ರಮ ನಡೆಯ ಲಿದೆ. ಆಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಕ್ತ ಅವಕಾಶ ವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

4 ಸಾವಿರ ಲೀಟರ್ ನೀರಿಗೆ 660 ರು., 6 ಸಾವಿರ ಲೀಟರ್ ನೀರಿಗೆ 740 ರು. ದರ ನಿಗದಿ: ಡಿಕೆಶಿ

ಟ್ಯಾಂಕರ್ ಮಾಫಿಯಾ ತಡೆಯಲು ಸಂಚಾರಿ ಕಾವೇರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿನಲ್ಲಿ ಟ್ಯಾಂಕರ್ ನೀರು ಪೂರೈಕೆ ದೊಡ್ಡ ಮಾಫಿಯಾವಾಗಿದೆ. ಇದನ್ನು ತಪ್ಪಿಸಿ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ನೀರು ಪೂರೈಸಲು ದೇಶದಲ್ಲೇ ಮೊದಲ ಬಾರಿಗೆ ಸಂಚಾರಿ ಕಾವೇರಿ ಯೋಜನೆ ಜಾರಿಗೊಳಿಸಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರಿಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಕೆಲಸಗಳ ವಿಚಾರವಾಗಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದೇನೆ. ಇಂದು ಸರ್ವರಿಗೂ ಸರಳ ಕಾವೇರಿ, ಮನೆ ಬಾಗಿಲಿಗೆ ಸಂಚಾರಿ ಕಾವೇರಿ ಯೋಜನೆಗಳನ್ನು ಪ್ರಾರಂಭಿಸಿದ್ದು, ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಇಂತಹ ಯೋಜನೆ ಜಾರಿಗೆ ತರಲಾಗಿದೆ.

-ಡಿ.ಕೆ.ಶಿವಕುಮಾರ, ಉಪಮುಖ್ಯಮಂತ್ರಿ

ವಿಧಾನಸೌಧದ ಆವರಣದಲ್ಲಿ ಶುಕ್ರವಾರ ನಡೆದ ಸರ್ವರಿಗೂ 'ಸಂಚಾರಿ ಕಾವೇರಿ', 'ಮನೆ ಬಾಗಿಲಿಗೆ ಸರಳ ಕಾವೇರಿ' ಯೋಜನೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಚಾಲನೆ ನೀಡಿದರು.

ವಿಧಾನಸೌಧದ ಆವರಣದಲ್ಲಿ ಶುಕ್ರವಾರ ನಡೆದ ಸರ್ವರಿಗೂ 'ಸಂಚಾರಿ ಕಾವೇರಿ', 'ಮನೆ ಬಾಗಿಲಿಗೆ ಸರಳ ಕಾವೇರಿ' ಯೋಜನೆಗೆ ಚಾಲನೆ ನೀಡಿದ ಬಳಿಕ ಮಾತನಾಡಿ, ಸುಮಾರು 3 ಸಾವಿರ ಕೊಳವೆ ಬಾವಿ ಕೊರೆಸಿ, ಟ್ಯಾಂಕರ್‌ಗಳನ್ನು ಇಟ್ಟುಕೊಂಡು 3 ಸಾವಿರ ರೂಪಾಯಿವರೆಗೂ ಹಣ ವಸೂಲಿ ಮಾಡುವ ಪ್ರವೃತ್ತಿ ಹೊಂದಿದ್ದಾರೆ. ಈ ಯೋಜನೆ ಮೂಲಕ 4 ಸಾವಿರ ಲೀಟರ್ ನೀರಿಗೆ 660 ರು. ಹಾಗೂ 6 ಸಾವಿರ ಲೀಟರ್ ನೀರಿಗೆ 740 ರು. ದರ ನಿಗದಿ ಮಾಡಲಾಗಿದೆ. ಇದು ಕೊಳವೆ ಬಾವಿ ನೀರಲ್ಲ. ಇದು ಜಲಮಂಡಳಿಯಿಂದ ನೀಡುತ್ತಿರುವ ಶುದ್ಧ ಕುಡಿಯುವ ನೀರು ಎಂದು ತಿಳಿಸಿದರು.

ನೀರಿನ ಮಾಫಿಯಾ ತಡೆಯಲು ಈ ಯೋಜನೆ ಚಾಲನೆ ನೀಡಲಾಗಿದೆ. ಇದು ಸಣ್ಣ ಯೋಜನೆಯಲ್ಲ. ಕಳೆದ ವರ್ಷ ಬರಗಾಲದಲ್ಲಿ ನೀರಿನ ಅಭಾವ ಎದುರಾದಾಗ ಪರಿಸ್ಥಿತಿಯನ್ನು ಅತ್ಯುತ್ತಮವಾಗಿ ನಿಭಾಯಿಸಲಾಯಿತು. ಕೆರೆಗಳನ್ನು ತುಂಬಿಸಿ, ಅಂತರ್ಜಲ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಲು ತೀರ್ಮಾನಿಸಿದ್ದೇವೆ. ಇತ್ತೀಚೆಗೆ ಸಿಎಂ ನೇತೃತ್ವದಲ್ಲಿ ಕೆರೆಗಳ ಅಭಿವೃದ್ಧಿ ಸಭೆ ಮಾಡಲಾಗಿದೆ. ಸಣ್ಣ ಮನೆಗಳಿಗೆ ನೀರಿನ ಸಂಪರ್ಕ ನೀಡಲು ಕೇವಲ 1 ಸಾವಿರ ಶುಲ್ಕ ಪಡೆಯಲು ತೀರ್ಮಾನಿಸಿದ್ದೇವೆ. ಅಪಾರ್ಟ್ಮೆಂಟ್ ನವರಿಗೆ ಆರಂಭದಲ್ಲಿ 20% ಹಣ ಪಡೆದು ನಂತರ ಒಂದು ವರ್ಷ ಕಾಲಾವಕಾಶ ನೀಡಲು ಮುಂದಾಗಿದ್ದೇವೆ. ಹೀಗೆ ಹೊಸ ನೀತಿಗಳ ಮೂಲಕ ಎಲ್ಲವನ್ನು ಒಂದು ವ್ಯವಸ್ಥೆಯಲ್ಲಿ ತರುವ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ನೆಲಮಂಗಲದಲ್ಲಿ 1,900 ಕೋಟಿ ವೆಚ್ಚದಲ್ಲಿ ವೃಷಭಾವತಿ ನೀರನ್ನು ಸಂಸ್ಕರಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆರೆಗಳನ್ನು ತುಂಬಿಸುವ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದೆ. ಪ್ರತಿ ನೀರಿನ ಹನಿಯು ಮಹತ್ವದ್ದಾಗಿದೆ. ಅನೇಕರು ಇದನ್ನು ಟೀಕೆ ಮಾಡಬಹುದು. ಆದರೆ ಇಂತಹ ಯೋಜನೆ ಇದೇ ಮೊದಲಲ್ಲ. ದೆಹಲಿಯಲ್ಲೂ ಯಮುನಾ ನದಿ ನೀರನ್ನು ಗಿಡ ಬೆಳೆಸಲು, ವಾಹನ ತೊಳೆಯಲು ಹಾಗೂ ಕೈಗಾರಿಕೆಗೆ ಪೂರೈಸುತ್ತಾರೆ ಎಂದರು.

ಮುನ್ನೆಚ್ಚರಿಕೆ ಕ್ರಮವಾಗಿ ಡ್ಯಾಂಗಳಿಗೆ ಭದ್ರತೆ

ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಡಿ.ಕೆ.ಶಿವಕುಮಾರ ಮಾತನಾಡಿ, ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಅಣೆಕಟ್ಟುಗಳಿಗೆ ಭದ್ರತೆ ಒದಗಿಸಲಾಗಿದೆ. ಈ ಪರಿಸ್ಥಿತಿಯಲ್ಲಿ ನಿರ್ಲಕ್ಷ್ಯ ವಹಿಸಬಾರದು ಎಂದು ಸರಕಾರ ಈ ಕ್ರಮ ಕೈಗೊಂಡಿದೆ. ತಾಂತ್ರಿಕ ಸಿಬ್ಬಂದಿಗಳ ಹೊರತಾಗಿ ಯಾವುದೇ ಪ್ರವಾಸಿಗರಿಗೆ ಅಣೆಕಟ್ಟಿನ ಬಳಿ ಅವಕಾಶ ನೀಡಬಾರದು ಎಂದು ನಿರ್ದೇಶನ ನೀಡಿದ್ದೇವೆ. ಇದು ದೇಶದ ವಿಚಾರ ಸಾರ್ವಜನಿಕರು ಈ ವಿಚಾರವಾಗಿ ಸಹಕಾರ ನೀಡಬೇಕು. ಬೆಂಗಳೂರಿನ ಭದ್ರತೆ ವಿಚಾರವಾಗಿ ಪೊಲೀಸ್ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುತ್ತಿದ್ದಾರೆ. ಅಗತ್ಯ ಸಂದರ್ಭದಲ್ಲಿ ಸಾರ್ವಜನಿಕರಿಗೆ ಸಂಬಂಧಪಟ್ಟ ಸಂದೇಶವನ್ನು ರವಾನಿಸುತ್ತೇವೆ. ದೇಶದ ಐಕ್ಯತೆ ಗಮನದಲ್ಲಿಟ್ಟುಕೊಂಡು ಯೋಧರಿಗೆ ಆತ್ಮಸ್ಥೈರ್ಯ ತುಂಬಲು ಮುಂದಾಗಿದ್ದೇವೆ. ಸಚಿವ ಸಂಪುಟ ಸಭೆಯಲ್ಲಿ ಇತರೆ ವಿಚಾರ ಚರ್ಚೆ ಮಾಡಿ ನಂತರ ಮಾಹಿತಿ ನೀಡುತ್ತೇವೆ ಎಂದರು.

ನಾವೀನ್ಯತೆಯ ಅಂತಾರಾಷ್ಟ್ರೀಯ ಸಮ್ಮೇಳನ

ಬೆಂಗಳೂರು: ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಇತ್ತೀಚಿನ ನಾವೀನ್ಯತೆಗಳ ಕುರಿತಾದ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಸಿಲ್ವರ್ ಜುಬಿಲಿ ಸಭಾಂಗಣದಲ್ಲಿ ಉದ್ಘಾಟನೆಗೊಂಡಿತು.

ಕಮ್ಮವರಿ ಸಂಘಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆಯೋಜಿಸಿರುವ ಉದ್ಘಾಟನಾ ಸಮಾರಂಭದಲ್ಲಿ ತಾಂತ್ರಿಕ ಅಧಿವೇಶನಗಳು, ಪ್ರಬಂಧ ಪ್ರಸ್ತುತಿಗಳು ಮತ್ತು ಎಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿನ ಸಮಕಾಲೀನ ಸವಾಲುಗಳು ಮತ್ತು ಪ್ರಗತಿಗಳನ್ನು ಅನ್ವೇಷಿಸುವ ಗುರಿ ಹೊಂದಿರುವ ಚರ್ಚೆಗಳಿಂದ ಆರಂಭವಾಯಿತು. ಸಾಫ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಿಇಒ ಮಾರ್ಟಿನ್ ಕ್ಲೋಯೆಲ್ವೆಡೆ ಹೋಲ್ಟ್ ರೊಟ್‌ಬೋಯೆಲ್ ಅವರು ಎಂಜಿನಿಯರಿಂಗ್ ಮತ್ತು ತಾಂತ್ರಿಕ ಪ್ರಗತಿಯ ವಿಕಸನಗೊಳ್ಳುತ್ತಿರುವ ಭೂದೃಶ್ಯದ ಕುರಿತು ತಮ್ಮ ಒಳನೋಟ ಹಂಚಿಕೊಂಡರು. ಥರ್ಡ್ ಡೆರಿವೇಟಿವ್‌ನ ಸಂಶೋಧನೆ ಶ್ರದ್ಧೆ ಮತ್ತು ವಿದ್ಯುತ್ ವಲಯದ ಪ್ರಮುಖ ವ್ಯವಸ್ಥಾಪಕ ಅಲೆಕ್ಸಾಂಡರ್ ಹೊಗೆವೀನ್ ರಟ್ಟರ್, ಅಭಿವೃದ್ಧಿ ಹಣಕಾಸು, ಹವಾಮಾನ ತಂತ್ರಜ್ಞಾನ ಮತ್ತು ಇಂಧನ ವ್ಯವಸ್ಥೆಗಳಲ್ಲಿನ ನಾವೀನ್ಯತೆ ಕುರಿತು ಚಿಂತನಶೀಲ ಅಧಿವೇಶನ ನೀಡಿದರು.

ಕಮ್ಮವರಿ ಸಂಘಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆಯೋಜಿಸಿದ್ದ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಇತ್ತೀಚಿನ ನಾವೀನ್ಯತೆಗಳ ಕುರಿತಾದ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಸಂಘದ ಅಧ್ಯಕ್ಷ ಆರ್. ರಾಜಗೋಪಾಲ್ ನಾಯ್ಡು ಉದ್ಘಾಟಿಸಿದರು.

ಸಮ್ಮೇಳನದಲ್ಲಿ ಕಮ್ಮವರಿ ಸಂಘದ ಅಧ್ಯಕ್ಷ ಆರ್. ರಾಜಗೋಪಾಲ್ ನಾಯ್ಡು, ಗೌರವಾನ್ವಿತ ಕಾರ್ಯದರ್ಶಿ ಆರ್.ಲೀಲಾಶಂಕರ್ ರಾವ್, ಖಜಾಂಚಿ ಟಿ.ನೀರಜಾಕ್ಷುಲು ನಾಯ್ಡು, ಕೆಎಸ್‌ಜಿಐ ಸಿಇಒ ಡಾ.ಕೆ.ವಿ.ಎ. ಬಾಲಾಜಿ, ಕೆಎಸ್‌ಆರ್‌ಐಎಫ್‌ನ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಡಿ.ಆರ್.ಸ್ವಾಮಿ, ಕೆಎಸ್‌ಐಟಿಯ ನಿರ್ದೇಶಕ ಡಾ.ದಿಲೀಪ್ ಕುಮಾರ್.ಕೆ ಭಾಗವಹಿಸಿದ್ದರು.

ಮಾವೋವಾದಿ ಪಕ್ಷಕ್ಕೆ ನಿಧಿ ಸಂಗ್ರಹ: ಜಾಮೀನು ನೀಡಲು ಹೈ ನಕಾರ

ಬೆಂಗಳೂರು: ಮಾವೋವಾದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾಕ್ಕಾಗಿ ನಿಧಿ ಸಂಗ್ರಹಿಸುವುದರಲ್ಲಿ ತೊಡಗಿದ್ದ ಆರೋಪದ ಮೇಲೆ ಬಂಧನವಾಗಿದ್ದ ಪಕ್ಷದ ಸಕ್ರಿಯ ಸದಸ್ಯ ಅನಿರುದ್ಧ ರಾಜನ್ ಎಂಬವರಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ. ಕಳೆದ ವರ್ಷ ಸೆಪ್ಟಂಬರ್‌ನಲ್ಲಿ ನಗರದ ಉಪ್ಪಾರಪೇಟೆ ಪೊಲೀಸರು ಅವರನ್ನು ಬಂಧಿಸಿದ್ದರು.

ತನಿಖಾಧಿಕಾರಿಗಳು 90 ದಿನಗಳಲ್ಲಿ ಆರೋಪ ಪಟ್ಟಿ ಸಲ್ಲಿಸಲು ವಿಳಂಬವಾದ ಹಿನ್ನೆಲೆಯಲ್ಲಿ ಜಾಮೀನು (ಡಿಫಾಲ್ಟ್ ಬೇಲ್) ಕೋರಿ ಚೆನ್ನೈ ಮೂಲದ 34 ವರ್ಷದ ರಾಜನ್ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣಾ ನ್ಯಾಯಾಲಯವು ವಜಾಗೊಳಿಸಿತ್ತು. ಈ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ಮತ್ತು ನ್ಯಾಯಮೂರ್ತಿ ಕೆ.ಎಸ್.ಹೇಮಲೇಖ ಅವರಿದ್ದ ನ್ಯಾಯಪೀಠ, ಮೇಲ್ಮನವಿ ವಜಾಗೊಳಿಸಿದ್ದು, ವಿಚಾರಣಾ ನ್ಯಾಯಾಲಯದ ಆದೇಶ ಎತ್ತಿ ಹಿಡಿದಿದೆ. ನಿಗದಿತ ಅವಧಿಯಲ್ಲಿ (90 ದಿನ) ತನಿಖೆ ಮುಗಿಯುವ ಮುನ್ನವೇ ತನಿಖಾಧಿಕಾರಿಗಳು ಸೂಕ್ತ ದಾಖಲೆಗಳು ಮತ್ತು ಬಲವಾದ ಕಾರಣಗಳೊಂದಿಗೆ ಆರೋಪಪಟ್ಟಿ ಸಲ್ಲಿಸಲು ಮತ್ತಷ್ಟು ಕಾಲಾವಕಾಶ ಕೋರಿದ್ದಾರೆ. ಹೀಗಾಗಿ, ಆರೋಪಿಯು ಡಿಫಾಲ್ಟ್ ಬೇಲ್ ಪಡೆಯುವ ಹಕ್ಕು ಕಳೆದುಕೊಳ್ಳಲಿದ್ದಾರೆ. ಈ ಪ್ರಕರಣದಲ್ಲಿ 90 ದಿನ ಅವಧಿ ಮುಗಿಯುವ ಮುನ್ನವೇ ಯುಎಪಿಎ ಅಡಿ ತನಿಖೆ ಪೂರ್ಣಗೊಳಿಸಲು ಕಾಲಾವಕಾಶ ಕೋರಿದ್ದಾರೆ. ಆದ್ದರಿಂದ ಡಿಫಾಲ್ಟ್ ಬೇಲ್ ಪಡೆಯುವ ಹಕ್ಕು ಪಡೆಯಲು ಅರ್ಜಿದಾರರು ಅರ್ಹರಾಗುವುದಿಲ್ಲ. ಜತೆಗೆ, ಆರೋಪಪಟ್ಟಿ ಸಲ್ಲಿಸುವುದಕ್ಕೆ ಕಾಲಾವಕಾಶ ಕೋರಿರುವ ಅರ್ಜಿ ವಿಚಾರಣಾ ನ್ಯಾಯಾಲಯದಲ್ಲಿ ಬಾಕಿ ಉಳಿದಿದೆ ಎಂಬ ಕಾರಣಕ್ಕೆ ಆರೋಪಿಗೆ ಜಾಮೀನು ಪಡೆಯುವ ಹಕ್ಕು ಸಿಕ್ಕಂತಾಗಿದೆ ಎನ್ನಲಾಗುವುದಿಲ್ಲ ಎಂದು ಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

2024-25 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಬೆಂಗಳೂರಿನ ಜ್ಞಾನ ಭಾರತಿ ಮರಿಯಪ್ಪನಪಾಳ್ಯದ ಸೇಂಟ್ ಫಿಲೋಮಿನಾಸ್ ಸಮೂಹ ಸಂಸ್ಥೆಯ ವಿದ್ಯಾರ್ಥಿಗಳಾದ ಸುಜನ್.ಎಸ್. ಮನೋಜ್.ಎ., ವಿನುತ.ಕೆ.ಎಂ., ಅಚ್ಯುತ್.ಎಸ್., ಯಾಝಿನಿ.ಕೆ. ಅವರಿಗೆ ಸಂಸ್ಥೆಯ ಕಾರ್ಯದರ್ಶಿ ರಂಗಸ್ವಾಮಿ ಮತ್ತು ಪ್ರಾಂಶುಪಾಲರು, ಶಿಕ್ಷಕಿಯರು ಅಭಿನಂದಿಸಿದರು.

ಗಾಂಧಿ, ನೆಹರೂ ತಪ್ಪಿನಿಂದ ಭಾರತ ಪಶ್ಚಾತ್ತಾಪ: ಯತ್ನಾಳ್

ಬೆಂಗಳೂರು: ಭಾರತ ಪಾಕಿಸ್ತಾನ ವಿಭಜನೆ ಸಮಯದಲ್ಲಿ ಗಾಂಧೀಜಿ ಮತ್ತು ನೆಹರು ತೆಗೆದುಕೊಂಡ ತಪ್ಪು ನಿರ್ಧಾರದಿಂದಲೇ ಇಂದು ಭಾರತ ಪಶ್ಚಾತ್ತಾಪ ಪಡುವಂತಾಗಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತ ಪಾಕಿಸ್ತಾನ ವಿಭಾಗ ಮಾಡಬೇಕಾದರೆ ಇಲ್ಲಿರುವ ಮುಸ್ಲಿಂ ಪಾಕಿಸ್ತಾನಕ್ಕೆ ಹೋಗಬೇಕು. ಅಲ್ಲಿರುವ ಕೊನೆಯ ಹಿಂದೂ ಭಾರತಕ್ಕೆ ಬರಬೇಕು ಎಂದು ಅಂಬೇಡ್ಕರ್ ಹೇಳಿದರು. ಗಾಂಧಿ ಮತ್ತು ನೆಹರೂ ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಅವರು ಮಾಡಿದ ತಪ್ಪಿಗೆ ಇಂದು ಭಾರತ ಪಶ್ಚಾತ್ತಾಪ ಪಡುತ್ತಿದೆ ಎಂದು ಟೀಕಿಸಿದರು. ನಮ್ಮ ದೇಶ ಮತ್ತು ಸನಾತನ ಧರ್ಮದ ಮೇಲೆ ಪಾಕಿಸ್ತಾನದಿಂದ ಪ್ರಹಾರ ಆಗುತ್ತಿದೆ. ಪ್ರಧಾನಿ ಹಾಗೂ ಸೈನಿಕರು ಯಶಸ್ವಿ ಅಪರೇಷನ್ ಸಿಂದೂರ ಮಾಡಿದ್ದಾರೆ. ರಾಜ್ಯದ ಜನರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಪಾಕ್ ಪ್ರಜೆಗಳ ಗಡಿಪಾರಿಗೆ ಸೂಚಿಸುವಂತೆ ರಾಜ್ಯಪಾಲರಿಗೆ ಪತ್ರ

ಬೆಂಗಳೂರು: ರಾಜ್ಯದಲ್ಲಿರುವ ಪಾಕಿಸ್ತಾನಿ ಪ್ರಜೆಗಳಿಗೆ ತಮ್ಮ ದೇಶಗಳಿಗೆ ಮರಳುವಂತೆ ತಿಳಿಸಿದರೂ ಇನ್ನು ಕೆಲವರು ಇಲ್ಲೇ ಉಳಿದಿದ್ದಾರೆ, ಅವರನ್ನು ರಾಜ್ಯದಿಂದ ಗಡಿಪಾರು ಮಾಡಲು ರಾಜ್ಯ ಸರಕಾರಕ್ಕೆ ಸೂಚನೆ ನೀಡಬೇಕು ಎಂದು ರಾಜ್ಯ ಬಿಜೆಪಿ ನಿಯೋಗ ರಾಜ್ಯಪಾಲರಿಗೆ ಮನವಿ ಮಾಡಿದೆ.

ಈ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿಯಾಗಿರುವ ನಿಯೋಗ, ಪಹಲ್ಗಾಮ್ ಉಗ್ರ ದಾಳಿ ಹಿನ್ನೆಲೆ ಪಾಕಿಸ್ತಾನದ ಪ್ರಜೆಗಳನ್ನು ಅವರ ದೇಶಗಳಿಗೆ ವಾಪಸ್ ಕಳಿಸುವಂತೆ ಕ್ರಮ ಕೈಗೊಳ್ಳಲು ರಾಜ್ಯಗಳಿಗೆ ಕೇಂದ್ರ ಸರಕಾರ ಸೂಚನೆ ನೀಡಿದೆ.

ಪಹಲ್ಗಾಮ್ ದುರ್ಘಟನೆ ನಂತರ ಕೇಂದ್ರ ಸರಕಾರ ಸ್ಪಷ್ಟ ಸೂಚನೆ ರವಾನೆ ಮಾಡಿದೆ. ಪಾಕಿಸ್ತಾನದ ಪ್ರಜೆಗಳು 48ಗಂಟೆಯಲ್ಲಿ ಅವರ ದೇಶಕ್ಕೆ ಹೋಗಬೇಕು ಅಂತಾ ಸೂಚನೆ ನೀಡಿದೆ. ಆದರೆ ರಾಜ್ಯ ಸರಕಾರ ಈ ಬಗ್ಗೆ ಯಾವುದೇ ಕಠಿಣ ಕ್ರಮ ಕೈಗೊಂಡಿಲ್ಲ. ರಾಜ್ಯದಲ್ಲಿ ಇನ್ನೂ ಹಲವು ಪಾಕಿಸ್ತಾನಿ ಪ್ರಜೆಗಳು ಉಳಿದುಕೊಂಡಿದ್ದಾರೆ. ಇದು ದೇಶದ ಭದ್ರತೆ ವಿಚಾರವಾಗಿದೆ. ನಮ್ಮ ರಾಜ್ಯದಲ್ಲಿರೋ ಪಾಕಿಸ್ತಾನದ ಪ್ರಜೆಗಳನ್ನು ಹೊರ ಕಳಿಸಲು ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದೀವಿ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ



ರಾಜ್ಯದಲ್ಲಿರುವ ಪಾಕಿಸ್ತಾನಿ ಪ್ರಜೆಗಳಿಗೆ ತಮ್ಮ ದೇಶಗಳಿಗೆ ಮರಳುವಂತೆ, ರಾಜ್ಯದಿಂದ ಗಡಿಪಾರು ಮಾಡಲು ರಾಜ್ಯ ಸರಕಾರಕ್ಕೆ ಸೂಚನೆ ನೀಡಬೇಕು ಎಂದು ರಾಜ್ಯ ಬಿಜೆಪಿ ನಿಯೋಗ ರಾಜ್ಯಪಾಲರಿಗೆ ಮನವಿ ಮಾಡಿದೆ.

ಆದರೆ ನಮ್ಮ ರಾಜ್ಯದಲ್ಲಿ ಈ ವಿಚಾರವನ್ನು ಕಾಂಗ್ರೆಸ್ ಸರಕಾರ ಗಂಭೀರವಾಗಿ ತೆಗೆದುಕೊಂಡಿಲ್ಲ. ರಾಜ್ಯದಲ್ಲಿ ಈ ಕೂಡಲೇ ಪಾಕಿಸ್ತಾನಿ ಪ್ರಜೆಗಳನ್ನು ಗಡಿಪಾರು ಮಾಡುವಂತೆ ಮತ್ತು ಇಂದಿನವರೆಗೆ ರಾಜ್ಯದಲ್ಲಿ ಗಡಿಪಾರು ಮಾಡಲಾದ ಮತ್ತು ವಾಸಿಸುತ್ತಿರುವ ಪಾಕಿಸ್ತಾನಿ ಪ್ರಜೆಗಳ ಸಂಖ್ಯೆಯ ಡೇಟಾ ಬಿಡುಗಡೆ ಮಾಡಬೇಕು ಎಂದು ಸೂಚನೆ ನೀಡುವಂತೆ ಮನವಿ ಮಾಡಲಾಗಿದೆ.

ಬಿಜೆಪಿ ಬೇಡಿಕೆಗಳು: ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಹಿತದೃಷ್ಟಿಯಿಂದ ಈ ಕ್ರಮಗಳ ಕಟ್ಟುನಿಟ್ಟಿನ ಅನುಷ್ಠಾನ ಮತ್ತು ಮೇಲ್ವಿಚಾರಣೆಯನ್ನು ರಾಜ್ಯ ಸರಕಾರ ಖಚಿತಪಡಿಸಿಕೊಳ್ಳಬೇಕು. ಪಾಕಿಸ್ತಾನ ಪ್ರಾಯೋಜಿತ ದಾಳಿಯ ಬಗ್ಗೆ ಎಲ್ಲಾ ಜಾತಿ ಮತ್ತು ಧರ್ಮಗಳ ಭಾರತೀಯ ನಾಗರಿಕರು ವ್ಯಕ್ತಪಡಿಸಿದ ತೀವ್ರ ದುಃಖ ಮತ್ತು ಖಂಡನೆ ಗುರುತಿಸಿ ಮತ್ತು ರಾಷ್ಟ್ರದ ಸಂಕಲ್ಪವನ್ನು ಅನುಗುಣವಾಗಿ ವರ್ತಿಸುವಂತೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಎನ್‌ಐಎ ತನಿಖೆಗೆ ಆಗ್ರಹಿಸಿ ಮನವಿ

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರಿಗೆ ಮನವಿ ಪತ್ರ ಸಲ್ಲಿಸಿದೆ. ಪ್ರತಿಪಕ್ಷ ನಾಯಕ ಆರ್. ಅಶೋಕ್, ಮೇಲ್ಮನೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿ ಬಿಜೆಪಿ ನಿಯೋಗ ರಾಜ್ಯಪಾಲರನ್ನು ಭೇಟಿಯಾಗಿ, ಸುಹಾಸ್ ಶೆಟ್ಟಿ ಕೊಲೆ ಪ್ರಕರಣದ ತನಿಖೆ ಮಾಡುತ್ತಿರುವ ಕಾಂಗ್ರೆಸ್ ಸರಕಾರದ ಮೇಲೆ ನಮಗೆ ವಿಶ್ವಾಸವಿಲ್ಲ. ಆದ್ದರಿಂದ ಇದರ ತನಿಖೆಯನ್ನು ಎನ್‌ಐಎಗೆ ವಹಿಸಬೇಕು ಎಂದು ಕೋರಿದರು. ಬಳಿಕ ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ್, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿ ಮಾಡಿ, ಹಿಂದೂ ಸಂಘಟನೆಯ ಕಾರ್ಯಕರ್ತ ಸುಹಾಸ್ ಶೆಟ್ಟಿಯ ಕೊಲೆಯ ಬಗ್ಗೆ ವಿವರಿಸಲಾಗಿದೆ. ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುಪಾರಿ ನೀಡಿರುವ ಪ್ರಕರಣ. ಮುಸ್ಲಿಂ ಹುಡುಗನ ಕೊಲೆಯಾಗಿದ್ದಕ್ಕೆ ಆ ಕುಟುಂಬಕ್ಕೆ ಕಾಂಗ್ರೆಸ್ 25 ಲಕ್ಷ ಪರಿಹಾರ ನೀಡಿದ್ದು, ಆ ಹಣವನ್ನು ಬಳಸಿಯೇ ಸುಪಾರಿ ನೀಡಲಾಗಿದೆ. ಕಾಂಗ್ರೆಸ್ ಇಂತಹವರ ವಿಚಾರದಲ್ಲಿ ಮೃದು ಧೋರಣೆ ತಾಳಿದೆ. ಈ ಪ್ರಕರಣದ ತನಿಖೆಯಲ್ಲಿ ನಮಗೆ ವಿಶ್ವಾಸವಿಲ್ಲ. ಪಾಕಿಸ್ತಾನ ಜಿಂದಾಬಾದ್ ಘೋಷಣೆಗೆ, ಭಯೋತ್ಪಾದನೆ ಚಟುವಟಿಕೆಗೆ ಪ್ರೇರಣೆ ಕೊಡುವವರ ಸಂಪರ್ಕ ಇವರಿಗಿದೆ ಎಂದು ಆರೋಪಿಸಿದರು.

ಸಮಾಚಾರ ಸಣ್ಣದಲ್ಲ

ಅರಬಿಂದೋ ವಿದ್ಯಾಮಂದಿರ ಶಾಲೆಗೆ ಉತ್ತಮ ಫಲಿತಾಂಶ

ಬೆಂಗಳೂರು: ಬಸವೇಶ್ವರನಗರದಲ್ಲಿರುವ ರಾಜಾಜಿನಗರ ಎಜುಕೇಶನ್ ಸೊಸೈಟಿಯ ಶ್ರೀ ಅರಬಿಂದೋ ವಿದ್ಯಾ ಮಂದಿರ ಶಾಲೆಯ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದಿದ್ದಾರೆ. ವಿದ್ಯಾರ್ಥಿಗಳಾದ ಸಾನ್ವಿ ಎಸ್ ಶೆಟ್ಟಿ 618 (98.88%), ರಾಘವೇಂದ್ರ ಪಿ.596 (95.04%), ಸೌರಭ್ 594 (95.04%), ನಿತ್ಯಾನಂದ ಎಚ್. ಎಸ್588 (94.08%), ಸಂಜನಾ.ಬಿ 572 (91.52%), ಧನುಷ್ 570 (91.2%), ಶ್ರಾವಣಿ ಎಸ್.554 (88.64%), ದೀಪಾ.ಜೆ 535 (85.6%) ರಷ್ಟು ಅಂಕಗಳನ್ನು ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ.

ಗುಜರಾತ್ ಗಡಿಭಾಗ: ಸಿಎಂ-ಪಿಎಂ ಚರ್ಚೆ

ಗಾಂಧಿನಗರ: ಭಾರತ-ಪಾಕ್ ಯುದ್ಧ ತೀವ್ರಗೊಳ್ಳುತ್ತಿರುವ ಹಿನ್ನೆಲೆ ತವರು ರಾಜ್ಯದ ಗಡಿ ಜಿಲ್ಲೆಗಳ ಬಗ್ಗೆ ಕಳವಳಗೊಂಡಿರುವ ಪ್ರಧಾನಿ ಮೋದಿ ಅವರು ಶುಕ್ರವಾರ ಗುಜರಾತ್ ಸಿಎಂ ಭೂಪೇಂದ್ರ ಪಟೇಲ್ ಅವರ ಜತೆ ವರ್ಚುವಲ್ ಸಭೆ ನಡೆಸಿ ಗಡಿ ಜಿಲ್ಲೆಗಳ ಭದ್ರತಾ ವ್ಯವಸ್ಥೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ರಾಜ್ಯ ಸರಕಾರ ಕೈಗೊಂಡಿರುವ ಮುನ್ನೆಚ್ಚರಿಕೆ ಕ್ರಮಗಳ ಕುರಿತು ವಿವರ ಕೇಳಿ ತಿಳಿದುಕೊಂಡರು. ಪಾಕ್ ಗಡಿ ಸಮೀಪದ ಕಚ್, ಬನಸ್ಕಾಂತ, ಪಟಾನ್, ಜಾಮ್‌ನಗರ ಮತ್ತಿತರ ಸೂಕ್ಷ್ಮ ಜಿಲ್ಲೆಗಳಲ್ಲಿ ನಾಗರಿಕರ ಸುರಕ್ಷತೆ ಮತ್ತು ಭದ್ರತೆಗೆ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಪಡೆದುಕೊಂಡರು. ಇದೇ ವೇಳೆ ಪ್ರಧಾನಿ ಮೋದಿ ಅವರು ಸಿಎಂಗೆ ಕೆಲವು ಅಗತ್ಯ ಸಲಹೆ, ಸೂಚನೆಗಳನ್ನೂ ನೀಡಿದರು. ಈ ಸಂಗತಿಯನ್ನು ಸಿಎಂ ಭೂಪೇಂದ್ರ ಪಟೇಲ್ 'ಎಕ್ಸ್' ನಲ್ಲಿ ಹಂಚಿಕೊಂಡಿದ್ದಾರೆ.

ಕೇರಳದಲ್ಲಿ ಮತ್ತೆ ನಿಫಾ ಪ್ರಕರಣ ಪತ್ತೆ

ತಿರುವನಂತಪುರ: ಕೇರಳದಲ್ಲಿ ಮಾರಕ ನಿಫಾ ವೈರಾಣು ಮತ್ತೆ ಕಾಣಿಸಿಕೊಂಡಿದೆ. ನಿಫಾ ಸೋಂಕಿನ ಹೊಸ ಪ್ರಕರಣ ಗುರುವಾರ ಮಲಪ್ಪುರಂನಲ್ಲಿ ವರದಿಯಾಗಿದೆ. 2018ರಿಂದ ಈವರೆಗೆ ರಾಜ್ಯದಲ್ಲಿ ದಾಖಲಾದ 7ನೇ ಪ್ರಕರಣ ಇದಾಗಿದೆ. ಮಲಪ್ಪುರಂ ಜಿಲ್ಲೆಯ ವಲಂಚೇರಿ ನಿವಾಸಿ 42 ವರ್ಷದ ಮಹಿಳೆ ನಿಫಾ ಸೋಂಕಿಗೆ ತುತ್ತಾಗಿದ್ದು, ಪೆರಿಂಥಲ್ಮನ್ನಾದಲ್ಲಿನ ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಕಲಿ ಜಾತಿ ಪತ್ರದಿಂದ ಸೌಲಭ್ಯ ಪಡೆಯುವ ಯತ್ನವೂ ಶಿಕ್ಷಾರ್ಹ: ಹೈಕೋರ್ಟ್

ಬೆಂಗಳೂರು: ನಕಲಿ ಜಾತಿ ಪ್ರಮಾಣ ಪತ್ರದ ಮೂಲಕ ಸೌಲಭ್ಯ ಪಡೆಯುವ ಯತ್ನವೂ ಶಿಕ್ಷಾರ್ಹ ಎಂದಿರುವ ಹೈಕೋರ್ಟ್, 'ಆದಿ ದ್ರಾವಿಡ ಎಂದು ನಕಲಿ ಜಾತಿ ಪ್ರಮಾಣ ಪತ್ರ ಪಡೆದ ಆರೋಪದ ಸಂಬಂಧ ದಾಖಲಾಗಿದ್ದ ಪ್ರಕರಣದಲ್ಲಿ ಆರೋಪ ಮುಕ್ತಿ ಕೋರಿ ಕ್ರಿಮಿನಲ್ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದೆ.

ಬೆಂಗಳೂರಿನ ನಾಗೇನಹಳ್ಳಿಯ ಸಿ. ಸುಮಲತಾ ಸಲ್ಲಿಸಿದ್ದ ಕ್ರಿಮಿನಲ್ ತೀರ್ಪು ಮರುಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಜೆ.ಎಂ. ಖಾಜಿ ಅವರ ಏಕಸದಸ್ಯ ಪೀಠ ತಿರಸ್ಕರಿಸಿದೆ.

ಪ್ರಕರಣದಲ್ಲಿ ಸುಮಲತಾ ಅವರು ನಕಲಿ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ಅದರ ಆಧಾರದ ಮೇಲೆ ಸಾಹೀರಾ ಬಾನು ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ನಿಷೇಧ ಕಾಯಿದೆ ಅಡಿ ಪ್ರಕರಣ ದಾಖಲಿಸಿದ್ದಾರೆ.

ಇದಕ್ಕೆ ಸಮಲತಾ ಅರ್ಹರಾಗಿಲ್ಲ ಮತ್ತು ಕಾಯಿದೆಯ ನಿಬಂಧನೆಯನ್ನು ದುರ್ಬಳಕೆ ಮಾಡಿದ್ದಾರೆ. ಸುಮಲತಾ ಭವಿಷ್ಯದಲ್ಲಿ ಅದರ ಲಾಭ ಪಡೆಯುವ ಸಾಧ್ಯತೆ ಇದ್ದು, ಶಾಸನಬದ್ಧವಾಗಿ ಎಸ್ಸಿ/ಎಸ್ಟಿ ಸಮುದಾಯವರಿಗೆ ದಕ್ಕಬೇಕಿರುವ ಸೌಲಭ್ಯದಿಂದ ವಂಚಿತಗೊಳಿಸುವ ಸಾಧ್ಯತೆ ಇದೆ. ನಕಲಿ ಜಾತಿ ಪ್ರಮಾಣ ಪತ್ರದ ಮೂಲಕ ಸೌಲಭ್ಯ ಪಡೆಯುವ ಯತ್ನವೂ ಶಿಕ್ಷಾರ್ಹವಾಗಿದೆ.

ಪ್ರಕರಣದ ಹಿನ್ನೆಲೆ

ಸಾಹೀರಾ ಬಾನು ಅವರು ದಾಖಲಿಸಿದ್ದ ದೂರಿನಲ್ಲಿನ ಮಾಹಿತಿಯಂತೆ, ಸುಮಲತಾ ಅವರು ಒತ್ತುವರಿ ಮಾಡಿ, ನಾಲ್ಕು ಅಂತಸ್ತಿನ ಕಟ್ಟಡವನ್ನು ಪರವಾನಗಿ ಪಡೆಯದೇ ಮತ್ತು ಕಟ್ಟಡ ನಿರ್ಮಾಣಕ್ಕೆ ಬಿಬಿಎಂಪಿ ಒಪ್ಪಿಗೆ ಪತ್ರ ಪಡೆಯದೆ ನಿರ್ಮಿಸಿದ್ದರು. ಇದರ ವಿರುದ್ಧ ಸಾಹೀರಾ ಬಾನು ದೂರು ಆಧರಿಸಿ ಒತ್ತುವರಿ ತೆರವು ಮಾಡುವಂತೆ ಬಿಬಿಎಂಪಿ ಆದೇಶ ಮಾಡಿದ್ದನ್ನು ಸಹಿಸದೇ ಸಾಹೀರಾ ಬಾನು ಮತ್ತು ಅವರ ಸಹೋದರ ನೂರ್ ಮೊಹಮ್ಮದ್ ಅಲಿ ಅವರ ಮೇಲೆ ಗೂಂಡಾಗಳ ಮೂಲಕ ಸುಮಲತಾ ಹಲ್ಲೆ ನಡೆಸಿದ್ದರು ಎನ್ನಲಾಗಿತ್ತು.

ಹಾಲಿ ಪ್ರಕರಣದಲ್ಲಿ ಸುಮಲತಾ ವಿರುದ್ಧ ಪ್ರಕ್ರಿಯೆ ಮುಂದುವರಿಸಲು ಮೇಲ್ನೋಟಕ್ಕೆ ದಾಖಲೆಗಳು ಇವೆ. ಈ ನೆಲೆಯಲ್ಲಿ ವಿಚಾರಣಾಧೀನ ನ್ಯಾಯಾಲಯವು ಸುಮಲತಾ ಅವರ ಆರೋಪ ಮುಕ್ತಿ ಕೋರಿರುವ ಅರ್ಜಿ ವಜಾಗೊಳಿಸಿರುವುದು ಸರಿಯಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಯಲಹಂಕ ಪೊಲೀಸರು ದೂರು ದಾಖಲಿಸಿದ್ದು, ಅವರು ಆರೋಪ ಪಟ್ಟಿ ಸಲ್ಲಿಸಿದ್ದಾರೆ. ನಾಗರಿಕ ಹಕ್ಕುಗಳ ನಿರ್ದೇಶನಾಲಯದ (ಡಿಸಿಆರ್‌ಇ) ಇನ್‌ಸ್ಪೆಕ್ಟರ್ ಆರೋಪ ಪಟ್ಟಿಗೆ ಸಹಿ ಮಾಡಿದ್ದಾರೆ ಅಷ್ಟೇ.

ಎಸ್ಸಿ, ಎಸ್ಟಿ ಜಾತಿಗೆ ಸೇರದ ವ್ಯಕ್ತಿಯು ಸೌಲಭ್ಯ ಪಡೆಯಲು ಎಸ್ಸಿ ಪ್ರಮಾಣ ಪತ್ರ ಪಡೆದಿದ್ದಾರೆ. ಹೀಗಾಗಿ, ಡಿವೈಎಸ್ಪಿ ಶ್ರೇಣಿಗಿಂತ ಕೆಳಗಿನ ಪೊಲೀಸ್ ಅಧಿಕಾರಿ ತನಿಖೆ ನಡೆಸುವಂತಿಲ್ಲ ಎಂಬ ವಾದವು ಊರ್ಜಿತವಾಗುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಸುಮಲತಾ ಪರ ವಕೀಲ ವಿಜಯಕುಮಾರ್ ಪ್ರಕಾಶ್ ಅವರು ಡಿಸಿಆರ್‌ಇ ಪೊಲೀಸ್ ಠಾಣೆಯಲ್ಲ. ಹೀಗಾಗಿ, ಅವರು ಸಲ್ಲಿಸಿರುವ ಆರೋಪ ಪಟ್ಟಿಯು ಊರ್ಜಿತವಾಗುವುದಿಲ್ಲ.

ಕಾಯಿದೆ ಸೆಕ್ಷನ್ 2ರ ಅಡಿ ಸಂತ್ರಸ್ತರು ಎಸ್ಸಿ/ಎಸ್ಟಿ ಜಾತಿಗೆ ಸೇರಿರಬೇಕು. ಆದರೆ, ದೂರುದಾರೆಯು ಸಂತ್ರಸ್ತರ ವ್ಯಾಪ್ತಿಗೆ ಬಾರದೇ ಇರುವುದರಿಂದ ಆರೋಪ ಪಟ್ಟಿ ಊರ್ಜಿತವಾಗುವುದಿಲ್ಲ ಎಂದು ವಾದಿಸಿದ್ದರು.

ಗಡಿ ನುಸುಳಲೆತ್ನಿಸಿದ ಪಾಕ್‌ನ 7 ಉಗ್ರರಿಗೆ ಬಿಎಸ್ಸೆಫ್ ಗುಂಡು

ಶ್ರೀನಗರ: ಭಾರತ ಗಡಿಯೊಳಕ್ಕೆ ನುಸುಳಿಕೊಂಡು ಬಂದಿದ್ದ ಪಾಕಿಸ್ತಾನದ ಏಳು ಉಗ್ರರನ್ನು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಹೊಡೆದುರುಳಿಸಿದೆ. ಜಮ್ಮು-ಕಾಶ್ಮೀರದ ಸಾಂಬಾ ಜಿಲ್ಲೆಯ ಅಂತಾರಾಷ್ಟ್ರೀಯ ಗಡಿಯಲ್ಲಿ ಮೇ 8ರ ರಾತ್ರಿ 11 ಗಂಟೆಯಲ್ಲಿ ಬಿಎಸ್‌ಎಫ್‌ನಿಂದ ಈ ಕಾರ್ಯಾಚರಣೆ ನಡೆದಿದೆ. ಅಂತಾರಾಷ್ಟ್ರೀಯ ಗಡಿಯಲ್ಲಿ ಉಗ್ರರ ಬಹುದೊಡ್ಡ ಒಳನುಸುಳುವಿಕೆ ಯತ್ನ ವಿಫಲಗೊಂಡಿದೆ.

7 ಉಗ್ರರು ಭಾರತದೊಳಕ್ಕೆ ನುಸುಳಿಕೊಂಡು ಬರಲು ಪಾಕಿಸ್ತಾನದ ಸೇನೆಯ ರೇಂಜರ್ಸ್ ಪಡೆ ನೆರವು ನೀಡಿದೆ. ಉಗ್ರರು ಮತ್ತು ಪಾಕ್ ರೇಂಜರ್ಸ್‌ಗಳನ್ನು ಗುರಿಯಾಗಿಸಿ ಬಿಎಸ್‌ಎಫ್ ತ್ರೀವ್ರ ಸ್ವರೂಪದಲ್ಲಿ ಗುಂಡಿನ ದಾಳಿ ನಡೆಸಿ ಗಡಿ ನುಸುಳುವಿಕೆಯನ್ನು ವಿಫಲಗೊಳಿಸಿದೆ. ಈ ವೇಳೆ ಪಾಕ್ ರೇಂಜರ್ಸ್ ಕೂಡ ಬಿಎಸ್‌ಎಫ್‌ನತ್ತ ಗುಂಡು ಹಾರಿಸಿದ್ದಾರೆ. ಆದರೆ ಬಿಎಸ್‌ಎಫ್‌ನ ಪ್ರಬಲ ದಾಳಿ ಎದುರು ನಿಲ್ಲಲಾರದೇ ಪಾಕ್ ರೇಂಜರ್ಸ್ ಓಡಿ ಹೋಗಿದ್ದಾರೆ. 7 ಉಗ್ರರು ಹತರಾಗಿದ್ದಾರೆ.

ನುಸುಳುಕೋರ ಹತ- ಬಿಎಸ್‌ಎಫ್: ಇನ್ನೊಂದೆಡೆ, ಪಂಜಾಬ್ ರಾಜ್ಯದ ಫೆರೋಜ್‌ಪುರ ಸೆಕ್ಟರ್‌ನಲ್ಲಿ ಗಡಿ ನುಸುಳಿ ಭಾರತದೊಳಕ್ಕೆ ಕಾಲಿಟ್ಟಿದ್ದ ಪಾಕಿಸ್ತಾನ ಪ್ರಜೆಯನ್ನು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಹೊಡೆದುರುಳಿಸಿದೆ.

ಭಾರತ ಕ್ಷಿಪಣಿ ದಾಳಿಗೆ ಪಾಕ್‌ನ ಎಫ್-16 ಪತನ, ಪೈಲಟ್ ಸೆರೆ

ದೆಹಲಿ: ಭಾರತದ ಗಡಿಯಂಚಿನ ರಾಜ್ಯಗಳಲ್ಲಿನ ಸೇನಾನೆಲೆಗಳನ್ನು ಗುರಿಯಾಗಿಸಿಕೊಂಡು ಗುರುವಾರ ಡ್ರೋಣ್ ಮತ್ತು ಕ್ಷಿಪಣಿಗಳಿಂದ ದಾಳಿ ನಡೆಸಲೆತ್ನಿಸಿ ವಿಫಲವಾದ ಪಾಕಿಸ್ತಾನ, ಶುಕ್ರವಾರ ಎಫ್-16 ಯುದ್ಧ ವಿಮಾನವನ್ನು ಭಾರತದ ಗಡಿಯೊಳಕ್ಕೆ ಹಾರಿಸಿ ದಾಳಿ ತೀವ್ರಗೊಳಿಸಲು ಯತ್ನಿಸಿತ್ತು. ಆದರೆ, ಭಾರತದ ಸೇನಾಪಡೆಗಳಲ್ಲಿನ ಶತ್ರು ಕ್ಷಿಪಣಿ ಧ್ವಂಸ ವ್ಯವಸ್ಥೆಯು ಪಾಕ್ ಯುದ್ಧ ವಿಮಾನವನ್ನು ಹೊಡೆದುರುಳಿಸಿದೆ.

ಪಾಕ್‌ನ ಸರ್ಗೋಧಾ ವಾಯುನೆಲೆಯಿಂದ ಹೊರಟು ಭಾರತದ ಗಡಿದಾಟಿ ಬಂದ ಎಫ್-16 ಫೈಟರ್ ಜೆಟ್ ವಿಮಾನವನ್ನು ಭಾರತದ ಸರ್ಫೇಸ್ ಟು ಏರ್ (ನೆಲದಿಂದ ಆಕಾಶಕ್ಕೆ) ಚಿಮ್ಮುವ ಕ್ಷಿಪಣಿ ನಾಶ ಘಟಕವು ಹೊಡೆದುರುಳಿಸಿತು. ನೆಲಕ್ಕುರುಳಿದ ಪಾಕ್‌ನ ಎಫ್-16 ವಿಮಾನದ ಪೈಲಟ್ ಈಗ ಭಾರತದ ಸೇನಾಪಡೆಯ ವಶದಲ್ಲಿದ್ದಾನೆ ಎಂದು ವರದಿಯಾಗಿದೆ.

ನಮ್ಮದು ಸೌಕರ್ಯ ಒದಗಿಸುವ ಕೆಲಸವಷ್ಟೇ: ವಿಶ್ವಬ್ಯಾಂಕ್ ಅಧ್ಯಕ್ಷ

ದೆಹಲಿ: ಸದ್ಯದ ಭಾರತ-ಪಾಕಿಸ್ತಾನ ನಡುವಿನ ಶಸ್ತ್ರಾಸ್ತ್ರ ಸಂಘರ್ಷದಲ್ಲಿ ತನ್ನ ಪಾತ್ರ ಏನೇನೂ ಇಲ್ಲ ಎಂದು ಹೇಳಿರುವ ವಿಶ್ವಬ್ಯಾಂಕ್, 'ನನ್ನದು ಸೌಕರ್ಯ ಮಾಡಿಕೊಡುವ ಕೆಲಸ ಅಷ್ಟೇ. ಅದಕ್ಕೆ ಮೀರಿ ನಮ್ಮ ಪಾತ್ರವೇನೂ ಇಲ್ಲ' ಎಂದು ಸ್ಪಷ್ಟಪಡಿಸಿದೆ. ಈ ವಿಚಾರವನ್ನು ಕೇಂದ್ರ ಸರಕಾರ ಶುಕ್ರವಾರ ಮಾಧ್ಯಮಗಳ ಜತೆ ಹಂಚಿಕೊಂಡಿದೆ.

ವಿಶ್ವ ಬ್ಯಾಂಕ್ ಅಧ್ಯಕ್ಷ ಅಜಯ್ ಬಂಗಾ ಅವರು ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಸದ್ಯ ಭಾರತ-ಪಾಕ್ ನಡುವಿನ ಸಂಘರ್ಷದಲ್ಲಿ ವಿಶ್ವಬ್ಯಾಂಕ್ ಮಧ್ಯಪ್ರವೇಶಿಸಲಿದೆ ಎಂಬ ಸುದ್ದಿಗಳು ಮಾಧ್ಯಮಗಳಲ್ಲಿ ಹರಿದಾಡಿದ್ದವು.

ಈ ಕುರಿತ ಪ್ರಶ್ನೆಗೆ ಉತ್ತರಿಸಿರುವ ಬಂಗಾ, ಮಾಧ್ಯಮಗಳಲ್ಲಿ ಬಹಳಷ್ಟು ಊಹಾಪೋಹಗಳು ಇರಬಹುದು. ಆದರೆ, ವಿಶ್ವಬ್ಯಾಂಕ್ 1960ರಲ್ಲಿ ವಿಶ್ವಸಂಸ್ಥೆಯ ಸಲಹೆಯ ಮೇರೆಗೆ ಭಾರತ-ಪಾಕಿಸ್ತಾನದ ನಡುವಿನ ಸಿಂಧೂ ನದಿ ಒಪ್ಪಂದವಾಗುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟಿತ್ತು, ಅಷ್ಟೆ. ಈಗಲೂ ವಿಶ್ವಬ್ಯಾಂಕ್ ಪಾತ್ರ ಇದಕ್ಕೇ ಮಿತಿಯಾಗಿದೆ ಎಂದು ಹೇಳಿದ್ದಾರೆ. ವಿಶ್ವಬ್ಯಾಂಕ್ ಅಧ್ಯಕ್ಷ ಬಂಗಾ ಅವರು ಉತ್ತರ ಪ್ರದೇಶದಲ್ಲಿರುವ ಹೂಡಿಕೆಗೆ ಇರುವ ಅವಕಾಶಗಳನ್ನು ಕಂಡುಕೊಳ್ಳಲು ಸದ್ಯ ಭಾರತ ಪ್ರವಾಸದಲ್ಲಿದ್ದಾರೆ.

ಮೋದಿ ಹೆಸರು ಹೇಳಲೂ ಭಯ: ಪಾಕ್ ಪ್ರಧಾನಿ ವಿರುದ್ಧ ಕಿಡಿನುಡಿ

ಇಸ್ಲಾಮಾಬಾದ್: ಪಾಕಿಸ್ತಾನದ ಕ್ಷಿಪಣಿ, ಡ್ರೋನ್ ದಾಳಿಗಳನ್ನೆಲ್ಲಾ ಭಾರತದ ಸೇನಾಪಡೆ ವಿಫಲಗೊಳಿಸಿದೆ. ಬದಲಾಗಿ ಭಾರತ ಸೇನಾಪಡೆ ಪಾಕ್‌ನ ವಿವಿಧ ನಗರಗಳ ಮೇಲೆ ಪ್ರತಿದಾಳಿ ಮಾಡಿದೆ. ಇದರಿಂದ ಸಿಟ್ಟಿಗೆದ್ದ ಪಾಕ್ ಸಂಸದರೊಬ್ಬರು ಪ್ರಧಾನಿ ಶೆಹಬಾಜ್ ಷರೀಫ್‌ರನ್ನು 'ಹೇಡಿ, ಹೆದರುಪುಕ್ಕಲ' ಎಂದೆಲ್ಲಾ ಟೀಕಿಸಿದ್ದಾರೆ

ಭಾರತದೊಂದಿಗಿನ ಸೇನಾ ಸಂಘರ್ಷವನ್ನು ಸರಕಾರ ಹೇಗೆ ನಿಭಾಯಿಸುತ್ತಿದೆ ಎಂಬ ಕುರಿತು ಶುಕ್ರವಾರ ಪಾಕ್ ಸಂಸತ್‌ನಲ್ಲಿ ಚರ್ಚೆ ನಡೆದಿದ್ದು, ತೀವ್ರ ಕೋಲಾಹಲ ಸೃಷ್ಟಿಯಾಗಿದೆ. ಸಂಸದ ಶಾಹಿದ್ ಖಟ್ಟಕ್ ಮಾತನಾಡಿ, ಭಾರತದ ವಿರುದ್ಧ ಒಂದೇ ಒಂದು ಹೇಳಿಕೆ ಬಂದಿಲ್ಲ. ಗಡಿಯಲ್ಲಿ ನಿಂತಿರುವ ಪಾಕಿಸ್ತಾನಿ ಸೈನಿಕರು ಸರ್ಕಾರ ಧೈರ್ಯದಿಂದ ಹೋರಾಡುತ್ತದೆ ಎಂದು ನಿರೀಕ್ಷಿಸುತ್ತಾರೆ. ನಮ್ಮ ಪ್ರಧಾನಿ ಮೋದಿ ಹೆಸರನ್ನೂ ಉಚ್ಚರಿಸಲಾಗದಷ್ಟು ರಣಹೇಡಿ, ಹೆದರುಪುಕ್ಕಲ ಎಂದೆಲ್ಲಾ ನಿಂದಿಸಿದ್ದಾರೆ. ಹೀಗಾದರೆ ನೀವು ಗಡಿಯಲ್ಲಿ ನಿಂತು ಹೋರಾಡುವ ನಮ್ಮ ಸೈನಿಕನಿಗೆ ಎಂಥ ಸಂದೇಶ ನೀಡಬಲ್ಲಿರಿ ಎಂದು ವಾಗ್ದಾಳಿ ನಡೆಸಿದ್ದಾನೆ. ಪಾಕಿಸ್ತಾನ ಸೇನೆಯ ವೈಫಲ್ಯ ಕಂಡು ಆಕ್ರೋಶಗೊಂಡಿರುವ ಸಂಸದ ಶಾಹಿದ್, ರಾಜ ಸಿಂಹದಂತೆ ಇದ್ದರೆ ಸೇನೆಯೂ ಸಿಂಹದಂತೆ ಇರುತ್ತದೆ. ರಾಜ ಹೇಡಿಯಾಗಿ ಸೇನೆ ಸಿಂಹದಂತೆ ಇದ್ದರೂ ಪ್ರಯೋಜನವಿಲ್ಲ ಎಂದು ಕಿಡಿಕಾರಿದ್ದಾರೆ.

ಸೇನಾ ಕಾರ್ಯಾಚರಣೆ ನೇರ ಪ್ರಸಾರ ಬೇಡ ಎಂದ ಕೇಂದ್ರ ಸರಕಾರ

ದೆಹಲಿ: ಸೇನಾ ಕಾರ್ಯಾಚರಣೆಯ ನೇರ ವರದಿ ಪ್ರಸಾರ ಮಾಡದಂತೆ ಕೇಂದ್ರ ಸರಕಾರ ಮತ್ತು ಸೇನಾಪಡೆಗಳು ದೇಶದ ಸುದ್ದಿವಾಹಿಗಳಿಗೆ ಮತ್ತು ಡಿಜಿಟಲ್ ವೇದಿಕೆಗಳಿಗೆ ಮನವಿ ಮಾಡಿವೆ.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಜಮ್ಮು-ಕಾಶ್ಮೀರದಲ್ಲಿನ 9 ಉಗ್ರ ನೆಲೆಗಳ ಮೇಲೆ ಬುಧವಾರ ನಸುಕಿನಲ್ಲಿ ದಾಳಿ ಮಾಡಿದ ಭಾರತೀಯ ಸೇನಾಪಡೆಗಳು, ಗುರುವಾರ ಪಾಕ್‌ನ ಹಲವು ನಗರಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ಮೂಲಕ ಮಾಡಿವೆ.

ಶುಕ್ರವಾರವೂ ದಾಳಿ ಮುಂದು ವರಿದಿದೆ. ಈ ಕಾರ್ಯಾಚರಣೆಗಳನ್ನು ನೇರ ಪ್ರಸಾರ ಅಥವಾ ನೈಜ-ಸಮಯದ ವರದಿ ಮಾಡುವುದನ್ನು ಕೈಬಿಡುವಂತೆ ಸೇನೆ ಮನವಿ ಮಾಡಿದೆ.

ಸೇನಾ ಚಟುವಟಿಕೆಗಳ ನೇರ ಪ್ರಸಾರದಿಂದ ಸೇನೆಯ ಯೋಧರ ಜೀವಕ್ಕೆ ಅಪಾಯವಾಗಬಹುದು ಎಂದು ಹೇಳಿದೆ. ಈ ಕುರಿತು ರಕ್ಷಣಾ ಇಲಾಖೆಯೂ ಸೂಚನೆ ನೀಡಿದೆ.

ಇತರರ ಪ್ರಗತಿಯೂ ನನ್ನದೇ ಎಂದು ತಿಳಿ!

ತನಗೆ ಬಾರದ ಲಾಭ ತನಯಂಗೆ ಬಂದಾಗ
ಜನಕನ್ ಅದು ತನದೆಂದು ಸಂತಸಿಪ ತೆರದಿ
ಜನದೊಳಾರ್ಗಾವ ಸೊಗವಾದೊಡಂ ತನದೆನ್ನು-
ತನುಭವಿಪನೋ ಜ್ಞಾನಿ - ಮಂಕುತಿಮ್ಮ||

ತಾನು ಸಾಧಿಸಲಾಗದುದನ್ನು ತನ್ನ ಮಗನೋ ಅಥವಾ ಮಗಳೋ ಸಾಧನೆ ಮಾಡಿದಾಗ, ಆ ಸಾಧನೆಯನ್ನು ನೋಡಿದ ಹೆತ್ತ ತಂದೆ ತಾಯಿಗಳು ಆ ಸಾಧನೆಯು ತಮ್ಮದೇ ಎಂದು ಪರಿಭಾವಿಸಿ ಸಂತೋಷಿಸುತ್ತಾರೋ, ಅದೇ ರೀತಿ ಈ ಜಗದೊಳಗೆ ಅದ್ಯಾವ ಸಿರಿ, ಸೊಗಸು ಕಂಡು ಬಂದರೂ ಆ ಸಿರಿ ಸೊಗಸು ತನ್ನದೆಂದು ಭಾವಿಸಿ ಸಂತೋಷಿಸುತ್ತಾನೋ ಆ ವ್ಯಕ್ತಿಯೇ ಈ ಜಗದೊಳಗೆ ನಿಜವಾದ ಜ್ಞಾನಿಯಾಗಿರುತ್ತಾನೆ ಎಂದು ಈ ಮುಕ್ತಕದಲ್ಲಿ ಹೇಳಿದ್ದಾರೆ.

ತಮ್ಮ ಮಕ್ಕಳು ಎತ್ತರೆತ್ತರಕ್ಕೆ ಏರಿದ ಹಾಗೆ, ತಾವು ಮಾಡದ ಸಾಧನೆಯನ್ನು ಅವರು ಮಾಡಿದುದಾದರೆ ಮಕ್ಕಳು ಮಾಡಿದ ಸಾಧನೆಯನ್ನೇ, ಅವರು ಬೆಳೆದಿರುವುದನ್ನು ತಂದೆತಾಯಿಗಳು ತಾವೇ ಆ ಸಾಧನೆಯನ್ನು ಮಾಡಿದ್ದೇವೆ, ನಾವೇ ಎತ್ತರಕ್ಕೆ ಬೆಳೆದಿದ್ದೇವೆ ಎಂದು ಸಂತೋಷದಿಂದ ಸಂಭ್ರಮಿಸುತ್ತಾರೆ. ಮಕ್ಕಳ ಸಾಧನೆಯನ್ನು ಕಂಡು ಹೆಮ್ಮೆ ಪಡುವಂತಾಗುತ್ತಾರೆ. ಅದೇ ರೀತಿಯಲ್ಲಿ ಈ ಜಗತ್ತಿನಲ್ಲಿ ಮತ್ಯಾರೋ ಸಾಧನೆಗೈದಾಗ, ಮತ್ತೇನೋ ಈ ಜಗತ್ತಿಗೆ ಸಂತೋಷ ತರುವಂತಹ ಸಿರಿ ಸೊಗಸುಂಟು ಮಾಡುವ ಸಂಗತಿಗಳು ಜರುಗಿದಾಗ ಅದನ್ನೂ ಸಹ ಶುಭ್ರ ಮನಸ್ಸಿನಿಂದ ಸಂತೋಷಪಡುವ ವ್ಯಕ್ತಿಯೇ ಈ ಜಗದ ನಿಜವಾದ ಜ್ಞಾನಿಯಾಗಿರುತ್ತಾನೆ. ತಾನು ಪಡೆಯದ ಮತ್ತು ಅನುಭವಿಸದ ಲಾಭವನ್ನು ತನ್ನ ಮಕ್ಕಳು ಗಳಿಸಿ ಅನುಭವಿಸುವುದನ್ನು ಎಲ್ಲಾ ತಂದೆ ತಾಯಿಯವರು ಅನುಭವಿಸುತ್ತಾರೆ. ಇಲ್ಲಿ ಮಕ್ಕಳ ಶ್ರೇಯೋಭಿವೃದ್ಧಿಯ ಬಗ್ಗೆ ಹೆಮ್ಮೆ ಹಾಗೂ ಸಂತಸವಿರುತ್ತದೆ. ಅದೇ ತೆರದಲ್ಲಿ ಈ ಸಮಾಜದ ಏಳಿಗೆ, ಶ್ರೇಯೋಭಿವೃದ್ಧಿಯನ್ನೇ ತನ್ನದೆಂದು ಭಾವಿಸಿಕೊಂಡು ಅದರಲ್ಲಿ ಸಂತೋಷವನ್ನು ಕಾಣುವಂತಹ ಮನಸ್ಥಿತಿಯನ್ನು ಹೊಂದಿರುವಾತನು ನಿಜವಾದ ಜ್ಞಾನಿಯಾಗಿರುತ್ತಾನೆ. ಇಂತಹ ಜ್ಞಾನತ್ವ ಬರಬೇಕಾದರೆ ಮೊದಲಿಗೆ ಅವನಲ್ಲಿ ನಿರಂಹಕಾರತ್ವ, ನಿಸ್ವಾರ್ಥ, ತ್ಯಾಗ ಮನೋಭಾವಗಳನ್ನು ಹೊಂದಿರಬೇಕಾಗುತ್ತದೆ. ಇಂತಹ ಸದ್ಗುಣಗಳನ್ನು ಹೊಂದಿದಾತ ಪರಮಜ್ಞಾನಿಯೇ ಆಗಿರುತ್ತಾನೆ. ಇದನ್ನೇ ಈ ಕಗ್ಗದಲ್ಲಿ 'ಜನದೊಳಾರ್ಗಾವ ಸೊಗವಾದೊಡಂ ತನದೆನ್ನುತನುಭವಿಪನೋ ಜ್ಞಾನಿ' ಎಂದಿರುವುದು. ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ. 'ಇಲ್ಲಿ ಎಲ್ಲರನ್ನೂ ನನ್ನಂತೆಯೇ, ನನ್ನ ಮಕ್ಕಳಂತೆಯೇ' ಎಂದು ಪರಿಭಾವಿಸುವ ಮನಸ್ಥಿತಿ ಇರುವುದು ಮುಖ್ಯವಾಗುತ್ತದೆ. ಇತರರ ಸಂತೋಷವನ್ನು ತನ್ನ ಸಂತೋಷ ಎಂದು ಪರಿಗಣಿಸುವುದು ಸಾಮಾನ್ಯದ ಕೆಲಸವೇನಲ್ಲ. ಈ ಮನಸ್ಥಿತಿ ಬರಬೇಕಾದರೆ 'ಸ್ವಾರ್ಥವಿಲ್ಲದ ಬದುಕು ಸರ್ವ ಕಾಲಕ್ಕೂ ಶ್ರೇಷ್ಠ' ಎಂಬ ಭಾವ ಮನದೊಳಗಿರಬೇಕು. ಪರರ ಏಳಿಗೆಯನ್ನು ಕಂಡು ಖುಷಿಸುವ ಮನಸ್ಸು ನಮ್ಮದಾಗಬೇಕು.

ವ್ಯಕ್ತಿಗಳು ಜ್ಞಾನಿಗಳೇಕೆಂದರೆ ಬರೀ ಓದಿನಲ್ಲಿ ಜ್ಞಾನಿಯಾಗುವುದಿಲ್ಲ, ಓದಿನಿಂದ ಗಳಿಸಿದ ಅರಿವನ್ನು ಜೀವನದಲ್ಲೂ ರೂಢಿಸಿಕೊಂಡು, ಸ್ವಾರ್ಥರಹಿತ ಚಿಂತನೆಗಳಿಂದ ಕೂಡಿದ ಮನೋಭಾವವಿರುವವರಿಗೆ, ಮಮಕಾರ, ಸ್ವಾರ್ಥ, ಈರ್ಷ್ಯೆಗಳಂಥ ದುರಾಲೋಚನೆಗಳಿಲ್ಲದೆ ನಿರ್ಮೋಹದಿಂದ, ನಿರಪೇಕ್ಷೆಯಿಂದ ಜಗತ್ತನ್ನು ನೋಡುವ ಮನೋಭಾವ ಇರುತ್ತಾದ್ದರಿಂದ ನಿರ್ವಿಕಲ್ಪದಲ್ಲಿ ಅವರು ಜ್ಞಾನಿಗಳು. ಸದಾ ಕಾಲ ಅನ್ಯರನ್ನು ನೋಡಿ, ಕರುಬುತ್ತಾ, ಈರ್ಷ್ಯೆಯಿಂದ, ಉರಿಯಿಂದ, ಕೊರಗುತ್ತಾ ಅವರಲ್ಲಿರುವುದು ತನ್ನಲ್ಲಿಲ್ಲವಲ್ಲ ಎಂದು ಗೋಳಿಡುತ್ತಾ ಬಾಳುವವರ ಜೀವ ನಿತ್ಯ ನೋವಿನಿಂದ ಕೂಡಿರುತ್ತದೆ. ನಮಗೆ ಅಂತಹ ಗೋಳು, ಈರ್ಷ್ಯೆ, ಉರಿ ನಮ್ಮಲ್ಲಿ ಬೇಡವಾಗಿ, ನಮ್ಮ ಸುಖ ಸಂತೋಷವನ್ನು ಅನ್ಯರಿಗೂ ಹಂಚುತ್ತಾ, ಅನ್ಯರ ಸುಖ ಸಂತೋಷವನ್ನು ನಮ್ಮದೆಂದು ಭಾವಿಸಿ ಸಂತೋಷಪಡುವ ಮನೋಭಾವ ಬೆಳೆಸಿಕೊಳ್ಳಬೇಕು. ನಮಗಂತಹ ಮನೋಭಾವವಿದೆಯೇ ಎಂದು ಆತ್ಮಾವಲೋಕನ ಮಾಡಿಕೊಳ್ಳುತ್ತಾ ಸಾಧ್ಯವಾದ ಅಂತಹ ಮನೋಭಾವನನ್ನು ಬೆಳೆಸಿಕೊಂಡರೆ ಬದುಕು ಸಾರ್ಥಕವಾಗುತ್ತದೆ ಎಂಬುದು ಈ ಮುಕ್ತಕದ ಹೂರಣವಾಗಿದೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಬಳೆ ತೊಡಿಸಿಕೊಂಡು ತವರಲ್ಲಿ ಲೆಕ್ಕ ಕೇಳು ಎಂದ ದುರ್ಗಾಮಾತೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ದುರ್ಗಾಪುರ ಗ್ರಾಮದಲ್ಲಿ ಬಳೆಗಾರ ಮಲ್ಲಯ್ಯ ಬಳೆ ವ್ಯಾಪಾರ ಮಾಡುತ್ತಿದ್ದನು. ಆತನು ಗೌರಿ ದೇವಿಯ ಭಕ್ತನಾಗಿದ್ದು, ಬಳೆಗಳನ್ನು 'ಗೌರಿಬಳೆ' ಎಂದೆ ಕೂಗುತ್ತಿದ್ದನು. ಎಂದಿನಂತೆ ಅಂದು ಬಳೆ ವ್ಯಾಪಾರ ಮಾಡಲು ಕಮಲಾ ಪುರ ಗ್ರಾಮದ ಕಡೆ ಹೊರಟಿದ್ದನು. ಊರು ದಾಟಿ ನಿರ್ಜನ ಪ್ರದೇಶದತ್ತ ಬರುತ್ತಿದ್ದನು. ಮಧ್ಯದಲ್ಲಿ ಕಮಲ ಪುಷ್ಪಗಳಿಂದ ತುಂಬಿದ ಸುಂದರವಾದ ಕೆರೆ ಏರಿಯ ಮೇಲೆ, ಅರಿಶಿನ ಹಚ್ಚಿ ಹಣೆಯಲ್ಲಿ ಕಾಸಿನಗಲ ಕುಂಕುಮ, ಕೈ ತುಂಬಾ ಬಳೆ ತೊಟ್ಟು ಸಾಕ್ಷಾತ್ ಮಹಾಲಕ್ಷ್ಮಿಯಂತಿದ್ದ ಹೆಣ್ಣು ಮಗಳು ಬರುತ್ತಿದ್ದಳು. ಅವಳು ಬಳೆಗಾರನನ್ನು ನೋಡಿ ಮಲ್ಲಾರ ನನ್ನ ಕೈಗೂ ತುಂಬಾ ಬಳೆಗಳನ್ನು ತೊಡಿಸು ಎಂದಳು.

ಮಲ್ಲಯ್ಯ, ಬಾ ತಾಯಿ ಎಂದು ಒಂದು ಮರದ ಕೆಳಗೆ ಕುಳಿತು ತನ್ನ ಬಳೆದಿಂಡಿನ ಗಂಟನ್ನು ಬಿಚ್ಚಿ ಹರಡಿ ಅವಳಿಗೆ ಬಳೆಯನ್ನು ತೋರಿಸಿದ. ಹೊಳೆಯುವ ಕೆಂಪು, ಹಸಿರು, ಹಳದಿ, ನೀಲಿ ಬಳೆಗಳನ್ನು ಆರಿಸಿ ಎರಡೂ ಕೈಗಳ ತುಂಬಾ ಹಾಕಿಸಿ ಕೊಂಡಳು. ಬಳೆಗಾರನಿಗೆ, ಮಲ್ಲಾರ ಇದು ನನ್ನ ಗಂಡನ ಮನೆ, ಪಕ್ಕದ 'ಗೌರಿಹಳ್ಳಿ'ಯ ರಥ ಬೀದಿಯಲ್ಲಿ ಊರ ಹೆಂಚಿನ ದೊಡ್ಡ ಮಾಳಿಗೆ ಮನೆ ಇದೆ. ಅದು ನನ್ನ ತವರು ಮನೆ ಅಲ್ಲಿಗೆ ಹೋಗಿ, ನಿಮ್ಮ ಮಗಳ ಕೈಗೆ ಬಳೆ ಹಾಕಿದ್ದೇನೆ ಅದರ ಕಾಸು ಕೊಡಿ ಎಂದು ನನ್ನ ತಂದೆಯನ್ನು ಕೇಳಿ ತೆಗೆದುಕೊ, ಇನ್ನೂ ಒಂದು ವಿಚಾರ, ನಾನು ತವರಿಗೆ ಹೋಗದೆ ವರ್ಷಗಳ ಮೇಲಾಯಿತು. ಇದರಿಂದ ಅವರಿಗೆ ಕೋಪ ಬಂದಿದೆ. ನನಗೆ ಮಗಳೇ ಇಲ್ಲ ಎನ್ನಬಹುದು. ಆದರೆ ನೀನು ನಂಬಬೇಡ ಕಾಸು ಕೊಡದಿದ್ದರೆ, ದೇವರ ಗೂಡಿನಲ್ಲಿ ಕುಂಕುಮದ ಭರಣಿ ಇದೆ, ಅದರಲ್ಲಿ ಕಾಸು ಇದೆ ಅದನ್ನೇ ಕೊಡಲು ಹೇಳು ಎನ್ನುತ್ತಲೇ ಕೆರೆಯ ಹತ್ತಿರ ಹೋದಳು.

ಮಲ್ಲಯ್ಯ ಗೌರಿಹಳ್ಳಿಗೆ ಬಂದು ನಡೆದದ್ದು ಹೇಳಿದಾಗ ಅವಧಾನಿಗಳು ಯಾವ ಮಗಳು, ಯಾವ ಬಳೆ ನೀನು ಏನು ಹೇಳುವೆ? ಎಂದು ಪ್ರಶ್ನಿಸಿದರು. ಮಲ್ಲಯ್ಯ ಸ್ವಾಮಿ, ನೀವು ಹೀಗೆ ಹೇಳುತ್ತೀರಿ ಎಂದು ನಿಮ್ಮ ಮಗಳು ಹೇಳಿದ್ದಳು. ನಿಮ್ಮ ಮನೆ ದೇವರ ಗೂಡಿನ ಒಂದು ಕಪಾಟಿನ ಮೂಲೆಯಲ್ಲಿ ಕುಂಕುಮದ ಭರಣಿಯಲ್ಲಿ ಕಾಸು ಇದೆಯಂತೆ ಅದನ್ನೇ ತಂದು ಕೊಡಿ ಎಂದನು.

ಅವಧಾನಿಗಳು ಕೂಡಲೇ ದೇವರ ಕೋಣೆಗೆ ಬಂದು ಕಪಾಟಿನಲ್ಲಿದ್ದ ದೇವರ ಸಾಮಾನು ಸರಿಸಿ ನೋಡುತ್ತಾರೆ, ಮೂಲೆಯಲ್ಲಿ ಒಂದು ಕಂಚಿನ ಭರಣಿ ಇದ್ದು ಅದರ ಮುಚ್ಚಳ ತೆಗೆದಾಗ ಸಂಪುಟದೊಳಗೆ ಸಿಂಹವಾಹಿನಿ ಖಡ್ಗಧಾರಣಿ ದುರ್ಗಾಮಾತೆಯ ವಿಗ್ರಹವಿತ್ತು. ಅದದೊಳಗೆ ಒಂದು ಚಿನ್ನದ ಲಕ್ಷ್ಮಿ ಕಾಸೂ ಕಂಡಿತು. ಬಳೆಗಾರನಿಗೆ ಕಾಸನ್ನು ಕೊಟ್ಟು, ನೀನು ನನ್ನ ಮಗಳನ್ನು ಎಲ್ಲಿ ನೋಡಿದೆ ಅಲ್ಲಿಗೇ ಕರೆದುಕೊಂಡು ಹೋಗಿ ತೋರಿಸು ಎಂದರು. ಮಲ್ಲಯ್ಯ ಕೆರೆಯ ಸಮೀಪ ಬಂದು ನೋಡುತ್ತಾನೆ, ಅಲ್ಲಿ ಯಾರೂ ಇರಲಿಲ್ಲ. ಮಲ್ಲಯ್ಯ ಅಮ್ಮಾ ದೇವಿ, ತಾಯಿ, ಗೌರಮ್ಮ ಎಲ್ಲಿರುವೆ ಬಾಮ್ಮಾ ಎಂದು ಕೂಗಿದ. ನನ್ನನ್ನು ಸುಳ್ಳುಗಾರ ಎನಿಸುವೆಯಾ? ಬಾ ತಾಯಿ ಎಂದು ಕೈಮುಗಿದು ಪ್ರಾರ್ಥಿಸಿದನು. ಸ್ವಲ್ಪ ಹೊತ್ತಿಗೆ ಕೆರೆಯೊಳಗಿಂದ ಬಳೆ ತೊಟ್ಟಿರುವ ಎರಡು ಕೈಗಳು ಮೇಲೆ ಬಂದಿತು. ಅದು ಮಲ್ಲಾರ ತೊಡಿಸಿದ್ದ ಕೆಂಪು- ಹಸಿರು -ಹಳದಿ ಬಳೆಗಳೇ ಆಗಿದ್ದವು. ಅನಾಯಾಸವಾಗಿ ಊರವರಿಗೆ ತಾಯಿಯ ಹಸ್ತದ ದರ್ಶನವಾಯಿತು.

ಅವಧಾನಿಗಳಿಗೆ ಊರವರೆಲ್ಲ ನಿಮ್ಮ ತಲೆಮಾರಿನವರು ದುರ್ಗಾಮಾತೆ ಪೂಜಿಸುವುದನ್ನು ಬಿಟ್ಟು ಒಳಗೆ ಇಟ್ಟಿದ್ದರಿಂದ ಆಕೆಯನ್ನು ಪೂಜಿಸುವಂತೆ ಈ ರೀತಿಯಾಗಿ ತಾಯಿ ನಿಮಗೆ ನೆನಪಿಸಿದ್ದಾಳೆ ಎಂದರು. ಅವಧಾನಿಗಳು ಸಂತೋಷದಿಂದ ಮನೆಗೆ ಬಂದು, ಕೆಲವೇ ದಿನಗಳಲ್ಲಿ ಶುಭ ಮುಹೂರ್ತದಲ್ಲಿ ದೇವಿಯ ಆರಾಧನೆಯ ಸಂಕಲ್ಪ ಮಾಡಿ, ಊರವರನ್ನೆಲ್ಲ ಕರೆದು ಪೂಜೆ ಮಾಡಿ ಅನ್ನದಾನ ಮಾಡಿ ದುರ್ಗಾ ಮಾತೆಯ ಆರಾಧನೆಯನ್ನು ಆರಂಭ ಮಾಡಿದರು. ನಮ್ಮ ಪೂರ್ವಜರು ಹಾಕಿ ಕೊಟ್ಟಿರುವ ಮನೆದೇವರ ಆರಾಧನೆಯ ಪರಿಪಾಠವನ್ನು ಎಂದಿಗೂ ಕೈ ಬಿಡಬಾರದು. ಮರೆತರೆ ಅದನ್ನ ನೆನಪಿಸುವ ಒಂದಲ್ಲ ಒಂದು ಘಟನೆ ನಡೆದೇ ನಡೆಯುತ್ತದೆ. ಇದು ನಿಮ್ಮ ಅನುಭವಕ್ಕೂ ಬಂದಿರಬಹುದು.

ಯೋಗ ಮಾಯೆ

ಕೃಷ್ಣ ಹೇಳುತ್ತಾನೆ-ತನ್ನ ಕೆಳಮಟ್ಟದ ಸ್ವಭಾವ (ಅಪರ ಪ್ರಕೃತಿ) ವ್ಯಕ್ತವಾಗಿದೆ. (ಮನುಷ್ಯ) ಹಾಗೂ ಮೇಲಿನ ಮಟ್ಟದ ಸ್ವಭಾವ (ಪರ ಪ್ರಕೃತಿ) ಅವ್ಯಕ್ತವಾದ ಜೀವನಾಂಶವಾಗಿದೆ. ಯೋಗಮಾಯೆಯು (ಮೂರು ಗುಣಗಳಿಂದ ಉದ್ಭವಾದದ್ದು) ಅವುಗಳನ್ನು ಬೇರ್ಪಡಿಸುತ್ತದೆ ಹಾಗೂ ಜನಿಸದ ಅವಿನಾಶಿಯಾದ ಭೂತ, ವರ್ತಮಾನ, ಭವಿಷ್ಯತ್ತನ್ನು ಬಲ್ಲ ಅವನನ್ನು (ಪರಮಾತ್ಮ) ತಿಳಿಯುವಲ್ಲಿ ನಮ್ಮನ್ನು ತಡೆಯುತ್ತದೆ (7.25,7.26). ಯೋಗ ಮಾಯೆಯು ಕನ್ನಡಿಗಳಿಂದ ತುಂಬಿದ ಕೋಣೆಯಂತಿದ್ದು ನಮ್ಮನ್ನು ಪ್ರತಿಬಿಂಬಿಸುತ್ತದೆ ಹಾಗೂ ಅದರಾಚೆ ಏನಿದೆ ಎಂಬುದನ್ನು ತಿಳಿಯಲು ಅಸಾಧ್ಯ. ಈ ಸಾಮರ್ಥ್ಯ ಪ್ರತಿ ವಸ್ತುವು ವ್ಯಕ್ತವಾಗಿದೆ ಎಂಬುದನ್ನು ತಿಳಿಯ ಲಷ್ಟಕ್ಕೇ ನಮ್ಮನ್ನು ಮಿತಗೊಳಿಸುತ್ತದೆ. ಹೀಗಾಗಿ ಪ್ರತಿಯೊಬ್ಬರ ಹಿಂದಿರುವ ಜೀವನಾಂಶ 'ವನ್ನು ನಾವು ತಿಳಿಯಲಾಗುವುದಿಲ್ಲ. ಇದನ್ನು ಕೃಷ್ಣ ಮೂರ್ಖತನ ಎಂದು ಕರೆಯುತ್ತಾನೆ. (7.24). ಇದು ಮನುಷ್ಯ ಮತ್ತು ಮನುಷ್ಯನ ನಡುವೆ ನಡೆಯುವ ಪರಸ್ಪರ ಪ್ರಕ್ರಿಯೆ (ಪರಮಾತ್ಮನನ್ನು ಗಮನಿಸದೇ) ಅಲ್ಲದೇ ಮತ್ತೇನು ಅಲ್ಲ ಇದು ರಾಕ್ಷಸರ ಮಾರ್ಗವಾಗಿದೆ.(7.15)

ವಿದ್ಯುತ್ (ಶಕ್ತಿ) ಹೆಚ್ಚಿನ ವೋಲ್ಟೇಜಿನಿಂದ ಕಡಿಮೆ ವೋಲ್ಟೇಜಿನ ಕಡೆ ಹರಿಯುತ್ತದೆ. ಆಗ ವಿದ್ಯುತ್ ಉಪಕರಣಗಳನ್ನು ಕ್ರಿಯಾಶೀಲಗೊಳಿಸುತ್ತದೆ. ರೂಪಕವಾಗಿ ನಾವು ಪರಮಾತ್ಮನನ್ನು ಹೆಚ್ಚಿನ ವೋಲ್ಟೇಜ್ ಬಿಂದು ಎಂದು ತಿಳಿದರೆ ಶ್ರದ್ಧೆ ಎಂಬ ಕೇಬಲ್ ಮೂಲಕ ನಮಗೆ ಬರುವ ಶಕ್ತಿಯನ್ನು ಭಗವಂತನ ಅನುಗ್ರಹ ಎಂದು ಹೇಳಬಹುದು. ಇದು ನಮ್ಮ ಆಸೆಗಳನ್ನು ನೆರವೇರಿಸಿಕೊಳ್ಳಲು ಸಹಾಯ ಮಾಡುತ್ತದೆ. ಇದನ್ನು ಮನುಷ್ಯ ಮತ್ತು ಪರಮಾತ್ಮನ ನಡುವಿನ ಪರಸ್ಪರ ಪ್ರಕ್ರಿಯೆ ಎಂದು ಕರೆಯಬಹುದು.

ಎರಡೂ ಬಿಂದುಗಳು ಒಂದೇ ಪ್ರಮಾಣದ ವೋಲ್ಟೇಜ್ ಹೊಂದಿದರೆ ಅದು ಪರಮಾನಂದದ ಸ್ಥಿತಿ. ಮತ್ತು ಕೃಷ್ಣನು ಜ್ಞಾನಿಯನ್ನು ನಾನೇ ಎಂದು ಪರಿಗಣಿಸುತ್ತೇನೆ ಎಂದು ಹೇಳಿದಾಗ ಇದೇ ಅರ್ಥವಾಗುತ್ತದೆ (ಆತ್ಮದಲ್ಲಿ ಸ್ಥಿರವಾಗಿರುವುದು). ಆತ್ಮದೊಂದಿಗೆ ಅವನು ನನ್ನಲ್ಲಿ ಮಾತ್ರ ಅಂತಿಮ ಗುರಿಯೆಂದು ಸ್ಥಿರವಾಗಿರುತ್ತಾನೆ.(7.18) ಅಂತಹ ಜ್ಞಾನಿಯ ಎಲ್ಲವೂ ವಾಸುದೇವ ಸರ್ವವ್ಯಾಪಿ ಎಂದು ತಿಳಿದು ನನ್ನನ್ನು ತಲುಪುತ್ತಾನೆ. ಅಂತ ಮಹಾತ್ಮನು ಸಿಗುವುದು ಕಷ್ಟ (7.19). ಮೂಲಭೂತವಾಗಿ ಜ್ಞಾನಿಯು ಯೋಗ ಮಾಯೆಯನ್ನು ಪರಮಾತ್ಮನ ಅದೇ ಅನುಗ್ರಹವನ್ನು ಉಪಯೋಗಿಸಿ ಗೆಲ್ಲುತ್ತಾನೆ ಮತ್ತು ಎಲ್ಲವೂ ಪರಮಾತ್ಮನೇ ಎಂಬುದನ್ನು ಆನಂದದಿಂದ ತಿಳಿಯುತ್ತಾನೆ

ಸಾಮಾನ್ಯವಾಗಿ ಈ ಲೌಕಿಕ ಜಗತ್ತಿನಲ್ಲಿ ನಮ್ಮ ಗುರಿ ಸಂಗ್ರಹಿಸುವುದು ಮತ್ತು ಆಸೆಗಳನ್ನು ನೆರವೇರಿಸುವುದು. ಆದರೆ ಪರಮಾತ್ಮನ ಗುರಿ ನಮ್ಮನ್ನು ಖಾಲಿ ಮಾಡಿ, ನಮ್ಮ ಮೋಹ, ಜಿಗುಪ್ಸೆ ಮತ್ತು ದ್ವೇಷವನ್ನು ಮಹಾಸಾಗರದಲ್ಲಿ ಉಪ್ಪಿನ ಗೊಂಬೆ ಕರಗಿ ನೀರಾಗುವಂತೆ ಕರಗಿಸಿ ನೀರಿನಲ್ಲಿ ಒಂದಾಗಿಸುವುದಾಗಿದೆ.(ತನ್ನಲ್ಲಿ)

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಕುದುರೆಯ ಮುಖವೆಂಬ ಒಂದು ಪ್ರಸಿದ್ಧ ನಾಟಕ (5)
6. ಯಾರಿದ್ದೀರಿ, ಮಾಡಬೇಕಿದೆ ಸಿದ್ಧತೆ (3)
7. ಇವನಾ ಗ್ರೀಸ್ ದೇಶದಿಂದ ಬಂದವನು (3)
8. ಒಡವೆಗೆ ಮತ್ತೊಂದು ಹೆಸರು (2)
10. ಮತ್ತೆ ಮತ್ತೆ ವಿಚಾರ ಮಾಡುವುದು (3)
12. ತಾತ ಒತ್ತು ಕಳೆದುಕೊಂಡಾಗ ಆಡು (2)
13. ರಜಾ ದಿನದಲ್ಲಿ ಬಟ್ಟೆ ಒಗೆಯುತ್ತಾನೆ (3)
14. ಮಾಡಿದ ಕೆಲಸಕ್ಕೆ ಸಿಕ್ಕಿದ ಕೂಲಿ (3)
15. ಸಸಿಗಳನ್ನು ಬೆಳೆಸುವ ಪಾತಿ (2)
16. ರುಚಿ ತಿಳಿಸುವ ಅಂಗ, ನಾಲಗೆ (3)
18. ಹಾಲು ಕಾಯಿಸಿದಾಗ ಮೇಲೆ ತೇಲುತ್ತದೆ (2)
22. ಚಿನ್ನಕ್ಕೆ ಮತ್ತೊಂದು ಹೆಸರಿದು (3)
23. ಆತನ ಸಂಬಳ ತಿರುಗಿ ಬಂದಿದೆ (3)
24. ಮಧ್ಯೆ ಕೈಯಿರುವ ಉಪಕರಣ (5)

ಮೇಲಿಂದ ಕೆಳಕ್ಕೆ

1. ಕಾಣದಂತೆ ಮಾಯವಾಗುವುದು (4)
2. ಹಣದ ಮಧ್ಯೆ ಕಂಡಿದೆ ಜಿಂಕೆ (3)
3. ಭವಿಷ್ಯವಲ್ಲ, ಈಗಿನ ಕಾಲ (4)
4. ಎರಡು ಕಡೆಯಿಂದ ನೋಡಿದರೂ ಅಕ್ಷಿಯೇ (3)
5. ಚಿತ್ತದಲ್ಲಿ ಜನಿಸಿದ ಮನ್ಮಥ (4)
9. ಗಡಿಯಲ್ಲಿದೆ ವ್ಯಾಯಾಮ ಶಾಲೆ (3)
10. ಮರ ಹತ್ತುವುದೇ ಮೊಸಳೆ (3)
11. ವಂದನೆಗೆ ಮತ್ತೊಂದು ಹೆಸರು (3)
12. ಆಕೆ ಮಾಡಿಕೊಂಡ ವಿಜ್ಞಾಪನೆ (3)
15. ಬೆಲೆಬಾಳುವ ರತ್ನದ ಮಾಲೆ (4)
17. ತಕ್ಕ ಅಥವಾ ಯೋಗ್ಯವಾದ (4)
19. ಈಡೇರು ಎಂದರ್ಥ (4)
20. ಸಂಪೂರ್ಣ ಎನ್ನುವುದು ಇಲ್ಲಿ ಅಸ್ತವ್ಯಸ್ತವಾಗಿದೆ (3)
21. ಸಿರಿಧಾನ್ಯ ಚಲ್ಲಾಪಿಲ್ಲಿಯಾಗಿದೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2. ಹಯವದನ 6. ತಯಾರಿ 7. ಯವನ 8. ನಗ 10. ಮನನ 12. ಅಜ 13. ರಜಕ 14. ಮಜೂರಿ 15. ಮಡಿ 16. ರಸನ 18. ಕೆನೆ 22. ಹಾಟಕ 23. ನತವೇ 24. ಸಲಕರಣೆ

ಮೇಲಿಂದ ಕೆಳಕ್ಕೆ
1. ಅಂತರ್ಧಾನ 2. ಹರಿಣ 3. ವರ್ತಮಾನ 4. ನಯನ 5. ಮನಸಿಜ 9. ಗರಡಿ 10. ಮಕರ 11. ನಮನ 12. ಅರಿಕೆ 15. ಮಣಿಹಾರ 17. ಸಮರ್ಪಕ 19. ನೆರವೇರು 20. ಲಕಸ 21. ವನಣೆ

ಸಮಾಚಾರ ಸಣ್ಣದಲ್ಲ

ಸೇನೆಗೆ ಕೊಹ್ಲಿ ಸಂದೇಶ

ದೆಹಲಿ: ಭಾರತ ಮತ್ತು ಪಾಕಿಸ್ತಾನ ನಡುವಣ ಯುದ್ಧ ಭೀತಿಯಿಂದಾಗಿ ಐಪಿಎಲ್ ಟೂರ್ನಿಯನ್ನು ಬಿಸಿಸಿಐ ಸ್ಥಗಿತಗೊಳಿಸಿದ ಬೆನ್ನಲ್ಲೇ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಮೌನ ಮುರಿದಿದ್ದಾರೆ. ಭಾರತೀಯ ಸೇನೆಯ ಪರ ಸಾಮಾಜಿಕ ಮಾಧ್ಯಮ ಇನ್ ಸ್ಟಾಗ್ರಾಂನಲ್ಲಿ ಸಂದೇಶ ಪ್ರಕಟಿಸಿದ ಅವರು, 'ನಾವು ಒಗ್ಗಟ್ಟಾಗಿರು ತ್ತೇವೆ, ಭಾರತೀಯ ಸೇನೆಗೆ ಸೆಲ್ಯೂಟ್' ಎಂದಿದ್ದಾರೆ. ಇದ ರೊಂದಿಗೆ, ಐಪಿಎಲ್ ಸ್ಥಗಿತದ ನಂತರ ಮೊದಲ ಬಾರಿಗೆ ಕೊಹ್ಲಿ ಪ್ರತಿಕ್ರಿಯೆ ನೀಡಿದಂತಾಗಿದೆ. 'ಈ ಕಷ್ಟದ ಸಮಯ ದಲ್ಲಿ ನಮ್ಮ ದೇಶವನ್ನು ರಕ್ಷಿಸುತ್ತಿರುವುದಕ್ಕಾಗಿ ಭಾರತೀಯ ಸೇನೆಗೆ ಸೆಲ್ಯೂಟ್. ನಾವು ನಮ್ಮ ಸಶಸ್ತ್ರ ಪಡೆಗಳೊಂದಿಗೆ ಒಗ್ಗಟ್ಟಿನಿಂದ ಇರುತ್ತೇವೆ. ನಮ್ಮ ವೀರಯೋಧರ ಅಚಲ ಧೈರ್ಯ, ಅವರು ಮತ್ತು ಅವರ ಕುಟುಂಬದವರು ನಮ್ಮ ದೇಶಕ್ಕಾಗಿ ಮಾಡುವ ತ್ಯಾಗಗಳಿಗೆ ನಾವು ಸದಾ ಕೃತಜ್ಞರಾಗಿರುತ್ತೇವೆ' ಎಂದು ವಿರಾಟ್ ಕೊಹ್ಲಿ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಕ್ರೀಡಾಂಗಣಕ್ಕೆ ಇ ಮೇಲ್ ಬೆದರಿಕೆ

ದೆಹಲಿ: ಪಾಕಿಸ್ತಾನ ಮತ್ತೊಮ್ಮೆ ಹೇಡಿತನದ ಕೃತ್ಯ ಎಸಗಿದ್ದು, ಭಾರತದಲ್ಲಿ ಮತ್ತೊಂದು ಕ್ರೀಡಾಂಗಣ ವನ್ನು ಸ್ಫೋಟಿಸುವುದಾಗಿ ಮೇಲ್ ಮೂಲಕ ಬೆದರಿಕೆ ಹಾಕಿದೆ. ಡಿಡಿಸಿಎಯ ಅಧಿಕೃತ ಮೇಲ್‌ಗೆ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣವನ್ನು ಸ್ಫೋಟಿಸುವ ಬೆದರಿಕೆ ಇರುವ ಇಮೇಲ್ ಬಂದಿದೆ. ಈ ಬಗ್ಗೆ ಡಿಡಿಸಿಎ ಅಧಿಕಾರಿಗಳು ದೆಹಲಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮೇಲ್‌ನಲ್ಲಿ 'ಭಾರತದಾದ್ಯಂತ ಪಾಕಿಸ್ತಾನಕ್ಕೆ ನಿಷ್ಠರಾಗಿರುವ ಸ್ಲೀಪರ್ ಸೆಲ್‌ಗಳನ್ನು ನಾವು ಹೊಂದಿದ್ದೇವೆ. ನಾವು ಅವುಗಳನ್ನು ಆಪರೇಷನ್ ಸಿಂದೂರ್‌ಗಾಗಿ ಸಕ್ರಿಯಗೊಳಿಸುತ್ತೇವೆ. ಹಾಗಾಗಿ ದೆಹಲಿ ಕ್ರೀಡಾಂಗಣವನ್ನು ನಾವು ಸ್ಫೋಟಿಸುತ್ತೇವೆ' ಎಂದು ಬರೆಯಲಾಗಿದೆ. ಇದಾದ ನಂತರ ಕ್ರೀಡಾಂಗಣದ ಭದ್ರತೆಯನ್ನು ಹೆಚ್ಚಿಸಲಾಗಿದ್ದು, ದೆಹಲಿ ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಪಾಕಿಸ್ತಾನದಿಂದ ಇದೇ ರೀತಿಯ ಮೇಲ್ ಬಂದಿತ್ತು. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದ ಮೇಲೆ ಬಾಂಬ್ ದಾಳಿ ಮಾಡುವ ಬೆದರಿಕೆ ಹಾಕಲಾಗಿತ್ತು. ಗುಜರಾತ್ ಕ್ರಿಕೆಟ್ ಅಸೋಸಿಯೇಷನ್‌ನ ಅಧಿಕೃತ ಇಮೇಲ್‌ಗೆ ಬಂದಿದ್ದ ಮೇಲ್‌ನಲ್ಲಿ ಕ್ರೀಡಾಂಗಣವನ್ನು ಬಸ್ ಮೂಲಕ ಬಂದು ಸ್ಫೋಟಿಸುತ್ತೇವೆ ಎಂದು ಬರೆಯಲಾಗಿತ್ತು.

ಭಾರತ-ಪಾಕಿಸ್ತಾನ ಗಡಿ ಉದ್ವಿಗ್ನತೆ | ಬಿಸಿಸಿಐಯಿಂದ ಮಹತ್ವದ ಘೋಷಣೆ | ನಿರ್ಧಾರ ಸ್ವಾಗತಿಸಿದ ಫ್ರಾಂಚೈಸಿಗಳು

ಐಪಿಎಲ್ ಕ್ರಿಕೆಟ್ ಟೂರ್ನಿ ಮುಂದಕ್ಕೆ

ದೆಹಲಿ: ಭಾರತ ಮತ್ತು ಪಾಕಿಸ್ತಾನ ನಡುವಿನ ಗಡಿ ಉದ್ವಿಗ್ನತೆಯ ಹಿನ್ನೆಲೆಯಲ್ಲಿ, ಇಂಡಿಯನ್ ಪ್ರೀಮಿಯರ್ ಲೀಗ್-2025 (ಐಪಿಎಲ್) ಪಂದ್ಯಾವಳಿಯ ಕುರಿತು ಶುಕ್ರವಾರ ಅಧಿಕೃತ ಮಾಹಿತಿ ನೀಡಿರುವ ಬಿಸಿಸಿಐ, ಪಂದ್ಯಾವಳಿಯನ್ನು ಮುಂದೂಡಿರುವುದಾಗಿ ಸ್ಪಷ್ಟಪಡಿಸಿದೆ. ದೇಶದ ಮತ್ತು ವಿದೇಶಿ ಆಟಗಾರರ ಸುರಕ್ಷತೆ, ಕೀಡಾಂಗಣದಲ್ಲಿರುವ ಕ್ರಿಕೆಟ್ ವೀಕ್ಷಕರ ಕಾಳಜಿಯ ದೃಷ್ಟಿಯಿಂದ ಐಪಿಎಲ್ ಪಂದ್ಯಾವಳಿಯನ್ನು ಸದ್ಯಕ್ಕೆ ಮುಂದೂಡಿರುವುದಾಗಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಈ ಕುರಿತಾಗಿ ಆದೇಶ ಹೊರಡಿಸಿದ್ದಾರೆ.

ಐಪಿಎಲ್ ಪಂದ್ಯಾವಳಿಯು ಬಹುತೇಕ ಪ್ಲೇಆಫ್ ಹಂತವನ್ನು ತಲುಪಿತ್ತು. ಐಪಿಎಲ್ ಪಂದ್ಯಾವಳಿಯ ಬಾಕಿ ಉಳಿದ ಎಲ್ಲಾ 16 ಲೀಗ್ ಪಂದ್ಯಗಳು ಹಾಗೂ ಪ್ಲೇ ಆಫ್ ಪಂದ್ಯಗಳು ಸದ್ಯಕ್ಕೆ ರದ್ದುಗೊಂಡಿವೆ. ಲಖನೌದಲ್ಲಿ ಮೇ-9, 18ರಂದು, ಹೈದರಾಬಾದ್‌ನಲ್ಲಿ ಮೇ-10 ರಂದು, ಅಹಮದಾಬಾದ್‌ನಲ್ಲಿ ಮೇ-11, 14, ಮೇ-18ರಂದು, ದೆಹಲಿಯಲ್ಲಿ ಮೇ-11ರಂದು, ಚೆನ್ನೈಯಲ್ಲಿ ಮೇ-12ರಂದು, ಬೆಂಗಳೂರಿನಲ್ಲಿ ಮೇ-13, 17ರಂದು, ಮುಂಬೈ-ಮೇ-15 ಹಾಗೂ ಜೈಪುರದಲ್ಲಿ ಮೇ-16 ರಂದು ಲೀಗ್ ಹಂತದ ಪಂದ್ಯಗಳು ನಡೆಯಬೇಕಿತ್ತು. ಹಾಗೆಯೇ ಪ್ಲೇ ಆಫ್ ಪಂದ್ಯಗಳು ಹೈದರಾಬಾದ್‌ನಲ್ಲಿ ಮೇ-20, 21ರಂದು, ಕೋಲ್ಕತ್ತಾದಲ್ಲಿ ಮೇ-23ರಂದು ನಡೆದು, ಮೇ-25ರಂದು ಕೋಲ್ಕತ್ತಾದಲ್ಲೇ ಫೈನಲ್ ಪಂದ್ಯವೂ ನಡೆಯಬೇಕಿತ್ತು. ಬಿಸಿಸಿಐ ಮತ್ತು ಐಪಿಎಲ್ ಮಂಡಳಿಯ ಈ ಮಹತ್ವದ ನಿರ್ಧಾರವನ್ನು ಬಹುತೇಕ ಫ್ರಾಂಚೈಸಿಗಳು ಸ್ವಾಗತಿಸಿವೆ.

ಒಂದು ವಾರದ ಬಳಿಕ ಪುನಾರಂಭ?: ಐಪಿಎಲ್ ಟೂರ್ನಿಯ ಇನ್ನುಳಿದ ಭಾಗವನ್ನು ಕೇವಲ ಒಂದು ವಾರಕ್ಕೆ ಮಾತ್ರ ರದ್ದುಗೊಳಿಸಲಾಗಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಹೇಳಿದ್ದರೂ, ಸಂಬಂಧಿತ ಅಧಿಕಾರಿಗಳು ಮತ್ತು ಪಾಲುದಾರರೊಂದಿಗೆ ಸಮಾ ಲೋಚಿಸಿ ಪರಿಸ್ಥಿತಿಯ ಸಮಗ್ರ, ಮೌಲ್ಯಮಾಪನದ ನಂತರ, ಟೂರ್ನಿಯ ಇನ್ನುಳಿದ ಪಂದ್ಯಗಳಿಗೆ ದಿನಾಂಕ, ಸ್ಥಳಗಳು ಸೇರಿದಂತೆ ಹೊಸ ವೇಳಾಪಟ್ಟಿ ಪ್ರಕಟವಾಹಬಹುದು.

2021ರಲ್ಲೂ ಐಪಿಎಲ್ ತಾತ್ಕಾಲಿಕವಾಗಿ ರದ್ದಾಗಿತ್ತು..!

ಈ ಹಿಂದೆಯೂ 2021ರ ಮೇ ತಿಂಗಳಿನಲ್ಲಿ ಕೋವಿಡ್-19 ಹರಡಿದ್ದ ಕಾರಣಕ್ಕಾಗಿ ಮತ್ತು ಕೆಲವು ಆಟಗಾರರು ಕೋವಿಡ್ ಪೀಡಿತರಾದ ಕಾರಣ, 14ನೇ ಆವೃತ್ತಿಯ ಐಪಿಎಲ್ ಕೂಡಾ ತಾತ್ಕಾಲಿಕವಾಗಿ ರದ್ದಾಗಿತ್ತು. ಆ ವೇಳೆ ಒಟ್ಟು 60 ಪಂದ್ಯಗಳ ಪೈಕಿ 29 ಪಂದ್ಯಗಳು ಮುಗಿದಿದ್ದವು. ಮುಂದೆ 4 ತಿಂಗಳು ಕಳೆದಾಗ 2021ರ ಐಪಿಎಲ್ ಆವೃತ್ತಿಯು ಮುಂದುವರಿದು, ಅದೇ ಅಕ್ಟೋಬರ್‌ನಲ್ಲಿ ಫೈನಲ್ ಪಂದ್ಯವೂ ಯಶಸ್ವಿಯಾಗಿ ನಡೆದಿತ್ತು.

ಆರ್‌ಸಿಬಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನ

ಪ್ರತೀ ಸಲದಂತೆ ಈ ಸಲವೂ ಕಪ್ ನಮ್ದೇ ಎಂಬ ನಿರೀಕ್ಷೆಯಲ್ಲಿರುವ ಆರ್‌ಬಿಸಿ ಈ ಸಲ ಆರಂಭದಿಂದಲೂ ಉತ್ತಮವಾಗಿಯೇ ಆಡಿತ್ತು. ಈಗಾಗಲೇ ಒಟ್ಟು 11 ಪಂದ್ಯಗಳನ್ನು ಆಡಿರುವ ಬೆಂಗಳೂರು ತಂಡವು 8 ಪಂದ್ಯದಲ್ಲಿ ಗೆಲುವು ಸಾಧಿಸಿ, ಮೂರರಲ್ಲಿ ಸೋತು ಒಟ್ಟು 16 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. 8 ಪಂದ್ಯಗಳಲ್ಲಿ ಗೆದ್ದಿದ್ದರೂ ನೆಟ್ ರನ್ ರೇಟ್ ಆಧಾರದಲ್ಲಿ ಗುಜರಾತ್ ಟೈಟನ್ಸ್ ತಂಡವು ಅಂಕಪಟ್ಟಿಯಲ್ಲಿ ಸದ್ಯ ಮೊದಲ ಸ್ಥಾನದಲ್ಲಿದೆ. ಆರ್‌ಸಿಬಿಯಷ್ಟೇ 16 ಅಂಗಳನ್ನು ಗಳಿಸಿರುವ ಪಂಜಾಬ್ ಮೂರನೇ ಸ್ಥಾನದಲ್ಲಿದ್ದು, 14 ಅಂಕಗಳನ್ನು ಗಳಿಸಿರುವ ಮುಂಬೈ ನಾಲ್ಕನೇ ಸ್ಥಾನದಲ್ಲಿದೆ. ಲೀಗ್ ಹಂತದಲ್ಲಿ ಮೊದಲ ನಾಲ್ಕು ಸ್ಥಾನಗಳನ್ನು ಗಳಿಸುವ ತಂಡಗಳು ಐಪಿಎಲ್‌ನಲ್ಲಿ ಪ್ಲೇ ಆಫ್ ಸ್ಥಾನವನ್ನು ಗಿಟ್ಟಿಸುತ್ತದೆ.

ಆರ್‌ಸಿಬಿ ಟ್ವೀಟ್: ಐಪಿಎಲ್ 2025 ಪಂದ್ಯಾವಳಿ ರದ್ದು ತೀರ್ಮಾನ ಹೊರಬೀಳುತ್ತಿದ್ದಂತೇ ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಟ್ವೀಟ್ ಮಾಡಿರುವ ಆರ್‌ಸಿಬಿ, 'ಈ ರಾಷ್ಟ್ರೀಯ ಬಿಕ್ಕಟ್ಟಿನ ಸಮಯದಲ್ಲಿ, ನಮ್ಮ ಭಾರತೀಯ ಸಶಸ್ತ್ರ ಪಡೆಗಳ ಅಚಲ ಧೈರ್ಯ ಮತ್ತು ಶೌರ್ಯಕ್ಕೆ ನಾವು ತಲೆಬಾಗುತ್ತೇವೆ. ಭಾರತದ ಪ್ರತಿಯೊಬ್ಬರ ಸುರಕ್ಷತೆಗಾಗಿ ನಾವು ಪ್ರಾರ್ಥಿಸುತ್ತೇವೆ, ಜೈ ಹಿಂದ್' ಎಂದು ಹೇಳಿದೆ.

ವಿದೇಶಿ ಕ್ರಿಕೆಟ್ ಆಟಗಾರರು ಪಾಕ್ ತೊರೆಯುವ ನಿರ್ಧಾರದ ಹಿನ್ನೆಲೆ

ಪಾಕಿಸ್ತಾನ್ ಲೀಗ್ ಯುಎಇಗೆ ಸ್ಥಳಾಂತರ?

ಇಸ್ಲಾಮಾಬಾದ್: ಐಪಿಎಲ್ ಮಾದರಿ ಯಲ್ಲೇ ಪಾಕಿಸ್ತಾನದಲ್ಲಿ ನಡೆಯುತ್ತಿದ್ದ ಪಾಕಿಸ್ತಾನ್ ಸೂಪರ್ ಲೀಗ್ ಈಗ ಯುಎಇಗೆ ಸ್ಥಳಾಂತರ ಗೊಂಡಿದೆ. ಭಾರತ ಹಾಗೂ ಪಾಕಿಸ್ತಾನದ ನಡುವೆ ಬಿಗುವಿನ ವಾತಾವರಣ ನಿರ್ಮಾಣವಾದ ಹಿನ್ನೆಲೆಯಲ್ಲಿ ಭಾರತದ ದಾಳಿಗೆ ಪಾಕ್ ತತ್ತರಿಸಿ ಹೋಗಿದೆ, ಆ ಕಾರಣಕ್ಕೆ ಪಾಕಿಸ್ತಾನದಲ್ಲಿ ಇರುವ ವಿದೇಶಿ ಆಟಗಾರರು ಕಂಗಾಲಾಗಿ ಹೋಗಿದ್ದಾರೆ. ಹೀಗಾಗಿ, ಈ ಆವೃತ್ತಿಯ ಪಿಎಸ್‌ಎಲ್‌ನಲ್ಲಿ ಉಳಿದು ಕೊಂಡಿರುವ ಎಂಟು ಪಂದ್ಯಗಳು ಯುಎಇಗೆ ಸ್ಥಳಾಂತರಗೊಂಡಿವೆ.

ರಾವಲ್ಪಿಂಡಿ ಸ್ಟೇಡಿಯಂನಲ್ಲಿ ಕರಾಚಿ ಕಿಂಗ್ಸ್ ಹಾಗೂ ಪೇಶಾವರ್ ಜಲ್ಮಿ ಮಧ್ಯೆ ಗುರುವಾರ ಪಂದ್ಯ ನಡೆಯಬೇಕಿತ್ತು. ಆದರೆ ಸ್ಟೇಡಿಯಂ ಕಾಂಪ್ಲೆಕ್ಸ್ ಮೇಲೆ ಡ್ರೋನ್ ಉರುಳಿ ಬಿದ್ದಿದ್ದರಿಂದ ಪಂದ್ಯವನ್ನು ಮರು ನಿಗದಿ ಮಾಡಲಾಗಿದೆ. ಪಾಕ್ ಕ್ರಿಕೆಟ್ ಮಂಡಳಿಯ ಮುಖ್ಯಸ್ಥ ಮೋಹ್ಸಿನ್ ನಖ್ವಿ ಅವರು ತುರ್ತು ಸಭೆ ನಡೆಸಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಪಾಕಿಸ್ತಾನದಲ್ಲಿ ಉಳಿದುಕೊಂಡಿದ್ದ ವಿದೇಶಿ ಆಟಗಾರರು ಪಂದ್ಯವನ್ನು ತೊರೆಯುವ ನಿರ್ಧಾರಕ್ಕೆ ಬಂದಿರುವ ಕಾರಣಕ್ಕೆ ಪಂದ್ಯಗಳನ್ನು ಯುಎಇಗೆ ಸ್ಥಳಾಂತರ ಮಾಡುವ ನಿರ್ಧಾರ ಮಾಡಲಾಗಿದೆ ಎಂದೂ ಹೇಳಗಾಗುತ್ತಿದೆ.

ಪಾಕಿಸ್ತಾನ ಸೂಪರ್ ಲೀಗ್‌ನ ದಿನಾಂಕದಲ್ಲಿ ಹೆಚ್ಚು ವ್ಯತ್ಯಾಸ ಮಾಡುವ ಅವಕಾಶವೂ ಇಲ್ಲ, ಅದು ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿಗಳ ಮೇಲೆ ಪರಿಣಾಮ ಬೀರುತ್ತದೆ. ಪಿಎಸ್‌ಎಲ್ ಫೈನಲ್ ಪಂದ್ಯ ಮೇ 18ರಂದು ಕೊನೆಗೊಳ್ಳಬೇಕಿತ್ತು. ಆದರೆ ಈ ಪರಿಸ್ಥಿತಿಯಲ್ಲಿ ಫೈನಲ್ ವಿಳಂಬ ಆಗಲಿದೆ. ಈ ಟೂರ್ನಿಯ ಬಳಿಕ ಬಾಂಗ್ಲಾದೇಶ ತಂಡದವರು ಪಾಕಿಸ್ತಾನಕ್ಕೆ ಸರಣಿ ಆಡಲು ಹೋಗಲಿದ್ದಾರೆ. ಆದರೆ ಆ ಸರಣಿ ಬಗ್ಗೆ ಇನ್ನೂ ಪಾಕ್ ಯಾವುದೇ ನಿರ್ಧಾರ ತೆಗೆದು ಕೊಂಡಿಲ್ಲ, ಪರಿಸ್ಥಿತಿ ಹೀಗೆ ಮುಂದುವರಿದರೆ ಆ ಸರಣಿ ರದ್ದಾಗಲೂಬಹುದು.

ಶಾಂಘೈ ವಿಶ್ವಕಪ್ ಆರ್ಚರಿ: ಭಾರತದ ತಂಡಗಳಿಗೆ ನಿರಾಸೆ

ಶಾಂಘೈ: ಭಾರತದ ಪುರುಷರ ಮತ್ತು ಮಹಿಳಾ ತಂಡಗಳು ಇಲ್ಲಿ ನಡೆಯುತ್ತಿರುವ್ ವಿಶ್ವ ಕಪ್ ಸ್ಟೇಜ್-2 ಆರ್ಚರಿ ಟೂರ್ನಿಯಲ್ಲಿ ಪದಕದ ಸುತ್ತಿನಿಂದ ಗುರುವಾರ ಹೊರಬಿದ್ದಿವೆ. ಪುರುಷರ ತಂಡ ನಾಲ್ಕನೇ ಸ್ಥಾನ ಪಡೆದರೆ, ಮಹಿಳೆಯರ ತಂಡ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದಿದೆ.

ಧೀರಜ್ ಬೊಮ್ಮದೇವರ, ಅತನು ದಾಸ್ ಮತ್ತು ತರುಣದೀಪ್ ರೈ ಅವರನ್ನು ಒಳಗೊಂಡ ಏಳನೇ ಶ್ರೇಯಾಂಕದ ಪುರುಷರ ತಂಡ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಅಮೆರಿಕ ತಂಡದ (ಕ್ರಿಸ್ಟಿಯನ್ ಸ್ಟೊಡಾರ್ಡ್, ಬ್ರಾಡಿ ಎಲಿಸನ್, ಜಾಕ್ ವಿಲಿಯಮ್ಸ್) ಎದುರು 3-5ರಿಂದ ಸೋಲನುಭವಿಸಿತು. ಭಾರತ 56-57ರ ಅಲ್ಪ ಅಂತರದಲ್ಲಿ ಮೊದಲ ಸೆಟ್ ಸೋತಿತು. ಇದಕ್ಕೆ ಮೊದಲು ಭಾರತ ತೀವ್ರ ಹೋರಾಟ ಕಂಡ ಸೆಮಿಫೈನಲ್‌ನಲ್ಲಿ ಫ್ರಾನ್ಸ್ ಎದುರು 4-5 (25-26) ರಲ್ಲಿ ಸೋಲನುಭವಿಸಿ, ಕಂಚಿನ ಪದಕದ ಹಣಾಹಣಿಗೆ ಸೀಮಿತಗೊಂಡಿತ್ತು.

ಮಹಿಳೆಯರ ವಿಭಾಗದಲ್ಲಿ ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಅನ್ನಿಕಾ ಕುಮಾರಿ ಅವರನ್ನು ಒಳಗೊಂಡ ತಂಡ ಕ್ವಾಲಿಫಿಕೇಷನ್ ಹಂತದಲ್ಲಿ ಮೂರನೇ ಸ್ಥಾನ ಗಳಿಸಿ ಭರವಸೆ ಮೂಡಿಸಿತ್ತು. ಆದರೆ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ 14ನೇ ಶ್ರೇಯಾಂಕದ ಮೆಕ್ಸಿಕೊ ತಂಡದ ಎದುರು 4-5 ರಲ್ಲಿ (26-27) ಸೋಲನುಭವಿಸಿತು. ಅಗ್ರ ಕ್ರಮಾಂಕದ ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಕಾಂಪೌಂಡ್ ವಿಭಾಗದ ಫೈನಲ್ ತಲುಪಿದ್ದವು. ಭಾರತ ಶನಿವಾರ ನಡೆಯುವ ಫೈನಲ್‌ನ ಎರಡೂ ವಿಭಾಗಗಳಲ್ಲಿ ಮೆಕ್ಸಿಕೊ ತಂಡವನ್ನು ಎದುರಿಸಲಿದೆ.

ಐಪಿಎಲ್ ಇಂಗ್ಲೆಂಡ್‌ಗೆ ಸ್ಥಳಾಂತರವಾಗಲಿ

ಇಂಗ್ಲೆಂಡ್ ಮಾಜಿ ಕ್ರಿಕೆಟಿಗ ಮೈಕಲ್ ವಾನ್ ಸಲಹೆ

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಭಾರತ ಹಾಗೂ ಪಾಕಿಸ್ತಾನ ಗಡಿ ಭಾಗಗಳಲ್ಲಿ ಉಂಟಾಗಿರುವ ಉದ್ವಿಗ್ನತೆಯನ್ನು ಪರಿಗಣಿಸಿ ಐಪಿಎಲ್ ಅನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಬಿಸಿಸಿಐ ಅಧಿಕಾರಿಗಳು

ಹಾಗೂ ಸರ್ಕಾರಿ ಅಧಿಕಾರಿಗಳು ಆನ್‌ಲೈನ್ ಮೀಟಿಂಗ್‌ನಲ್ಲಿ ಚರ್ಚಿಸಿ ಅಂತಿಮವಾಗಿ ಈ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಆಟಗಾರರ ಸುರಕ್ಷತೆಯನ್ನು ಅತ್ಯಂತ ಮುಖ್ಯವೆಂದು ಪರಿಗಣಿಸಲಾಗಿದೆ. ಇದೀಗ ಇಂಗ್ಲೆಂಡ್ ತಂಡದ ಮಾಜಿ ನಾಯಕ ಮೈಕಲ್ ವಾನ್, ಟೂರ್ನಿಯ ಇನ್ನುಳಿದ ಪಂದ್ಯಗಳನ್ನು ಇಂಗ್ಲೆಂಡ್‌ನಲ್ಲಿ ಆಯೋಜಿಸಿ ಎಂದು ಆಗ್ರಹಿಸಿದ್ದಾರೆ. ಇಂಗ್ಲೆಂಡ್‌ನಲ್ಲಿಯೇ ಐಪಿಎಲ್ ಟೂರ್ನಿಯ ಇನ್ನುಳಿದ ಪಂದ್ಯಗಳನ್ನು ಪೂರ್ಣಗೊಳಿಸಲು ತಕ್ಕ ಸೂಕ್ತ ಮೈದಾನಗಳು ಮತ್ತು ಇತರ ಸೌಲಭ್ಯಗಳಿವೆ. ಭಾರತೀಯ ಆಟಗಾರರು ಟೆಸ್ಟ್ ಸರಣಿಗಾಗಿ ಅಲ್ಲಿಯೇ ಉಳಿಯಲು ಸಾಧ್ಯವಿರುವುದರಿಂದ ಇದು ನನ್ನದೊಂದು ಸಲಹೆ ಎಂದು ಮೈಕಲ್ ವಾನ್ ಟ್ವೀಟ್ ಮಾಡಿದ್ದಾರೆ.

ಐಪಿಎಲ್ ಪಂದ್ಯ ಶುಲ್ಕಕ್ಕೆ ಕತ್ತರಿ?

ದೆಹಲಿ: ಬಿಸಿಸಿಐಯು ಐಪಿಎಲ್ ಪಂದ್ಯಾವಳಿಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸುವ ನಿರ್ಧಾರಕ್ಕೆ ಬಂದಿದ್ದು, ಇಂತಹ ಪರಿಸ್ಥಿತಿಯಲ್ಲಿ ಸೀಸನ್ ಪೂರ್ಣಗೊಳ್ಳದ ಕಾರಣ ಆಟಗಾರರ ಸಂಬಳಕ್ಕೆ ಕತ್ತರಿ ಬೀಳುತ್ತಾ ಎಂಬ ಪ್ರಶ್ನೆಗಳು ಉದ್ಭವಿಸುತ್ತಿವೆ.

ಈ ಲೀಗ್‌ನಲ್ಲಿ ಭಾಗವಹಿಸುವ ಆಟಗಾರರು ಪ್ರತಿ ಸೀಸನ್‌ಗೂ ತಮಗೆ ನಿಗದಿಯಾದ ಸಂಬಳವನ್ನು ಪಡೆಯುತ್ತಾರೆ. ಅಂದರೆ ಒಬ್ಬ ಆಟಗಾರನನ್ನು 10 ಕೋಟಿ ರುಗೆ ಖರೀದಿಸಿದರೆ, ಅವನಿಗೆ ಪೂರ್ಣ 10 ಕೋಟಿ ರುಗಳನ್ನು ನೀಡಲಾಗುತ್ತದೆ. ಗಾಯದಿಂದಾಗಿ ಪಂದ್ಯಾವಳಿಯ ಮೊದಲು ಅಥವಾ ಸಮಯದಲ್ಲಿ ಟೂರ್ನಿಯಿಂದ ಹಿಂದೆ ಸರಿದ ಆಟಗಾರರ ವೇತನವನ್ನು ಮಾತ್ರ ಕಡಿತಗೊಳಿಸಲಾಗುತ್ತದೆ.

ಐಪಿಎಲ್ 2025ರ ಆರಂಭಕ್ಕೂ ಮೊದಲು ಇದೇ ಮೊದಲ ಬಾರಿಗೆ ಬಿಸಿಸಿಐ, ವೇತನದ ಜೊತೆಗೆ ಆಟಗಾರರಿಗೆ ಪಂದ್ಯ ಶುಲ್ಕವನ್ನು ನೀಡುವುದಾಗಿ ಘೋಷಿಸಿತ್ತು. ಈ ಪ್ರಕಾರ ಆಡುವ 11ರ ಬಳಗದಲ್ಲಿ ಸ್ಥಾನ ಪಡೆದ ಮತ್ತು ಇಂಪ್ಯಾಕ್ಟ್ ಆಟಗಾರರಿಗೆ 7.5 ಲಕ್ಷ ರು..ಗಳ ಪಂದ್ಯ ಶುಲ್ಕವನ್ನು ನೀಡಲಾಗುತ್ತಿತ್ತು. ಈ ಹಣವನ್ನು ಆಟಗಾರರ ಸಂಬಳದ ಜೊತೆಗೆ ನೀಡಬೇಕಾಗಿತ್ತು. ಆದರೆ ಲೀಗ್ ಅನ್ನು ಮಧ್ಯದಲ್ಲಿ ಸ್ಥಗಿತಗೊಳಿಸುವುದರಿಂದ ಪಂದ್ಯ ಶುಲ್ಕ ನಷ್ಟವಾಗಬಹುದು. ಆದರೆ, ಇಲ್ಲಿಯವರೆಗೆ ಆಡಿದ ಪಂದ್ಯಗಳಲ್ಲಿ ಆಡಿದ ಆಟಗಾರರಿಗೆ ಪಂದ್ಯ ಶುಲ್ಕವನ್ನು ಖಂಡಿತವಾಗಿ ಸಿಗಲಿದೆ.



ವಿಟಾಕೀಸ್

ಕಿಕ್ ನೀಡಲಿದೆ ಟಕಿಲಾ

ಈ ಹಿಂದೆ ಮೀಸೆಚಿಗುರಿದಾಗ ಸೇರಿದಂತೆ ಹಲವು ಚಿತ್ರಗಳನ್ನು ನಿರ್ದೇಶಿಸಿದ್ದ ಪ್ರವೀಣ್ ನಾಯಕ್ ಈಗ ಇಂದಿನ ಯುವ ಸಮೂಹಕ್ಕೆ ಹೊಂದುವ ಕಥೆಯನ್ನು ಹೊತ್ತು ಬಂದಿದ್ದಾರೆ. ಟಕಿಲಾ ಶೀರ್ಷಿಕೆಯಲ್ಲಿ ಸಿದ್ಧವಾಗಿರುವ ಈ ಚಿತ್ರ ಮುಂದಿನ ವಾರ ತೆರೆಗೆ ಬರಲಿದೆ. ಈಗಾಗಲೇ ಹಾಡುಗಳ ಮೂಲಕ ಸದ್ದು ಮಾಡುತ್ತಿರುವ ಟಕಿಲಾ ಚಿತ್ರದ ಕುರಿತಂತೆ ನಿರ್ದೇಶಕರು ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಟಕಿಲಾ ಶೀರ್ಷಿಕೆಯೇ ವಿಭಿನ್ನವಾಗಿದೆಯಲ್ಲ ?

ಪ್ರವೀಣ್ ನಾಯಕ್ : ಟಕಿಲಾ ಬೇಗ ಕಿಕ್ ನೀಡುತ್ತದೆ. ಹಾಗಾಗಿ ಈ ಶೀರ್ಷಿಕೆಯನ್ನೇ ಆಯ್ದುಕೊಂಡೆ. ಅಂದರೆ ಇತ್ತೀಚಿಗೆ ಪ್ರೀತಿಯ ಆಯಾಮವೇ ಬದಲಾಗಿದೆ. ಲವ್ ಅನ್ನುವುದು ಬಲು ಬೇಗ ಕಿಕ್ ನೀಡುತ್ತದೆ. ಬೆಳಗ್ಗೆ ಲವ್ ಆದರೆ ಸಂಜೆಗೆ ಪಬ್‌ನಲ್ಲಿರುತ್ತಾರೆ, ಮತ್ತೆ ಕೆಲವರು ಬ್ರೇಕ್ ಅಪ್ ಹಂತಕ್ಕೆ ಬರುತ್ತಾರೆ. ಅದನ್ನೇ ಈ ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಿದ್ದೇನೆ.

ವಿ.ಸಿ : ಇಲ್ಲಿ ಲವ್ ಬ್ರೇಕ್ ಅಪ್ ಕಥೆಯೇ ಮುಖ್ಯವಾಗಿದೆಯೆ?

ಪ್ರವೀಣ್ : ಇಲ್ಲಿ, ಪ್ರೀತಿಯ ಆಯಾಮ ಹೇಗೆ ಬದಲಾಗಿದೆ ಎಂಬುದನ್ನು ಹೇಳಿದ್ದೇನೆ. ಶೃಂಗಾರಭರಿತ ಪ್ರೀತಿ, ಸ್ವಾರ್ಥಭಾವದ ಪ್ರೀತಿ ಲವ್‌ನಲ್ಲಿ ಹಲವು ವಿಧಗಳನ್ನು ನೋಡಬಹುದು. ಇಂದು ಬಹುತೇಕರು, ಸ್ವಾರ್ಥಕ್ಕಾಗಿ ತಮ್ಮ ಪ್ರೀತಿಯನ್ನು ಬಳಸಿಕೊಳ್ಳುತ್ತಿದ್ದಾರೆ. ದುಡುಕಿನ ನಿರ್ಧಾರದಿಂದ ಬದುಕನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಲವ್ ಬ್ರೇಕ್‌ಅಪ್ ಆದಾಗ ಬಹುತೇಕರು ಕುಡಿತ, ಡ್ರಗ್ಸ್‌ನಂತಹ ದುಶ್ಚಟಗಳಿಗೆ ದಾಸರಾಗುತ್ತಾರೆ. ಇದರಿಂದ ತಮ್ಮ ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮಾನವ ಜೀವನ ಒಂದೇ ಬಾರಿ ಬರುವುದು ಅದನ್ನು ಹೇಗೆ ಸಂಭ್ರಮದಿಂದ ಬದುಕಬೇಕು ಎಂಬುದನ್ನು ಇಲ್ಲಿ ಎಲ್ಲರ ಮನಕ್ಕೆ ಮುಟ್ಟುವಂತೆ ತೆರೆಯಲ್ಲಿ ಕಟ್ಟಿಕೊಡಲಾಗಿದೆ.

ವಿ.ಸಿ: ಧರ್ಮ ಕೀರ್ತಿರಾಜ್ ಅವರನ್ನು ನಾಯಕನಾಗಿ ಆಯ್ದುಕೊಳ್ಳು ಕಾರಣ?

ಪ್ರವೀಣ್ : ನಾನು ಕಥೆ ಬರೆಯುವಾಗಲೇ ಪಾತ್ರಗಳು ನನ್ನ ಮನಸನ್ನು ಆವರಿಸಿದ್ದವು. ಚಿತ್ರಕ್ಕಾಗಿ ಒಂದು ಯಂಗ್ ಪೇರ್ ಅಗತ್ಯವಾಗಿತ್ತು, ಆಗ ಧರ್ಮ ಕೀರ್ತಿರಾಜ್ ಹೊಳೆದರು. ಅವರ ಕಣ್ ಕಣ್.. ಸಲಿಗೆ ಹಾಡು ನೋಡಿದ್ದೆ. ಟಕಿಲಾ ಚಿತ್ರಕ್ಕೆ ಅವರನ್ನೇ ಆಯ್ಕೆ ಮಾಡಿದೆ. ಅಂತೆಯೇ ನಾಯಕಿಯ ಪಾತ್ರ ಗ್ಲಾಮರಸ್ ಆಗಿತ್ತು. ನಿಖಿತಾ ಇದಕ್ಕೆ ಹೊಂದಿಕೊಳ್ಳುತ್ತಿದ್ದರು. ಅವರನ್ನು ನಾಯಕಿಯಾಗಿ ಆಯ್ಕೆಯಾದರು. ಉಳಿದಂತೆ ಕೋಟೆ ಪ್ರಭಾಕರ, ಸುಮಂತ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.

ವಿ.ಸಿ : ಇದು ಯುವಸಮೂಕ್ಕೆ ಸೀಮಿತವಾದ ಕಥೆಯೆ ?

ಪ್ರವೀಣ್ : ಇದು ಸತ್ಯವನ್ನು ಬಿಚ್ಚಿಡುವ ಸ್ಟೋರಿಯಾಗಿದ್ದು, ಯುವ ಸಮೂಹಕ್ಕೆ ಹೊಂದುವ ಕಥೆಯಾಗಿದೆ. ಮನರಂಜನೆಯ ಜತೆಗೆ ಇಂದಿನ ಎಲ್ಲಾ ಯುವ ಜನಾಂಗಕ್ಕೆ ಒಳ್ಳೆಯ ಸಂದೇಶವೂ ಅಡಕವಾಗಿದೆ. ಹಾಗಂತ ಅಷ್ಟಕ್ಕೆ ಸೀಮಿತವಾಗಿಲ್ಲ, ಎಲ್ಲರೂ ಕುಳಿತು ನೋಡಬಹುದಾದ ಕೌಟುಂಬಿಕ ಸ್ಟೋರಿಯೂ ಇಲ್ಲಿದೆ.

ಮಾನಸಿಕ ತೊಳಲಾಟದಿಂದ ಬಳಲುತ್ತಿದ್ದ ಹಲವರನ್ನು ನಾನು ನೋಡಿದ್ದೆ. ಅಂತಹವರಿಗೆ ಸಲಹೆಯನ್ನು ನೀಡುತ್ತಿದ್ದೆ. ಹೀಗಿರುವಾಗಲೇ ಕೆಲವರು ಯಾಕೆ ದುಶ್ಚಟಗಳಿಗೆ ದಾಸರಾಗುತ್ತಾರೆ, ಅದಕ್ಕೆ ಕಾರಣ ಏನು ಎಂದು ಯೋಚಿಸಿದಾಗ ಹಲವು ಕಾರಣಗಳು ತಿಳಿದವು. ಅದೇ ವಿಚಾರವನ್ನು ಆಧರಿಸಿ ಈ ಚಿತ್ರದ ಕಥೆ ಹೆಣೆದು ನಿರ್ದೇಶಿಸಿದ್ದೇನೆ.

ಜಾವ ಏರಿದ ರಾಜವರ್ಧನ

ಹಿರಿಯ ನಟ ಡಿಂಗ್ರಿ ನಾಗರಾಜ್ ಪುತ್ರ ನಟ ರಾಜವರ್ಧನ್ ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸಿ ಮನಗೆದ್ದಿದ್ದಾರೆ, ಈಗ ಚಂದನವನದಲ್ಲಿ ನಿರ್ಮಾಪಕರಾಗಿಯೂ ಹೆಜ್ಜೆ ಇಡುತ್ತಿದ್ದಾರೆ. ಬರ್ನ್ ಸ್ವಲ್ಲೊ ಕಂಪನಿ ಎಂಬ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿದ್ದು ಈ ಬ್ಯಾನರ್‌ನಲ್ಲಿ ಹಲವು ಸಿನಿಮಾಗಳನ್ನು ನಿರ್ಮಾಣ ಮಾಡಲು ಸಿದ್ಧತೆ ನಡೆದಿದ್ದಾರೆ. ಇದರ ಮೊದಲ ಭಾಗವಾಗಿ ಜಾವಾ ಎಂಬ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಸದ್ಯ ಈ ಚಿತ್ರದ ಟೈಟಲ್ ರಿಲೀಸ್ ಆಗಿದೆ. ಈ ಚಿತ್ರವನ್ನು ದೇವಚಕ್ರವರ್ತಿ ನಿರ್ದೇಶನ ಮಾಡುತ್ತಿದ್ದು, ರಾಜವರ್ಧನ್ ನಾಯಕನಾಗಿ ಮಿಂಚಲಿದ್ದಾರೆ. ರಾಗಿಣಿ ದ್ವಿವೇದಿ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ನಿರ್ದೇಶಕರು ನನಗೆ ಬಂದು ಕಥೆ ಹೇಳಿದಾಗ ಕಥೆಯ ಜತೆಗೆ ಅವರು ಚಿತ್ರಕ್ಕೆ ಮಾಡಿಕೊಂಡಿದ್ದ ಪೂರ್ವ ತಯಾರಿ ಕಂಡು ಖುಷಿಯಾಯಿತು. ಸಿನಿಮಾ ನಟಿಯ ಬದುಕಿನ ಸುತ್ತ ಸಾಗುವ ಕಥೆ ಇದಾಗಿದೆ. ಚಿತ್ರದಲ್ಲಿ ನನ್ನದು ಚಾಲೆಂಜಿಂಗ್ ಪಾತ್ರವಾಗಿದೆ. ರಾಜವರ್ಧನ್ ಅವರ ನಿರ್ಮಾಣದ ಸಂಸ್ಥೆಯ ಚಿತ್ರದಲ್ಲಿ ಅಭಿನಯಿಸುತ್ತಿರುವುದು ಸಂತಸ ತಂದಿದೆ ಎಂದು ರಾಗಿಣಿ ಹೇಳಿದರು. ಬಿರುಗಾಳಿಯಿಂದ ತಪ್ಪಿಸಿಕೊಂಡು ಓಡಿ ಬರುತ್ತಿರುವ ಹುಡುಗನೊಬ್ಬನ ಜಾವಾ ಪೋಸ್ಟರ್ ಕುತೂಹಲ ಮೂಡಿಸಿದೆ. ಜುಲೈನಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಪೂರ್ಣಚಂದ್ರ, ತೇಜಸ್ವಿ ಸಂಗೀತವನ್ನು ನೀಡುತ್ತಿದ್ದು, ಕೆ.ಎಂ.ಪ್ರಕಾಶ್ ಸಂಕಲನ ಈ ಚಿತ್ರಕ್ಕಿದೆ.

ನೈಜ ಘಟನೆಗಳನ್ನು ಆಧರಿಸಿ ಚಿತ್ರದ ಕಥೆ ಹೆಣೆಯಲಾಗಿದ್ದು, ಜಾವಾ ಚಿತ್ರದ ಮೂಲಕ ಒಂದು ಗಟ್ಟಿ ಕಥೆಯನ್ನು ಪ್ರೇಕ್ಷಕರ ಮುಂದೆ ಇಡಲಿದ್ದೇವೆ. ಎಂಬತ್ತರ ಕಾಲಘಟ್ಟದಲ್ಲಿ ಚಿತ್ರರಂಗದಲ್ಲಿ ನಡೆದಂತಹ ನೈಜ ಘಟನೆ ಇಲ್ಲಿದ್ದು, ನಟಿಯ ಬದುಕಿನ ಸುತ್ತ ಸಾಗುವ ಈ ಕಥಾ ಎಳೆ ಹಲವು ಘಟನೆಗಳಿಗೆ ಸಾಕ್ಷಿಯಾಗುವಂತಿದೆ. ಎರಡು ವರ್ಷಗಳ ಕಾಲ ಈ ಕಥೆಯ ಪೂರ್ವ ತಯಾರಿ ಮಾಡಿಕೊಂಡು ಜಾವಾ ಎನ್ನುವ ಶೀರ್ಷಿಕೆ ಇಟ್ಟುಕೊಂಡು ಚಿತ್ರೀಕರಣಕ್ಕೆ ಹೊರಡಲು ಸಿದ್ದರಾಗಿದ್ದೇವೆ. ಚಿತ್ರದಲ್ಲಿ ನಟ ರಾಜವರ್ಧನ್ ಪಾತ್ರ ಎಷ್ಟು ವಿಶೇಷವೋ , ಅಷ್ಟೇ ಕುತೂಹಲಕಾರಿ ಪಾತ್ರದಲ್ಲಿ ನಟಿ ರಾಗಿಣಿ ಕಾಣಿಸಿಕೊಳ್ಳಲಿದ್ದಾರೆ.

-ದೇವಚಕ್ರವರ್ತಿ ನಿರ್ದೇಶಕ

ನಮ್ಮ ಇಡೀ ಕುಟುಂಬ ಕಲಾ ಸೇವೆಗೆ ಮುಡುಪಾಗಿದೆ. ನಮ್ಮ ತಂದೆ ಡಿಂಗ್ರಿ ನಾಗರಾಜ್ ನಲವತ್ತು ವರ್ಷಗಳಿಂದ ಸಿನಿಮಾ, ಧಾರಾವಾಹಿಗಳಲ್ಲಿ ನಟಿಸುವುದರ ಜತೆಗೆ ಒಂದಷ್ಟು ಸಿನಿಮಾಗಳನ್ನು ನಿರ್ಮಿಸಿ, ನಿರ್ದೇಶಿಸಿ ಪ್ರೇಕ್ಷಕರನ್ನ ರಂಜಿಸುತ್ತ ಮನಗೆದ್ದಿದ್ದಾರೆ. ನಾನು ಕೂಡ ಚಿತ್ರರಂಗದಲ್ಲಿ ನಟನಾಗಿ ಗುರುತಿಸಿಕೊಂಡಿದ್ದೇನೆ. ಎರಡು ವರ್ಷಗಳ ಹಿಂದೆ ಪೂರ್ವ ತಯಾರಿ ಮಾಡಿಕೊಂಡು ನನ್ನದೇ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿದ್ದೇನೆ. ಈಗ ಇದೇ ಪ್ರೊಡಕ್ಷನ್ ಹೌಸ್ ಮೂಲಕ ಜಾವಾ ಎಂಬ ಚಿತ್ರವನ್ನು ನಿರ್ಮಿಸುವುದರ ಜತೆಗೆ ನಾಯಕನಾಗಿಯೂ ಅಭಿನಯಿಸಿದ್ದೇನೆ. ಎಂಬತ್ತರ ಕಾಲಘಟ್ಟದಲ್ಲಿ ಚಿತ್ರರಂಗದಲ್ಲಿ ನಡೆದಂತಹ ಘಟನೆ ಹಲವರಿಗೆ ತಿಳಿದಿಲ್ಲ. ಇಂತಹ ಇಂಟರೆಸ್ಟಿಂಗ್ ಕಥೆಯನ್ನು ಜಾವ ಸಿನಿಮಾದ ಮೂಲಕ ಹೇಳುವ ಪ್ರಯತ್ನ ಮಾಡಲಾಗುತ್ತಿದೆ.

-ರಾಜವರ್ಧನ್ ನಟ, ನಿರ್ಮಾಪಕ

ದಿ ಗೆ ಸೆನ್ಸಾರ್ ಅಸ್ತು

ವಿನಯ್ ವಾಸುದೇವ್ ನಿರ್ದೇಶಿಸಿ ನಾಯಕನಾಗಿಯೂ ನಟಿಸಿರುವ ದಿ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ತೆರೆಗೂ ಸಿದ್ಧವಾಗಿದೆ. ಈ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರ ನೀಡಿದೆ. ಹೊಸ ತಂಡದ ಹೊಸಪ್ರಯತ್ನವಾಗಿರುವ ಈ ಚಿತ್ರ ಮೇ 16 ರಂದು ಬಿಡುಗಡೆಯಾಗಲಿದೆ. ಈಗಾಗಲೇ ರಿಲೀಸ್ ಚಿತ್ರದ ಟೀಸರ್, ಪೋಸ್ಟರ್‌ಗಳು ಕುತೂಹಲ ಮೂಡಿಸಿದ್ದು, ಸಿನಿಪ್ರಿಯರ ಮನಗೆದ್ದಿದೆ. ವಿನಯ್ ವಾಸುದೇವ್‌ಗೆ ಜತೆಯಾಗಿ ದಿಶಾ ರಮೇಶ್ ಬಣ್ಣಹಚ್ಚಿದ್ದಾರೆ. ಉಳಿದಂತೆ ಹರಿಣಿ ಶ್ರೀಕಾಂತ್, ನಾಗೇಂದ್ರ ಅರಸ್, ಕಾಮಿಡಿ ಕಿಲಾಡಿ ಚಂದ್ರು, ಡಾಲಾ ಶರಣ್, ಕಲಾರತಿ ಮಹಾದೇವ ಮುಂತಾದವರು ತಾರಾಗಣ ದಲ್ಲಿದ್ದಾರೆ. ವಿ.ಡಿ.ಕೆ ಸಿನಿಮಾಸ್ ಲಾಂಛನದಲ್ಲಿ ದಿ ನಿರ್ಮಾ ಣವಾಗಿದೆ. ಅಲೆನ್ ಭರತ್ ಛಾಯಾಗ್ರಹಣ, ಯು. ಎಂ ಸ್ಟೀವನ್ ಸತೀಶ್ ಸಂಗೀತ ನಿರ್ದೇಶನ ಹಾಗೂ ಸಿದ್ಧಾರ್ಥ್ ಆರ್ ನಾಯಕ್ ಸಂಕಲನ ಈ ಚಿತ್ರಕ್ಕಿದೆ.

ವಿನಯ್ ರಾಜ್‌ಕುಮಾರ್‌ಗೆ ಸಿಟಿಲೈಟ್ಸ್ ಉಡುಗೊರೆ

ದೊಡ್ಮನೆ ಮೊಮ್ಮಗ ವಿನಯ್ ರಾಜ್ ಕುಮಾರ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ವಿನಯ್, ಸಿಟಿ ಲೈಟ್ಸ್ ಚಿತ್ರದಲ್ಲಿ ಅಭಿನಯಿಸುತ್ತಿದ್ದು ಚಿತ್ರತಂಡ ಬರ್ತ್‌ಡೇ ಪ್ರಯುಕ್ತ ಮೇಕಿಂಗ್ ವಿಡಿಯೊ ರಿಲೀಸ್ ಮಾಡಿದೆ. ಇದರಲ್ಲಿ ವಿನಯ್ ಶೂಟಿಂಗ್ ಸೆಟ್‌ನಲ್ಲಿ ಹೇಗಿರುತ್ತಾರೆ, ನಟನೆಯಲ್ಲಿ ಹೇಗೆ ತೊಡಗಿಸಿಕೊಳ್ಳುತ್ತಾರೆ ಪ್ರತಿ ಸನ್ನಿವೇಶವನ್ನು ಎಷ್ಟು ಕಾತರದಿಂದ ನೋಡುತ್ತಾರೆ ಎಂಬ ಝಲಕ್ ಈ ಮೇಕಿಂಗ್ ವಿಡಿಯೊದಲ್ಲಿದೆ. ಸಿಟಿ ಲೈಟ್ಸ್ ಶೀರ್ಷಿಕೆಯ ಲ್ಲಿಯೇ ಗಮನಸೆಳೆದಿತ್ತು. ಅದರಲ್ಲಿಯೂ ಈ ಹಿಂದೆ ಬಿಡುಗಡೆಯಾದ ಫಸ್ಟ್ ಲುಕ್ ಪೋಸ್ಟರ್ ಕುತೂಹಲವನ್ನು ದುಪ್ಪಟ್ಟುಗೊಳಿಸಿತ್ತು. ಬದುಕು ಕಟ್ಟಿಕೊಳ್ಳಲು ಬೆಂಗಳೂರಿಗೆ ಬರುವ ಬಡವರು ಇಲ್ಲಿ ಯಾವೆಲ್ಲಾ ಸಂಕಷ್ಟಗಳನ್ನು ಎದಿರಿಸುತ್ತಿದ್ದಾರೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗುತ್ತಿದೆ. ದುನಿಯಾ ವಿಜಯ್ ಕಥೆ ಬರೆದು ಈ

ಚಿತ್ರವನ್ನು ನಿರ್ದೇಶಿಸುತ್ತಿದ್ದು, ವಿನಯ್ ಈ ಚಿತ್ರದಲ್ಲಿ ವಿಭಿನ್ನ ಗೆಟಪ್‌ನಲ್ಲಿ ಮಿಂಚಿದ್ದಾರೆ. ಮಾರಮ್ಮ ದೇವಿಯನ್ನು ಆರಾಧಿಸುವ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ದುನಿಯಾ ವಿಜಯ್ ಪುತ್ರಿ ಮೋನಿಷಾ ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದು, ಈ ಚಿತ್ರದ ಮೂಲಕ ಚಂದವನಕ್ಕೆ ಎಂಟ್ರಿಕೊಡುತ್ತಿದ್ದಾರೆ. ಭೀಮ ಚಿತ್ರದ ಬಳಿಕ ದುನಿಯಾ ವಿಜಯ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದು ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಸದ್ಯ ಚಿತ್ರದ ಶೂಟಿಂಗ್ ಭರದಿಂದ ಸಾಗಿದ್ದು, ಈ ವರ್ಷವೇ ಸಿಟಿ ಲೈಟ್ಸ್ ತೆರೆಗೆ ಬರಲಿದೆ. ವಿನಯ್ ಈ ಚಿತ್ರದ ಜತೆಗೆ ಗ್ರಾಮಾಯಣ ಚಿತ್ರದಲ್ಲಿಯೂ ಅಭಿನಯಿಸುತ್ತಿದ್ದಾರೆ. ಗ್ರಾಮಾಯಣ ಶೀರ್ಷಿಕೆಯೇ ಹೇಳುವಂತೆ ಗ್ರಾಮೀಣ ಭಾಗದಲ್ಲಿ ಚಿತ್ರದ ಕಥೆ ಸಾಗಲಿದೆ. ಈ ಸಿನಿಮಾಗಳ ಜತೆಗೆ ಅಂದೊಂದಿತ್ತು ಕಾಲ ಚಿತ್ರದಲ್ಲಿಯೂ ವಿನಯ್ ರಾಜ್‌ಕುಮಾರ್ ಅಭಿನಯಿಸಿದ್ದು ರೆಟ್ರೋ ಲುಕ್‌ನಲ್ಲಿ ಸಾಗುವ ನವಿರಾದ ಲವ್ ಸ್ಟೋರಿ ಸಿನಿಮಾದಲ್ಲಿದೆ. ಈ ಚಿತ್ರ ಇನ್ನೇನು ತೆರೆಗೆ ಬರಲಿದೆ.